Registered No. M. 1393.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೨ | ಮಂಗಳೂರು, ೧೯೪೦ನೇ ಇಸವಿ ಆಗೋಸ್ತು ತಾರೀಕು ೬ನೇ ಮಂಗಳವಾರ | ಸಂಚಿಕೆ ೩೭
VOL. XXII | MANGALORE, TUESDAY, AUGUST 6, 1940 | NO. 37

ಅಮೃತಾಂಜನ

(Regd.)

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಪ್ಲಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೀನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

AMRUTANJAN DEPOTS · BOMBAY. MADRAS. CALCUTTA.

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ——ಮದ್ರಾಸ್——ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE

Bombay Life Assurance Co., Ltd.

BATTLE OF LIFE

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit.

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

PLEASE MAKE HASTE AND WRITE TO US FOR YOUR REQUIREMENTS TO-DAY ALONE.

KOCHIKAR BROTHERS, LTD.,

Madras Branch Secretaries & Chief Agents for Bombay City and Suburbs,

The Bombay Life Bldg., Sir Lalubhai Samaldas Road, Gandhi Nagar, UDIPI

OR ANY OF OUR FOLLOWING OFFICES AT:

1. Mount Road, Madras
2. Bangalore City
3. Bombay No. 4
4. Calicut
5. Trivandrum
6. Mangalore

ಒಂದರ ಕಥೆ:

ನಪ್ಪ

ದಲ್ಲಿ ಕ
ನಿಂದ ಬ
ತಾ
ತಂದೆ ಇಲ್ಲಿ ಸ
ಹೀಗಾಗಿ ಪ್ರೇಮ
ನೋಡಿ ಅವಳು ಎಷ್ಟೊ
ಡಿಗೆ ನುಸುಳಿದಳು.

'ಮಗು! ನಿನಗೀ ಗೊಂಬೆಯಾದೀತೇ?'—ಅಂಗಡಿಯವನು ಕೇಳಿದ.

'ಅದು ಬೇಡ. ಕಣ್ಣು 'ಪಿಳಿ ಪಿಳಿ'ಮಾಡುವ, ಒಳ್ಳೇ ಗೊಂಬೆ ಬೇಕು!'

'ಇದೋ! ಈ ಗೊಂಬೆಯ ಕಣ್ಣು 'ಪಿಳಿ ಪಿಳಿ'ಯಾಗುತ್ತಿದೆ; ತಲೆಗೆ ಜರಿ ಟೊಪ್ಪಿ ಇದೆ; ನೀಲಿ ಬಣ್ಣದ ಗೌನ್ ಇದೆ; ಬಿಳೇ ಬೂಟ್ಸ್ ಇದೆ;—ಇದಾಗದೇ ಮಗು?'

ಪ್ರೇಮ ಗೊಂಬೆಯನ್ನು ಏಳಿದುಕೊಂಡು ತಂದೆಯ ಬಳಿಗೋಡಿದಳು. ತಂದೆ ಪ್ರೇಮ ನೊಡನೆ ಅಲ್ಲಿಗೆ ಬಂದಿದ್ದ ಗೊಂಬೆಯಂಗಡಿಯ ನವುಕರನೊಡನೆ 'ಇದಕ್ಕೇನು ಬೆಲೆ?' ಎಂದು ವಿಚಾರಿಸಿದರು.

'ನಾಲ್ಕು ರೂಪಾಯಿ ಹದಿಮೂರು ಆಣೆ!'

'ಬಹಳ ಹೆಚ್ಚು! ಬಹಳ ಹೆಚ್ಚು. ಇದೆಂಥ ಗೊಂಬೆಯಯ್ಯ?'

'ಒಳ್ಳೇ ಅಂದದ ಬಾಳಿಕೆಯ ಗೊಂಬೆ. ಒಡೆಯದು—ಕೆಳಗೆ ಬಿದ್ದರೆ!'

'ಪ್ರೇಮ! ಇನ್ನು ಯಾವುದಾದರೂ ಗೊಂಬೆಯನ್ನು ತೆಗೆದುಕೊಳ್ಳಮ್ಮ.'

'ಇನ್ನಾವುದೂ ನನಗೆ ಬೇಡಪ್ಪ. ಇದೇ ಬೇಕು. ಇದೆಷ್ಟು ಮುದ್ದಾಗಿದೆ, ನೋಡು! ಈ ಮಗು ನಿನ್ನನ್ನೇ ದೃಷ್ಟಿಸಿ ನೋಡುತ್ತಿದೆಯಲ್ಲವೇ? ಇದಕ್ಕೆ ಈ ಅಂಗಡಿ ಬೇಡವಂತೆ; ನಮ್ಮೊಟ್ಟಿಗೇ ಬರುವುದಂತೆ ಕಾರಿನಲ್ಲಿ ನಮ್ಮ ಮನೆಗೆ.'

'ನೀನು ಹುಚ್ಚು ಹುಡುಗಿ; ಇದು ಮಗುವೇ?'

'ಹೌದು; ಇದು ಮಗು. ಇದಕ್ಕೆ ಉಣಿಸ ಬೇಕು; ಸ್ನಾನ ಮಾಡಿಸಬೇಕು; ಕಥೆ ಹೇಳ ಬೇಕು; ನನ್ನೊಂದಿಗೆ ಶಾಲೆಗೆ ಕರೆದುಕೊಂಡು ಹೋಗಬೇಕು.'

ಲಮ್ಮ ಒಂದು ಕೈಚೀಲದಲ್ಲಿ
ರಿ ತುಂಬಿಕೊಂಡು ಬಂದರು.
ಕಂಡು, 'ನಿಮ್ಮ ಸಂಭ್ರಮದ
ವಿನ್ನೂ ಮುಗಿದಿಲ್ಲವೇ? ಬೇಗ ಮುಗಿಸಿ;
ಕಡೆಗೆ ಬನ್ನಿ!' ಎಂದು ಹಂಗಿಸಿದರು.
ರೆ! ಪ್ರೇಮಾ!' ಎಂದು ಮಗಳನ್ನೂ ಕರೆ
ದರು.

ಪ್ರೇಮ ತಾಯೊಂದಿಗೆ ಹೋಗುತ್ತ ತನ್ನ ಗೊಂಬೆ ಮಗುವಿನ ವರ್ಣನೆಗೆ ತೊಡಗಿದಳು. 'ಅಮ್ಮಾ! ಈ ಮಗುವಿಗೆ ಹೆಸರೇನು? ನಿನಗೆ ಗೊತ್ತೇ?' ಎಂದು ಕೇಳಿದಳು.

'ಆಗಲೇ ಹೆಸರನ್ನೂ ಇಟ್ಟಿದ್ದೀಯಾ?'

'ಹೌದು—ಮೇರಿ.'

'ಮೇರಿ? ಅದೇ ಹೆಸರೆಂದು ನಿನಗೆ ಹೇಳಿದ್ದು ಯಾರು?'

'ಆ ಗೊಂಬೆಯೇ ನನ್ನ ಕಿವಿಯಲ್ಲಿ ಹೇಳಿದ್ದು'

'ಮೇರಿ ಎಂಬ ಹೆಸರಿನ ಅರ್ಥ?'

'ಗೊತ್ತಿಲ್ಲ. ಅದು ಕಿರಿಸ್ತಾನರ ಹೆಸರು. ಈ ಮಗುವಿನ ಉಡುಪೂ ಹಾಗೇ ಇದೆ.'

ಅವರಿಬ್ಬರೂ ಕಾರಿನ ಬಳಿಗೆ ಬಂದಾಗ ಪ್ರೇಮ 'ಈ ಮಗುವಿಗಿನ್ನು ಒಂದು ಚಿಕ್ಕ ಗಾಡಿಯಾಗಬೇಕು; ಒಂದು ಹಾಸಿಗೆಯಾಗಬೇಕು; ಒಂದು ತೊಟ್ಟಿಲಾಗಬೇಕು' ಎಂದಳು.

ಇಷ್ಟರಲ್ಲಿ ರಾಯರು ೬ ಸೂಟ್ ಕೇಸ್‌ಗಳನ್ನು ಒಬ್ಬ ಕೂಲಿಯವನ ತಲೆಯ ಮೇಲೆ ಹೊರಿಸಿಕೊಂಡು ಬಂದು 'ನೋಡೇ! ಇದರಲ್ಲಿ ಯಾವುದಾದೀತು, ಹೇಳು' ಎಂದರು.

'ಆ ಆರನ್ನೂ ಒಟ್ಟಿಗೇ ಕೊಳ್ಳಬಾರದೇ? ಈ ಸಂತೆ ಹರವಲಿಕ್ಕೆ ಮನೆಯೂ ದೊಡ್ಡದಾಗಿದೆಯಲ್ಲ!'

'ನಿನ್ನ ತರಕಾರೀ ವ್ಯಾಪಾರ ಮುಗಿಯಿತೇ?'

'ನಾನೇನು ಇಡೀ ಮಾರ್ಕೆಟಿನ ತರಕಾರಿಯನ್ನೇ ಕೊಳ್ಳಲು ಬಂದವಳೇ?'

ರಾಯರಿಗೆ ಹೆಂಡತಿಯ ಸಿಡಿಸಿಡಿಯ ವಿಚಾರ ತಿಳಿಯಿತು. ಅವರು ಮರುಮಾತಾಡದೆ ಅಂಗಡಿಗೆ ಹೋಗಿ ತಮಗೆ ಬೇಕಾದ ಒಂದು 'ಸೂಟ್ ಕೇಸ'ನ್ನು ಕೊಂಡುಕೊಂಡು ಹಿಂದಿರುಗಿದರು. ಆದರೆ ಕಮಲಮ್ಮ ಆ 'ಸೂಟ್ ಕೇಸ'ನ್ನು ಕಾರಿನೊಳಗೆ ಇರಿಸಲು ಬಿಡಲಿಲ್ಲ. 'ಇಲ್ಲಿ ತರಕಾರಿ ಇದೆ ನಾವಿಬ್ಬರೂ ಕೂತ್ತೇವೆ. ಅದನ್ನು ಲಗೇಜ್ ಇಡುವಲ್ಲಿ, ಹೊರಗಡೆ ಕಾರಿನ ಹಿಂದುಗಡೆ ಕಟ್ಟಬಾರದೇ? ಅದಕ್ಕೇನು ಧಾಡಿ ಬಡೆದೀತು? ಅದಕ್ಕೆ ಎತಕ್ಕೆ ಇಷ್ಟೆಲ್ಲಾ ಉಪಚಾರ?' ಎಂದು ಜರಿದುಬಿದ್ದರು.

ರಾಯರು ನಿರುಪಾಯರಾಗಿ 'ಸೂಟ್ ಕೇಸ್'ನ್ನು ಕಾರಿನ ಹಿಂದುಗಡೆ ಕಟ್ಟಿದರು. ಕಾರು ಹೊರಟಿತು. ಹಾಗೇ ಅದು ಸಮುದ್ರ ತೀರದ ಕಡೆಗೂ ತಿರುಗಿತು. ಹಾಗೆ ಅದು ಅತ್ತ ಬರುವಾಗ ಅಲ್ಲಿ ಟ್ರೈನುಗಳು ದಾಟುತ್ತಿದ್ದುವು. ಗೇಟುಗಳನ್ನು ಮುಚ್ಚಿದ್ದರು. ಅಲ್ಲಿ ನೂರಾರು ಮಂದಿಯೂ, ಹಲವು ಕಾರು, ರಿಕ್ಷಾ, ಟಾಂಗಾಗಳೂ ಗುಂಪು ಕೂಡಿ ನಿಂತಿದ್ದುವು. ಅದರ ಜತೆಯಲ್ಲಿಯೇ, ರಾಯರೂ ತಮ್ಮ ಕಾರನ್ನೂ ನಿಲ್ಲಿಸ ಬೇಕಾಯಿತು. ನಿಲ್ಲಿಸಿದರು.

'ಪ್ರೇಮಾ! ಆಗಿನಿಂದಲೂ ನೀನು ಗೊಂಬೆಯನ್ನು, ಕಾರಿನ ಹೊರಗಡೆ ಕೈ ನೀಡಿ ಹಿಡಿದು ಆಡುತ್ತಿದ್ದೀಯೇ. ಹಾಗೆ ಮಾಡಿದರೆ ಅದು ಬಿದ್ದು ಗಿದ್ದು ಹೋದೀತು. ಆ ಮೇಲೆ ನಿನಗೆ ಬೇರೆ ಗೊಂಬೆ ತೆಗೆಸಿಕೊಡುವ ಹಾಗಿಲ್ಲ, ನೋಡಿಕೋ!' ಎಂದರು ಕಮಲಮ್ಮ ಜೋರಾಗಿ.

ಟ್ರೈನುಗಳು ದಾಟಿದವು. ಗೇಟಿನ ಬಳಿ ಇದ್ದ ಜನರೂ, ವಾಹನಗಳೂ ಸರಿಯಲಾರಂಭಿಸಿದವು. ರಾಯರ ಕಾರೂ ಹೊರಟಿತು. ಆದು ಹೊರಟ ಮರುಕ್ಷಣದಲ್ಲಿ ಆ ಗೊಂಬೆ ಪ್ರೇಮನ ಕೈ ತಪ್ಪಿ ಕೆಳಗೆ ಬಿತ್ತು. 'ಗೊಂಬೆ! ಗೊಂಬೆ!' ಎಂದು ಕೂಗಿದಳು. ರಾಯರು ಕಾರು ನಿಲ್ಲಿಸಿ ಹಿಂದಕ್ಕೆ ನಡೆದು, ಆ ಗೊಂಬೆಯ ನಜ್ಜುಗುಜ್ಜಾದ ಭಾಗಗಳನ್ನು ಹೆಕ್ಕಿ ತೆಗೆದುಕೊಂಡು ಬಂದರು. ಗೊಂಬೆ ಪುಡಿಯಾಗಿದೆ ಎಂದರು.

ಪ್ರೇಮ:—'ನನ್ನ ಮೇರಿ ಎಲ್ಲಿ?'

ರಾಯರು:—'ನಿನ್ನ ಮೇರಿ ಕೆಳಗೆ ಬಿದ್ದ ಮೇಲೆ ೧೦–೨೦ ಕಾರುಗಳು ಆ ಗೊಂಬೆಯ ಮೇಲೆ ಹಾದು, ಪುಡಿಪುಡಿಯಾಗಿ ಹೋಗಿದೆ. ಇಲ್ಲಿ ನೋಡು, ಅದರ ಜರಿ ಟೊಪ್ಪಿ, ಬೂಟ್ಸ್!'

ಪ್ರೇಮ:—'ಇವು ಮೇರಿಯದಲ್ಲ. ಮೇರಿ ಇಲ್ಲೆಲ್ಲೋ ಅಡಗಿ ಕೂತಿರಬೇಕು'.

ಕಮಲ:—'ಎಷ್ಟೇ ನಿನ್ನ ಕಿರಿ ಕಿರಿ? ಆ ಗೊಂಬೆಯನ್ನು ಹಾಗೆ ಹೊರಗಡೆ ಹಿಡಿದುಕೊಳ್ಳ ಬೇಡವೆಂದು ಪದೇ ಪದೇ ಹೇಳಿದರೂ ಕೇಳದೆ ಅದನ್ನು ಕೆಳಗೆ ಬೀಳಿಸಿದೆ. ಈಗ ಆ ಟೊಪ್ಪಿ

[ಪುಟ ೧೩ ನೋಡಿ]

Jaya Laxmi B nk, Ltd., Mangalore.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.

(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಕಣ್ಣಾನೂರು.

ಅಧಿಕೃತ ಮೂಲಧನ . . .	ರೂ. 1,00,000
ಅರ್ಪಿಸಲಾದ ಮತ್ತು ಚೆಂದಾಹಾಕಿದ ಮೂಲಧನ	ರೂ. 1,00,000
ತೆತ್ತ ಮೂಲಧನ	ರೂ. 92,705
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,10,979

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ—ಸೇ. 3%; 6 ತಿಂಗಳ ಠೇವಣಾತಿಗಳಿಗೆ—ಸೇ. 3½%; 12 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao,
ಸೆಕ್ರೆಟರಿ.

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತಾರ್ಥವಾಗಿಯೂ ತೀಕ್ಷ್ಣವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ತೀಸೆ 1ಕ್ಕೆ ರೂ. 5—0—0.

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಏಜೆಂಟ್ಸ್—ಪೆರ್ಲ್ ಎಂಡ್ ಸನ್ಸ್, ಮಂಗಳೂರು.

ಕಾಮಿನಿಯ ಸೌಂದರ್ಯದ ಕೀರ್ತಿಯ ಕಲಶ

ಮೃದು ಮತ್ತು ವೈಭವದಿಂದ ಬೆಳೆವ ಕೂದಲು. ನಿಮ್ಮ ಚೆಲುವನ್ನು ಹೆಚ್ಚಿಸಲು ಮತ್ತು ರಕ್ಷಿಸಲು ಮರೆಯದೆ ಕೊಳ್ಳಿರಿ—

ಕಾಮಿನಿಯಾ ಓಯ್ಲ್

(ರಿಜಿಸ್ಟರ್ಡ್)

ಪರಿಶುದ್ಧವೂ ಆತ್ಯುತ್ತಮವೂ ಆದ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಇದು ತಲೆಯ ತೊಡರುಗಳಿಗೆಲ್ಲ ದಿವ್ಯ ಔಷಧಿ. ಅಲ್ಲದೆ ಕೂದಲ ಬೇರನ್ನು ಬೆಳೆಯಿಸಿ, ಕೂದಲು ಉದುರುವುದನ್ನು ತಡೆಯುವುದಲ್ಲದೆ, ಇದರ ಪ್ರಿಯವಾದ ಸುಗಂಧ ಮನಸ್ಸನ್ನು ಆಹ್ಲಾದಕರವಾಗಿ ಇರಿಸುವುದು.

ಕಾಮಿನಿಯಾ ತೈಲ

ಸಿದ್ಧ ಪ್ರದರ್ಶನಗಳನ್ನೂ ಪ್ರಶಂಸಾ ಪತ್ರಗಳನ್ನೂ ಪಡೆದಿದೆ. ಅನೇಕ ಪತ್ರಿಕೆಗಳಲ್ಲಿ ಪ್ರಶಂಸಾ ಪತ್ರಗಳನ್ನೂ ಅದರ ಉತ್ಕೃಷ್ಟತೆಗಾಗಿ ರಾಷ್ಟ್ರದ ಸಕಲರಿಂದಲೂ ಪಡೆದಿದೆ.

ಬಾಟ್ಲಿಯೊಂದರ ಬೆಲೆ ರೂಪಾಯಿ 1. 3 ಬಾಟ್ಲಿಗಳಿಗೆ ರೂ. 2–10–0. ವಿ. ಪಿ. ಖರ್ಚು ಬೇರೆ. ಮುಕ್ಕಾ ಆಣೆ ಅಂಚೆ ಚೀಟಿ ಕಳುಹುವವರಿಗೆ ಮಾದರಿ ಸೀಸೆ ಪುಕ್ಕಟೆ. ಎಲ್ಲೆಲ್ಲೂ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಹಾಗೂ ಜೀನಸು ಅಂಗಡಿಗಳಲ್ಲೂ ಇದು ಮಾರಲ್ಪಡುತ್ತದೆ.

ಸುಗಂಧಗಳ ರಾಜ-ಓಟ್ಟೋ ದಿಲ್‌ಬಹಾರ್

(ರಿಜಿಸ್ಟರ್ಡ್)

ವಿಶಾಲ ಜಗತ್ತಿನಲ್ಲಿ ಇದಕ್ಕಿರುವ ಆದರವೇ ಇದರ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತದೆ. ನಿಮ್ಮ ಕರವಸ್ತ್ರದ ಮೇಲೆ ಬಿದ್ದ ಇದರ ಕೆಲವೇ ಬಿಂದುಗಳು ಮನಮೋಹಕ ಹಾಗೂ ಆಚ್ಛಳಿಯದ ಡೈಲಿ ಮತ್ತು ಜಾಜಿಹೂಗಳ ಸುಗಂಧವನ್ನು ಹೊರಸೂಸುವುದು. ¼ ಔನ್ಸ್ ಬಾಟ್ಲಿಯ ಬೆಲೆ ರೂ. 1¼ ಮತ್ತು ಒಂದು ಡ್ರೇವ್ಸ್ ಬಾಟ್ಲಿಯ ಬೆಲೆ 12 ಆಣೆಗಳು. ವಿ. ಪಿ. ಚಾರ್ಜು ಬೇರೆ. ಪುಕ್ಕಟೆ ಮಾದರಿ ಸೀಸೆಗಾಗಿ 2 ಆಣೆ ಅಂಚೆ ಚೀಟಿ ಕಳುಹಿಸಿ. ಸುಗಂಧ ಕಾರ್ಡಿನ ಬೆಲೆ 1 ಆಣೆ.

ಪ್ರಧಾನ ವಿಜಂಟರು:—

ಎಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ, ಬೊಂಬಾಯಿ 2.

ಜಗತ್ತನ್ನೇ ಗೆಲ್ಲಬಲ್ಲ ರಷ್ಯದ ಮಹಾಸೈ

ನಮ್ಮ ವೈರಿಗಳು ಬಂಡಾಯದ ಪಾಠವನ್ನು ನೆನೆದುಕೊಳ್ಳಲಿ. ಕಳೆದ ೨೦ ವರ್ಷಗಳಲ್ಲಿ ನಮ್ಮ ರಾಷ್ಟ್ರ ಸಾವಿರ ಪಾಲು ಹೆಚ್ಚು ಬಲವಾಗಿದೆ.

ಹಿಟ್ಲರನ ನಾಶದ ಕತ್ತಿ

ಜಗತ್ತಿನ ಬಡವರ ಏಕೈಕ

ಹಿಟ್ಲರನಿಗೆ ಹೆದರಿ—

ಸಾಮ್ರಾಜ್ಯಶಾಹಿಗಳಿಗೆ ಬೆದರಿ

ತನ್ನ ಸೇನೆಯನ್ನು ಅಜೇಯ, ಅಸಮಾನವಾಗಿಸಿದೆ.

ರಷ್ಯದ ಕೆಂಪು ಸೇನೆಯ ಬಲಾಬಲವೇನು?

ಭಾಗ ೨

ಇಡೀ ಜಗತ್ತಿನಲ್ಲೇ ಅತ್ಯಂತ ದೊಡ್ಡದಾದ ರಷ್ಯಾ ಸೇನೆಯ ಜನಬಲ ಹಾಗೂ ಸಮರ ಶಕ್ತಿ ಅದೇನದು? ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೂ ರಷ್ಯಕ್ಕೂ ಯುದ್ಧ ಸಂಭವಿಸಿದರೆ,—ಲೋಕದ ಸಕಲ ಧನಿಕ ರಾಷ್ಟ್ರಗಳೂ ಈ ಬಡವರ ರಾಷ್ಟ್ರದ ಮೇಲೆ ಬಿದ್ದರೆ,—ರಷ್ಯದ ಪರಿಸ್ಥಿತಿ ಏನು? ಅದು ತಲೆ ಎತ್ತಿ—ವಿಜಯಶಾಲಿಯಾಗಿ ನಿಲ್ಲಬಲ್ಲುದೇ?

ಈ ಪ್ರಶ್ನೆಗಳಿಂದು ಪ್ರತಿಯೊಬ್ಬನ ಮುಂದೆಯೂ ನಿಂತಿದೆ. ಬ್ರಿಟನ್ನಿನ ರೂಟರ್ ವಾರ್ತಾ ವಾಹಕರ ವಾರ್ತಾ ಸಂಗತಿಗಳ ಪ್ರಕಾರ,—ರಷ್ಯಕ್ಕೆ ಫಿನ್‌ಲ್ಯಾಂಡಿನಲ್ಲಿ ಹೆಚ್ಚಿನ ನಷ್ಟವಾಗಿತ್ತು; ಸೈನ್ಯ ಹೋಗದ, ವಿಮಾನ ಹಾರದ ಮಂಜು ಗಡ್ಡೆಯ ಪ್ರದೇಶದಲ್ಲಿ ರಷ್ಯಕ್ಕೆ ಗೆಲ್ಲಲು ಮೂರು ತಿಂಗಳು ಬೇಕಾಯಿತು ಎಂದು ನಾವು ತಿಳಿದಿದ್ದೇವೆ. ಆದರೆ, ಇಂತಹ ಈ ವಿಚಾರಕ್ಕೆ ಹೆಚ್ಚಿನ ಬೆಲೆ ಕೊಡುವದರಲ್ಲಿ ಯಾವ ರಾಷ್ಟ್ರದ ಶಕ್ತಿಯೂ ನಿಂತಿಲ್ಲ!

ಸನ್ನಿವೇಶಾತ್ಮಕ ಸಮಸ್ಯೆಗಳಿಗೆ ಸರಿಯಾದ ಉತ್ತರವೆಂದರೆ, ಕೆಂಪು ಸೇನೆಯ ವಿಚಾರವನ್ನು ತಿಳಿದುಕೊಳ್ಳುವುದೇ. ರಷ್ಯದ ಇಂದಿನ ಸೇನೆ ಅಲ್ಲಿನ ಜನ ಸಂಖ್ಯೆಯ ಶೇಕಡಾ ೧೦ರಷ್ಟಿದೆ. ಸರಕಾರದ ಬಳಿ— ಸದಾ ಸಿದ್ಧವಾಗಿ ನಿಂತ ಸೇನೆ ೧೩ ಲಕ್ಷ. ಅಂದರೆ, ಬ್ರಿಟನ್ನಿನ ಇಂದಿನ ಸೇನೆಗಿಂತ ೫೦ ಸಾವಿರ ಹೆಚ್ಚು. ಇದಕ್ಕೆ, ತರಬೇತಾಗಿದ್ದರೂ ಸೇನೆಯಲ್ಲಿ ಸೇರಿಕೊಂಡೇ ಇರದ, ಕಾದಾಡಲು ಯೋಗ್ಯರಾದ ಸುಮಾರು ೮ ಮಿಲ್ಯ ಸೈನಿಕರು ಬೇರೆ. ಅಲ್ಲದೆ ತರಬೇತಾಗಿದ್ದು, ಯಾವ ಸಮಯಕ್ಕೂ ಕಾದಾಡಲು ಸಿದ್ಧರೇ ಆಗಿ, ನಾಗರಿಕ ಜೀವನ ಸಾಗಿಸುತ್ತಿರುವ ಬೇರೆ ೧೫॥ ಮಿಲಿಯ ಮಂದಿಯನ್ನೂ ಈ ಸೇನೆಗೆ ಸೇರಿಸಿ. ಆಗ ಇಂದಿನ ಕೆಂಪು ಸೇನೆಯ ಶಕ್ತಿ ೨೫ ಮಿಲಿಯವೆಂದು ನಿಮಗೆ ತಿಳಿಯದಿರದು.

ಜಗತ್ತಿನಲ್ಲಿ ರಷ್ಯದ ಸೇನೆಯಷ್ಟು ಅತ್ಯಾಧುನಿಕವಾದ ಸೇನೆ ಬೇರೆ ಇಲ್ಲವೆಂಬ ಪ್ರತೀತಿ ಇದೆ. ರಷ್ಯದ ಶಕ್ತಿ ಅದೆಷ್ಟೆಂದು ಅದಾವ ಪರ ರಾಷ್ಟ್ರೀಯರಿಗೂ ಚೆನ್ನಾಗಿ ತಿಳಿದಿಲ್ಲವಾದರೂ, ಖ್ಯಾತ ಮಿಲಿಟರಿ ಅಧಿಕಾರಿಗಳು ರಷ್ಯದ ಬಳಿ ೫೦ ಸಾವಿರ ಮೆಶಿನ್ ಗನ್‌ಗಳೂ, ೨೦ ಸಾವಿರ ತೋಪುಗಳೂ, ೧೦ ಸಾವಿರ ಟ್ಯಾಂಕುಗಳೂ ಇರಬಹುದೆಂದು ಒಂದು ವರ್ಷದ ಹಿಂದೆಯೇ ಅಂದಾಜು ಮಾಡಿದ್ದರು. ಆದರೆ, ಇಂದಿನ ಮಹಾಯುದ್ಧದ ಸೂಚನೆ ತಿಳಿದೊಡನೆಯೇ, ಮ್ಯೂನಿಚ್ ಒಪ್ಪಂದ ನಡೆದೊಡನೆಯೇ ರಷ್ಯವು ತನ್ನ ಬಲವನ್ನು ಇಮ್ಮಡಿಗೊಳಿಸಿತ್ತು. ಅದರಲ್ಲೂ ಇಂದಿನ ಯುದ್ಧದ ದೆಸೆಯಿಂದಂತೂ, ಯುರೋಪಿನ ಸರ್ವಾಧಿಕಾರಿಗಳು, ಒಂದಲ್ಲ ಒಂದು ದಿನ, ತನ್ನ ಮೇಲೆ ಬೀಳದೆ ಇರರೆಂಬ ಸಂಶಯ ಬಲವಾದುದರಿಂದ, ರಷ್ಯವು ಇಡೀ ಜಗತ್ತೇ ಒಟ್ಟಾಗಿ ಯುದ್ಧಕ್ಕೆ ಬಂದರೂ, ಇದಿರಿಸಬಲ್ಲಷ್ಟು ಬಲವಾದ ಸೇನೆಯನ್ನು ಸಿದ್ಧಗೊಳಿಸಿದೆ. ಟ್ಯಾಂಕುಗಳ ಸಂಖ್ಯೆ ೨೦ ಸಾವಿರಕ್ಕೂ, ವಿಮಾನಗಳು ೫೦ ಸಾವಿರಕ್ಕೂ, ತೋಪುಗಳು ಲಕ್ಷಕ್ಕೂ, ಮೆಶಿನ್ ಗನ್‌ಗಳು ಮಿಲಿಯಕ್ಕೂ ಮಿಗಬಹುದೆಂದು ವಿವಿಧ "ಮಿಲಿಟರಿ" ಅಧಿಕಾರಿಗಳ ಅಭಿಪ್ರಾಯದಿಂದ ತಿಳಿದುಕೊಳ್ಳಬಹುದಾಗಿದೆ. ರಷ್ಯದ ನೌಕಾಪಡೆಯೂ ಜಗತ್ತಿನಲ್ಲಿ ಅತ್ಯಂತ ದೊಡ್ಡದಾಗಿ ನಿಂತಿದೆ. ತೇಲಾಡುವ, ಹಾರಾಡುವ ಟ್ಯಾಂಕುಗಳಿವೆ. ಹಲವಾರು ಗುಪ್ತಾಸ್ತ್ರಗಳನ್ನು ರಷ್ಯಾ ಕಂಡುಕೊಂಡಿದೆ.

ರಷ್ಯದ ವಿಮಾನ ಪಡೆಯು ಜಗತ್ತಿನಲ್ಲೇ ಖ್ಯಾತವಾಗಿದೆ. ಇಲ್ಲಿನ "ಬ್ಲೇಕ್ ಮೋತ್" ಎಂಬ ಬಾಂಬೆಸೆವ ಹಾಗೂ ವಿಮಾನಗಳನ್ನಿದಿರಿಸುವ ವಿಮಾನಗಳು ಚೀನಾದಲ್ಲಿ ಜಪಾನೀಯರ ತಿರುವ ಟ್ಯಾಂಕ್‌ಗಳಿಂದ ಹಿಡಿದು ಸಾಮಾನ್ಯ ಹಾಗೂ ತೇಲುವ, ಹಾರುವ ಟ್ಯಾಂಕ್‌ಗಳ ತನಕ ದವುಗಳನ್ನೂ ಬೇಕಾದಷ್ಟು ತಯಾರಿಸುತ್ತಿವೆ.

ಪೂರ್ವದ ಕರಾವಳಿಯೂ, ಪಶ್ಚಿಮದಲ್ಲಿ ಬಾಲ್ಟಿಕ್‌ನಿಂದ ಕಪ್ಪು ಸಮುದ್ರದ ತನಕದ ಗಡಿಯೂ, ಮೆಗಿನೋಟ್ ಲೈನ್, ಉಕ್ಕಿನ ಕೋಟೆಗಳೇ ಮುಂತಾದುವುಗಳಿಂದ ಭದ್ರಪಡಿಸಲ್ಪಟ್ಟಿವೆ.

ರಷ್ಯದ ನೂರಾರು ವೈಮಾನಿಕ ಶಾಲೆಗಳಲ್ಲಿ ಗಂಡಸರು—ಹೆಂಗಸರು—ಸೈನಿಕರೆನ್ನದೆ ಸಕಲರೂ ಹಾರಾಡಲು ಅಭ್ಯಾಸಮಾಡುತ್ತಿದ್ದಾರೆ. ತರುಣಿಯರು ತಮ್ಮ ವಿರಾಮಕಾಲವನ್ನು ಹೆಚ್ಚಾಗಿ ಇದಕ್ಕೆ ಉಪಯೋಗಿಸುತ್ತಿದ್ದಾರೆ. ವಿಮಾನಗಳಲ್ಲೇರಿ, ಪೆರಚ್ಯೂಟ್‌ಗಳಲ್ಲಿ ಬೀಳುವ ಆಟ ಇಲ್ಲಿ ಮಕ್ಕಳಾಟವಾಗಿದೆ. ಜರ್ಮನಿಗೆ ಪೆರಚ್ಯೂಟ್ ಸೇನೆ ಸಾಗಿಸುವ ವಿಚಾರದಲ್ಲಿ ಗುರು—ರಷ್ಯ. ರಷ್ಯದ ವಿಮಾನ ಸೇನೆಯು ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಆದರೂ, ನೈಜ ವಿಮಾನ ಶಕ್ತಿ, ಇಂದಿಗೂ ಅತ್ಯಂತ ಗುಪ್ತವಾಗಿಯೇ ನಿಂತಿದೆ. ಇಂದಿನ ರಷ್ಯದ ವಿಮಾನ ನಿರ್ಮಾಣಗಳಲ್ಲಿ ತಾಸಿಗೆ ೫೦೦ ಕಿಲೋಮೀಟರ್‌ಗಳ ವೇಗದಿಂದ, ೧೪ರಿಂದ ೧೬ ಸಾವಿರ ಅಡಿಗಳ ಎತ್ತರದಲ್ಲಿ ಹಾರಬಲ್ಲ ಬಾಂಬೆಸೆವ ಹಾಗೂ ಬೆನ್ನಟ್ಟುವ ವಿಮಾನಗಳನ್ನೂ ಸದಾ ಕಾಣಬಹುದು.

ಸೇನೆಯನ್ನು ಸಾಗಿಸಲು ಬೇಕಾದ ವ್ಯವಸ್ಥೆಯು, ಇಂದು ಚೆನ್ನಾಗಿ ಸಾಗಿದೆ. ೪೭ ರೈಲು ಮಾರ್ಗಗಳು ಯುರೋಪಿನ ಗಡಿಗಳೆಡೆ ಸಾಗುತ್ತಿವೆ. ಇವುಗಳಲ್ಲಿ ಕೆಲವು ಎರಡು ಬಂಡಿಗಳು ಒಂದೇ ಬಾರಿ ಸರಿಯಬಹುದಾದ ರೀತಿಯ ಮಾರ್ಗಗಳು. ಅದೇ ರೀತಿಯ ವ್ಯವಸ್ಥೆ ಪೂರ್ವದಿಕ್ಕಿನ ಗಡಿಗೂ ಇದೆ. ಇಂದು ರಷ್ಯವು ಬರೇ ೧೪ ದಿನಗಳಲ್ಲಿ ೨ ಮಿಲಿಯ ಸೇನೆಯನ್ನು ಯಾವ ಗಡಿಗೆ ಬೇಕಾದರೂ ಕಳುಹಿಸುವಷ್ಟು ಶಕ್ತವಾಗಿದೆ.

ಇಂದಿನ ರಷ್ಯದ ಧ್ಯೇಯ ತನ್ನಷ್ಟಕ್ಕೆ ತಾನಿರುವದಾದುದರಿಂದ, ಅದು ಯಾರ ನಾಶಕ್ಕೂ ದಿಗ್ವಿಜಯಕ್ಕೂ ಬಗೆಯದು; ಮಾತ್ರವಲ್ಲ; ಅದರ ನಾಶಕ್ಕೆ ಬಗೆದವರಿಗೂ ಉಳಿಗಾಲವಿಲ್ಲ! ಅಂತೂ "ಜಗತ್ತಿನಲ್ಲಿ ಶಾಂತಿ ಉಳಿಯಬೇಕಿದ್ದರೆ ರಷ್ಯ ಶಾಂತವಾಗಿರಬೇಕು" ಎಂದು ಅದು ಕಂಡುಕೊಂಡಿದೆ!

Ford

V-8

Four Cylinder Sedan

A Medium sized Car



U. Subraya Nayak,

FORD DEALER,

MANGALORE.

YOUR FUTURE ★

THE WELL-BEING OF YOUR DEPENDANTS ★

THE UNCERTAINTY OF TO-MORROW! ★

THESE ARE PROBLEMS WHICH FACE A MAN RELENTLESSLY.

It will [illegible] for you to despair. Human intelligence—its history read with the experience of Wars, [illegible]amine, Epidemics, Unemployment, Accidents, has perfected in LIFE INSURANCE a safeguard against the difficulties of Future.

Insurance today is a necessity to the rich and poor. It is an estate—an investment which knows no Depreciation. Take out your Policy in the "Popular". It is a local enterprise and deserves your goodwill and co-operation.

The Popular Insurance Company, Limited,

Head Office: Mangalore, S. J.

Bombay Branch:
Prospect Chambers,
Hornby Road.

★

Madras Branch:
13, Thambu Chetty St.,
George Town.

ಜಪಾನ್ ಮತ್ತು ಬ್ರಿಟನ್

ಬಗೆಬಗೆಯ ಟೀಕೆಗಳಿಗೆ ಒಳಗಾದರೂ, ಬ್ರಿಟಷ್ ಪ್ರಧಾನರು ತಾಳ್ಮೆ ವಹಿಸಿ, ಜಗಳ ಬೇಡವೆಂದು ಈಗಿನ ಸಂದರ್ಭಕ್ಕೆ ತಕ್ಕಂತೆ, ಬರ್ಮಾ ರಸ್ತೆಯನ್ನು ಮುಚ್ಚಿ, ಜಪಾನರನ್ನು ಸಂತೈಸಲು ನೋಡಿದರು. ಆದರೆ ಅದರಿಂದಲೂ ಜಪಾನು ತೃಪ್ತಿ ಹೊಂದದೆ, ಬದಲಾಗಿ ಅದರಿಂದ ಉತ್ತೇಜನಗೊಂಡಿರುವುದೆಂಬುದಕ್ಕೆ ಜಪಾನಿನ ಇಂದಿನ ವಿದ್ಯಮಾನಗಳೇ ನಿದರ್ಶನಗಳಾಗಿವೆ. ಅಲ್ಲಿ ಹಲವು ಮಂದಿ ಆಢ್ಯ ಬ್ರಿಟಿಷರ ಕೈಸೆರೆ ನಡೆದಿದೆ. ಇವರೆಲ್ಲ ಅಲ್ಲಿ ಒಳಸಂಚು ನಡೆಸುತ್ತಿರುವರೆಂದು ಜಪಾನಿನ ಆರೋಪ. ಅಲ್ಲದೆ, ಜಪಾನಿನ ಪ್ರಮುಖ ಪತ್ರಿಕೆಗಳೂ "ಇದು ಬ್ರಿಟಷ್ ಪ್ರಚಾರ ಕಾರ್ಯದ, ಒಳಸಂಚಿನ ಸಂಸ್ಥೆ"ಯೇ ಎಂದೂ ಗುಲ್ಲೆಬ್ಬಿಸಿವೆ. ಇದನ್ನು ಪ್ರತಿಭಟಿಸಿ, ಅಲ್ಲಗಳೆದು ಬ್ರಿಟನ್ ತನ್ನ ಮನೋಗತವನ್ನು ಪ್ರಕಟಿಸಿರುವುದಾದರೂ, ಈ ಪ್ರಕರಣವು ಹೇಗೆ ಮುಗಿದೀತೆಂದು ಹೇಳಬರುವುದಿಲ್ಲ.

* * *

ಜಪಾನಿನ ಹೆಮ್ಮೆ ದಿನೇ ದಿನೇ

ಏರುವಂತೆ ತೋರುತ್ತಿದೆ. ಅದಕ್ಕೆ "ಏಕ್ಸಿಕ್" ರಾಷ್ಟ್ರಗಳ ಸ್ನೇಹವೂ, ಆಶ್ರಯವೂ ಈಗ ಅಗತ್ಯ ಬೇಕೆಂಬ ಆತುರ ಹೆಚ್ಚುತ್ತಿದೆ. ಆದುದರಿಂದಲೇ ಇಂದು ಜಪಾನಿನಲ್ಲಿ ಆಗಿರುವ ಆ ಬ್ರಿಟಿಷರ ಕೈದುಗಳು ಆ 'ಏಕ್ಸಿಕ್' ದೇವತೆಗಳ ಪ್ರೀತ್ಯರ್ಥವಾಗಿಯೇ ಇದ್ದರೂ ಇರಬಹುದು. ಇದಕ್ಕೆ, ಪೂರ್ವ ಪೀಠಿಕೆಯಾಗಿ, ಜಪಾನಿನ ಪತ್ರಿಕೆಗಳೂ, 'ಏಕ್ಸಿಕ್' ರಾಷ್ಟ್ರಗಳ ಸಖ್ಯವೇ ಜಪಾನಿಗೆ ಮುಖ್ಯವೆಂದು ಸಾರಿ ಹಾಗೆ ವಾದಿಸಿದ್ದುವು. ಒಬ್ಬ ಪ್ರಮುಖ ಜಪಾನೀಯನೂ "ಜರ್ಮನಿಯು ಗೆದ್ದರೆ, ನಾವೂ ಜರ್ಮನಿಯಂತಾಗುವೆವು" ಎಂದೂ ನುಡಿದಿದ್ದನು. ಇವೆಲ್ಲಾ ಹೇಗಿದ್ದರೂ, ಹಿಟ್ಲರನ ಅಗತ್ಯಕ್ಕೆ ತಕ್ಕಂತೆ, ಅವನ ಆ ತಾಳಕ್ಕೆ ತಕ್ಕಂತೆ ಜಪಾನು ಮೇಳ ಕಟ್ಟುತ್ತಿದೆ ಎಂಬುದು ನಿರ್ವಿವಾದ. ಜಪಾನು ಯುರೋಪಿಯ ವಹಿವಾಟದಲ್ಲಿದ್ದ ತನ್ನ ಯಾವತ್ತು 'ಹಡಗುಗಳನ್ನೂ ಹಿಂದೆ ಕರೆದು, ಬ್ರಿಟಿಷರ "ಬ್ಲಾಕೇಡಿನ" ಕೈಯನ್ನು ಸಡಿಲಿಸಿದುದೇ ಅಲ್ಲದೆ, ಈಗ ಜಪಾನಿನಲ್ಲಿ ಇಂತಹದೊಂದು ವಿಷಮ ಪರಿಸ್ಥಿತಿಯನ್ನೂ ಉಂಟುಮಾಡಿ, ಹಾಗೆ ಹಿಟ್ಲರನ ಮುಂದಿನ ಆ ಉದ್ದೇಶಕ್ಕೂ ನೆರವಾಗಲು ಪೇಚಾಡುತ್ತಿದೆ. ಹಿಟ್ಲರಿಗೆ ಈ ಸಮಯದಲ್ಲಿ ಬೇಕಾದುದೆಂದರೆ–ಬ್ರಿಟಿಷ್ ಸೈನ್ಯಗಳನ್ನು ಅಲ್ಲಲ್ಲಿ ಛೇದರಿಸುವುದು. ಇಟೆಲಿ ಆ ತಿಂಗಳ ಬಳಿಕ ಯುದ್ಧಕ್ಕಿಳಿದು, ಹಿಟ್ಲರನ ಆ ಉದ್ದೇಶಕ್ಕೆ ಬೆಂಬಲ ಕೊಟ್ಟಿತು—ಅದನ್ನು ನಾವು ನೋಡಿದ್ದೇವೆ. ಹಾಗೇ ಜಪಾನೂ ಅದೇ ಕಾರ್ಯನೀತಿಯನ್ನೇ ಅನುಸರಿಸುತ್ತಿಲ್ಲವೆಂದು ಕಂಠೋಕ್ತವಾಗಿ ನುಡಿಯುವ ಧೈರ್ಯ ಯಾರಿಗೂ ಇಲ್ಲ. ಒಟ್ಟನಲ್ಲಿ, ಲಾಭದಲ್ಲಿ ದೃಷ್ಟಿಯುಳ್ಳ ಗೆದ್ದವರ ಕಡೆ ನಾವೆನ್ನುವ ಜಪಾನು, ಇಂದು 'ಏಕ್ಸಿಕ್' ರಾಷ್ಟ್ರಗಳಿಗೆ ಹತ್ತಿರವಾಗಲು ಬಾಯಿ ಕಳೆದುಕೊಂಡಿದೆ. ಒಂದು ವೇಳೆ, ನಾಳೆ, ಬ್ರಿಟನ್ ಜಯಿಸಿತೆನ್ನುವಾಗ, ಆಗ ಜಪಾನು ಬ್ರಿಟನಿನ ಮಿತ್ರನಾಗಲೂ ಮುಂದಾಗದೇ? "ಗಟ್ಟಿಯಾದರೆ ರೊಟ್ಟಿ, ನೀರಾದರೆ ದೋಸೆ" ಎಂಬ ಪಾಠವನ್ನು ಜಪಾನ್ ಕಲಿತುದು, ಯುರೋಪೀಯ ರಾಜನೀತಿಯಿಂದಲೇ ಅಲ್ಲವೇನು?

* * *

ಫ್ರಾನ್ಸಿನ ಅಪಜಯಕ್ಕಾಗಿ

ಅಲ್ಲಿನ ಹಲವು ಮಾಜಿ ಮಿನಿಸ್ಟರುಗಳ ವಿಚಾರಣೆಯನ್ನು ಇನ್ನು ನಡೆಸಲಾಗುತ್ತಿದೆ! ನಿಜವಾಗಿ ಫ್ರಾನ್ಸಿನ ಅಪಜಯಕ್ಕೆ ಟ್ಯಾಂಕುಗಳ ಹಾಗೂ ವಿಮಾನಗಳ ಅಭಾವವೂ ನಾಜಿಗಳ ಪ್ರಚಾರ ಕಾರ್ಯದ ಪ್ರಭಾವವೂ ಮುಖ್ಯ ಕಾರಣವಾಗಿರುತ್ತ, ಈ ಮಂತ್ರಿಗಳನ್ನೇ ಏಕೆ ವಿಚಾರಣೆಗೆ ತಂದು ನಿಲ್ಲಿಸುವುದೋ ತಿಳಿಯದಾಗಿದೆ. ನೋಡಿ! ಈಗ ಇವರನ್ನು ವಿಚಾರಣೆಗೆ ಗುರಿಪಡಿಸಿರುವ ಆ ಮಂತ್ರಿಮಂಡಲವೇ ಮಾರ್ಷಲ್ ಪೆಟೆನ್‌ರವರ [illegible] ೧೯೩೯ನೇ [illegible] ಟಯ ಪ್ರೆಸಿಡೆಂಟರ [illegible] ಅವಧಿಯಲ್ಲಿ, [illegible] ವನ್ನು, ಆಧುನಿ[illegible] ಸಲು ತಮ್ಮ ಕಿರುಬೆ[illegible] ವಾಗ, ಈ ಪಿಟೆನ್ ಸಾಹೇಬರ[illegible] ಬೇಡವೇ? ಇವರ ಜಾತಕವನ್ನೂ ಸ್ಫುಟವೊಡ[illegible] ಬೇಡ್ತವೇ? ಆಗ್ಗೆ, ಈ ಪಿಟೆನ್‌ರವರೊಡನಿದ್ದ ಲಾವಲ್ ಮೊದಲಾದ ಫೆಶಿಯಿಸ್ಟ್ ಗಣಗಳ ದೆಸೆಯಿಂದ, ಅವರ ದ್ರೋಹಬುದ್ಧಿಯ ಚಟುವಟಕೆಗಳಿಂದಲೇ, ಫ್ರಾನ್ಸ್ ತಕ್ಕ ರೀತಿಯಲ್ಲಿ ಯುದ್ಧ ಸಿದ್ಧತೆಯನ್ನು ಘಾಡಲಾರದೆ ಹೋಯಿತೆಂಬುದನ್ನೂ, ಜಗತ್ತಿನ ಮುಂದೆ ಯಾರಾದರೂ ಡಂಗುರ ಸಾರಬೇಡವೇ?

* * *

"ಧೋತಿ ಮತ್ತು ಸೀರೆ"

ಈ ಹಿಂದೂ ಉಡುಗೆಗಳನ್ನು, ಆಂಗ್ಲ ಪುರುಷರೂ, ಸ್ತ್ರೀಯರೂ ಕೊಡ ಮೆಚ್ಚುತ್ತಿರುವಾಗ, ನಮ್ಮ ನೆರೆಯವರಾದ ಸಿಲೋನಿನವರಿಗೆ ಇವು ಮುಖ್ಯವಾಗಿ ಧೋತಿಯು ಒಗ್ಗಿಲ್ಲವೆಂಬ ದೂರು ಕೇಳಿ ಬರುತ್ತಿರುವುದು ಕೊಂಚ ವಿಚಿತ್ರವೆ. ಕಾಶ್ಮೀರಕ್ಕೆ ಬಂದಿದ್ದ ಸಿಲೋನಿನ ಗೃಹಸ್ಥನೊಬ್ಬನು ಅಲ್ಲೊಂದು ಸಭೆಯಲ್ಲಿ ಭಾಷಣ ಮಾಡುತ್ತ, "ಸಿಲೋನ್ ದೇಶೀಯರು ಅಲ್ಲಿನ ಹಿಂದೀಯರಲ್ಲಿ ಅಪ್ರಸನ್ನತೆಯನ್ನು ತೋರಲು, ಅವರು ಉಡುವ ಧೋತಿಯೂ ಒಂದು ಕಾರಣವಾಗಿದೆ. ಹಿಂದೀಯರು ಸಾರ್ವಜನಿಕ ಸ್ಥಳಗಳಿಗೆ ಸರಿಯಾದ ಉಡಿಗೆ ತೊಡಿಗೆಗಳನ್ನು ಧರಿಸಿ ಬರುವುದಿಲ್ಲ. ಅವರು ಅಲ್ಲಿಗೆ ಧೋತಿ ಧರಿಸಿ ಬರುತ್ತಾರೆ. ಆ ಕುರಿತು ಸಿಲೋನ್ ಹೆಂಗಸರ ಆಕ್ಷೇಪವಿದೆ" ಎಂದು ಹೇಳಿರುವುದಾಗಿ ವರದಿಯಾಗಿದೆ. ಈ ಗೃಹಸ್ಥರಿಗೆ ಸಿಲೋನ್ ಗಂಡಸರ, ಹೆಂಗಸರ ಪ್ರಸನ್ನತೆ ಹಾಗೂ ಅಪ್ರಸನ್ನತೆಯ ಕುರಿತು ಮಾತಾಡಲು ಯಾವ ಆಧಾರವೋ ತಿಳಿಯದಷ್ಟೇ ಅಲ್ಲ; ಅದೇ ಸ್ತ್ರೀಪುರುಷರು, ತಮ್ಮ ಹಿಂದುಸ್ತಾನಿಯಲ್ಲಿ ದೂರದ ಕಾಶ್ಮೀರದಲ್ಲಿ ಇವರಾಡಿದ ಈ ಮಾತುಗಳ ವಿಷಯದಲ್ಲಿ ಆಕ್ಷೇಪ ವೆತ್ತಿದರೂ ಆಶ್ಚರ್ಯವೆನ್ನಿಸಲಾರದೆನ್ನಿ. ಕಾರಣ, ತನ್ನ ರಾಷ್ಟ್ರೀಯ ಉಡಿಗೆತೊಡಿಗೆಗಳಿಗೆ ಮರ್ಯಾದೆ ಕೊಡುವ ಸಿಲೋನ್ ದೇಶೀಯನು ಇತರರ ರಾಷ್ಟ್ರೀಯ ಉಡುಪುಗಳ ವಿಚಾರದಲ್ಲಿ ಅಗೌರವ ಬುದ್ಧಿಯನ್ನು ತೋರುವಷ್ಟು ಅವಿವೇಕಿಯಾದಾನೇ?

* * *

ಆತ್ಮಸಾಕ್ಷಿಯ ಹಲವು ಅವತಾರಗಳು!

ಆತ್ಮಸಾಕ್ಷಿಯು ಬೇರೆ ಬೇರೆ ವ್ಯಕ್ತಿಗಳೊಡನೆ, ಬೇರೆ ಬೇರೆ ಧ್ವನಿಯಿಂದ ಮಾತಾಡುವಂತೆ ತೋರುತ್ತದೆ. ಪ್ರೆಸಿಡೆಂಟ್ ರೂಸ್‌ವೆಲ್ಟರು ತಾವು ಆ ಪ್ರೆಸಿಡೆಂಟ ಪದವಿಯಿಂದ ನಿವೃತ್ತರಾಗಬೇಕೆಂಬ ಆ ತಮ್ಮ ಪ್ರಿಯವಾದ ಅಭಿಲಾಷೆಯನ್ನು ಕೈ ಬಿಟ್ಟು, ತಾವೇತಕ್ಕೆ ಈಗ ಮೂರನೆಯ ಬಾರಿಯಾಗಿ, ಅದೇ ಅಧ್ಯಕ್ಷ ಸ್ಥಾನದ ಉಮೇದುವಾರರಾಗಿ ನಿಂತಿವೆಂಬುದನ್ನು ನಮಗೆ ಸ್ಪುಟಾಕ್ಷರಗಳಿಂದ ತಿಳಿಸಿದ್ದಾರೆ. ಮತ್ತೆ ಈ ಕಾರ್ಯಕ್ಕೆ ಪ್ರೇರಕಶಕ್ತಿಯಾದ ಅದೇ ಆಗೋಚರ ಆತ್ಮಸಾಕ್ಷಿಯೇ, ನಾಸ್ತಿಕತ್ವದ ವಿರುದ್ಧ ಧರ್ಮದ ಪರವಾಗಿಯೂ, ಬಲಪ್ರಯೋಗದ ವಿರುದ್ಧ ನ್ಯಾಯದ ಪರವಾಗಿಯೂ, ಗುಂಡಿನ ಬಾಯಿಗೆ ಕಟ್ಟುವ ವಧಾ ಪಂಗಡದ ವಿರುದ್ಧ ನೈತಿಕ ಶಿಷ್ಟಾಚಾರದ ಪರವಾಗಿಯೂ ಅವರು ಕಾದಾಡುವಂತೆ ಆ ರೂಸ್‌ವೆಲ್ಟರಿಗೆ ಅಪ್ಪಣೆ ಮಾಡಿದೆ. ಇದರ ಪರಿಣಾಮವಾಗಿ ಆ ನಾಸ್ತಿಕತ್ವವನ್ನೂ, ವಧಾ ಪಂಗಡವನ್ನೂ ಹೊಡೆದೋಡಿಸಲು ಅವರೊಂದು ದೊಡ್ಡ ನೌಕಾ ಸೇನೆಯನ್ನೂ [illegible] ಮೆರಿಕದಲ್ಲಿ ರಚಿಸಿ, [illegible] ರ ಎದೆ ನಡುಗುವಂತೆ [illegible] ಲೇ ಭೀಷ್ಮ ಪ್ರತಿಜ್ಞೆ ಮಾಡಿ [illegible] ಮೆರಿಕದ ಪ್ರೆಸಿಡೆಂಟರ ಆತ್ಮ [illegible] ಯವಾಯಿತು!

* *

ಇನ್ನು ಇತ್ತ ಹಿಟ್ಲರನ ಆತ್ಮಸಾಕ್ಷಿಯ ಚರಿತ್ರೆ ಏನು? ಬಲ್ಲಿರಾ?

ಅವನು ತಾನು ನ್ಯಾಯಸ್ಥಾಪನೆಗಾಗಿಯೇ ಕಾದಾಡುತ್ತಿದ್ದೇನೆಂದೂ, ಶಾಶ್ವತ ಶಾಂತಿಗಾಗಿಯೇ ತಾನು ಜೀವಿಸುತ್ತಿರುವೆನೆಂದೂ, ಆದರೆ ತನ್ನ ಈ ಉದ್ದೇಶಗಳು ಕೈಗೂಡದಂತೆ ಅಡ್ಡ ಬಂದವರೇ ಫ್ರಾನ್ಸಿನ ಹಾಗೂ ಬ್ರಿಟನಿನ ರಾಜನೀತಿಜ್ಞರೆಂದೂ ಅವನಿಗೆ ಅವನ ಆತ್ಮಸಾಕ್ಷಿಯ ಮೂಲಕ ಖಚಿತವಾದಂತೆ ತೋರುತ್ತದೆ. ಇದಕ್ಕೆ ಸರಿಯಾಗಿ, ಫ್ರಾನ್ಸಿನ ಲಾಗಾಟವೂ "ನ್ಯಾಯವು ತನ್ನ ಕಡೆಗಿದೆ" ಎಂದೇ ಹಿಟ್ಲರನನ್ನು ಧೈರ್ಯಗೊಳಿಸಿರುವುದರಿಂದ, ಅವನೀಗ ಬ್ರಿಟಿಷ್ ಪ್ರಧಾನರಾದ ಮಿ. ಚರ್ಚ್‌ಹಿಲ್ಲರಿಗೆ "ನೀವು ಬಿಳೀ ಧ್ವಜವನ್ನೇರಿಸಿ, ತಂಟೆ ತಕರಾರು ಮಾಡದೆ, ಸುಮ್ಮಗೆ ರಾಜಿಗೆ ಬನ್ನಿ" ಎಂದೂ ಉಪದೇಶಿಸಿದ್ದಾನೆ. ಹಿಟ್ಲರಿನಿಗೆ—ಪಾಪ,—ಅವನ ಆತ್ಮಸಾಕ್ಷಿಯು ಬ್ರಿಟಿಷ್ ಸಾಮ್ರಾಜ್ಯವನ್ನು ಧ್ವಂಸಮಾಡಲಿಕ್ಕೆ ಇದುವರೆಗೆ ಅಪ್ಪಣೆ ಕೊಟ್ಟಿಲ್ಲವೇನೋ! ಆದರೆ, ಮಿ. ಚರ್ಚ್‌ಹಿಲ್‌ರು ಹಿಟ್ಲರನ ಮಂತ್ರೋಪದೇಶಕ್ಕೆ ಕಿವಿಕೊಡದಿದ್ದರೆ, ಆಗ ಹಿಟ್ಲರ್ ನಿರುಪಾಯವಾಗಿ, ತನ್ನ ನಿರ್ಮಲವಾದ ನಿಷ್ಕಲಂಕ ಆತ್ಮಸಾಕ್ಷಿಯೊಡನೆ, ಧ್ವಂಸಕಾರ್ಯಕ್ಕೆ ಹೊರಡಲೇ ಬೇಕಾಗುವುದಲ್ಲವೇ? ಆಹಾ! ಆತ್ಮಸಾಕ್ಷಿಯೆಂದರೆ ಕೆಲಕೆಲವು ರಾಜನೀತಿ ಪಂಡಿತರಿಗೆ ಅದೆಂತಹ ಅನುಕೂಲ "ಕಾಮಧೇನು!"

* * *

ಗಡಿನಾಡಿನ ಕಾಂಗ್ರೆಸ್ ಕಮಿಟಿ

ಅದೊಂದು ತೀರ್ಮಾನ ಮಾಡಿರುವುದೆಲ್ಲರಿಗೂ ಇಷ್ಟರೊಳಗೇ ತಿಳಿದಿದೆ. ಮತ್ತಾ ನಿರ್ಣಯವೆಂದರೆ ಇದಿಷ್ಟು. "ಶ್ರೀ. ಜಿನ್ನಾರವರು ಕಾಂಗ್ರೆಸ್ ಪ್ರೆಸಿಡೆಂಟರಲ್ಲಿ ಕ್ಷಮೆ ಕೇಳಿದ ಹೊರತು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಅವರೊಡನೆ ಯಾವ ಮಾತುಕಥೆಯನ್ನೂ ನಡೆಸಬಾರದು" ಎಂಬುದೇ. ಶ್ರೀ. ಜಿನ್ನಾರವರು ತಿಳಿದವರಾಗಿದ್ದು ತಾನೂ ಅಂದು, ಇತರರಿಂದಲೂ ಅನ್ನಿಸಿಕೊಳ್ಳುವ ಈ ಅನಾವಶ್ಯಕ ವ್ಯಾಪಾರಕ್ಕೆ ಹೋಗಬೇಕಾಗಿರಲಿಲ್ಲ. ಆದರೇನು ಮಾಡುವ? ಇಂಡಿಯದ ಮುಸಲ್ಮಾನರೆಲ್ಲರ ಪ್ರತಿನಿಧಿಗಳು ಇವರೊಬ್ಬರೇ ಎಂಬಂತೆ ವೈಸರಾಯರು ಇವರನ್ನೇ ಆಗಾಗ ತಮ್ಮ ಭೇಟಿಗಾಗಿ ಕರೆಕಳುಹಿಸುತ್ತಿರುವುದೂ, ಅವರ ಪ್ರೀತಿ ಸಂಪಾದನೆಗಾಗಿ ಕಾಂಗ್ರೆಸೂ ವಿತಿ [illegible] ವಿಧುತ್ತಿರುವುದೂ ಅವರನ್ನು ಈ ರೀತಿ [illegible] ಡಲು [illegible] ರೇಪಿಸಿರಬೇಕು. ಆದರೆ ಈ ಸಂದರ್ಭದಲ್ಲಿ ಸರ್ ರಾಫಿಯುದ್ದೀನ್‌ರವರೊಂದು ಮಾತು ಹೇಳಿದ್ದಾರೆ. "ಶ್ರೀ. ಜಿನ್ನರು ರಾಷ್ಟ್ರಪತಿ ಮೌಲಾನರನ್ನು ಹಿಂದೂಗಳ ಪ್ರದರ್ಶನದ ಹುಡುಗನೆನ್ನುವಾಗ, ಅದು ಅನ್ನ ಮಾಡುವ ಗಡಿಗೆಯನ್ನು ಕಾಫಿಯ "ಕೆಟಲು" ಕಪ್ಪೆಂದು ಕರೆದಂತಾಯಿತು. ೩೦ ವರ್ಷಗಳ ಹಿಂದೆ ಜಿನ್ನರನ್ನು, ಅವರ ಧರ್ಮಿಯರೂ ಇದೇ ಆರೋಪಗಳಿಂದಲೇ ಜರುಚ್ಚುತ್ತಿದ್ದರು" ಎಂದವರ ನುಡಿ. ವಾಸ್ತವವಾಗಿಯೂ ಶ್ರೀ. ಜಿನ್ನರೂ, ಬ್ರಿಟಿಷ್ ಬಾದಶಾಹಿತತ್ತ್ವದ ಪ್ರದರ್ಶನದ ಹುಡುಗನೆಂದೇ, ಅನೇಕರು ಈ ಸಂದರ್ಭದಲ್ಲಿ, ಅವರಿಗೊಂದು ಹೊಸ ನಾಮಕರಣ ಮಾಡಲೂ ಹಿಂಜರಿಯಲಾರರಲ್ಲವೆ?

ಶಾಸ್ತ್ರೀಯ ಅಮೃತ್ಯ –

ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1–2–0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧಮಹರ್ಷಿಗೆ ಅಶ್ವನೀದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3–0–0. ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು–ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ: ಬಾಟ್ಲಿ 1ಕ್ಕೆ ರೂ. 2–0–0.
ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

ಶ್ರೀ। ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯಿದೆ.

ಆಯುರ್ವೇದ ಸಾರ

ಅಮೂಲ್ಯ ಕನ್ನಡ ವೈದ್ಯ ಗ್ರಂಥ

ಪಂಡಿತರು ಅಗತ್ಯವಾಗಿ ತಿಳಿದಿರಬೇಕಾದ ತತ್ತ್ವಗಳನ್ನೆಲ್ಲಾ ಬಹು ಗ್ರಂಥಗಳಿಂದ ಸಂಗ್ರಹಿಸಿ, ಬೇಕಾದಲ್ಲಿ ಪಾಶ್ಚಾತ್ಯ ಡಾಕ್ಟರರ ಮತ ಸಹ, ವಿಶದವಾಗಿ ವರ್ಣಿಸಿರುವ ಕನ್ನಡ ಗ್ರಂಥ ಇದು ಒಂದೇ. ಬಹು ಪ್ರಯೋಜನಕಾರಿಯಾಗಿ ಕಂಡ ಅನೇಕ ಹೊಸ ಔಷಧ ಯೋಗಗಳು ಮತ್ತು ಸ್ವತಂತ್ರವಾಗಿ ಚಿಕಿತ್ಸೆ ಮಾಡುವದಕ್ಕೆ ಬೇಕಾದ ಬಹಳ ಅನುಭವಗಳು ಇದರಲ್ಲಿ ಇವೆ. 'ಸ್ನಾಯುಮಂಡಲದ ರಚನೆ ಮತ್ತು ಅಧಿಕಾರ, 'ಪ್ರತಿ ಅಧ್ಯಾಯದಲ್ಲಿ 'ದುಷ್ಟಫಲ ಚಿಕಿತ್ಸೆ', 'ಪೃಥಗ್ಯೋಗೋಕ್ತೌಷಧಗಳು', 'ಪ್ರಕರಣಾನ್ತ ಟಿಪ್ಪಣಿ', ಇವೇ ಮೊದಲಾದವು ದ್ವಿತೀಯ ಭಾಗದ ವಿಶೇಷಗಳು. ೬೦೦ ಪ್ರತಿಗಳಷ್ಟೇ ಮುದ್ರಿತವಾಗಿರುವುದರಿಂದ ವಿಳಂಬದಿಂದ ಪ್ರತಿ ದೊರೆಯದೆ ಹೋಗುವ ಸಂಭವ ಇದೆ. ಪ್ರತಿ ಬೇಕಾದವರು ತ್ವರೆಯಾಗಿ ಕೆಳಗಣ ವಿಳಾಸಕ್ಕೆ ಬರಕೊಳ್ಳಬೇಕು. ಎರಡು ಅಥವಾ ಹೆಚ್ಚು ಪ್ರತಿಗಳನ್ನು ಒಮ್ಮೆಯೇ ಕೊಂಡುಕೊಳ್ಳುವವರಿಗೆ ರೂಪಾಯಿಗೆ ಒಂದಾಣೆಯಿಂದ ಎರಡಾಣೆ ವರೆಗೆ ಯುಕ್ತಕಂಡ ಡಿಸ್ಕೌಂಟು ಕೊಡಲಾಗುವುದು.

ಪ್ರಥಮ ಭಾಗ (೬೦೪ ಪುಟ) ರೂ. 6–8–0.
ದ್ವಿತೀಯ ಭಾಗ (೭೩೦ ಪುಟ) ರೂ. 6–8–0.
(ಟಪ್ಪಾಲು ಹಾಸಲು ಬೇರೆ)

ವಿಳಾಸ:— **ಪಿ. ರಾಮಕೃಷ್ಣಯ್ಯ,** ಬಿ.ಎ.,
(ನಿವೃತ್ತ) ಜಿಲ್ಲಾ ರಿಜಿಸ್ಟ್ರಾರ್,
ಕಂಬಳ, ಪೋಸ್ಟ್ ಮಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧ

ಮದನಮಂಜರಿ

ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ. ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ

ಕಾಮಶಕ್ತಿ ಹೆಚ್ಚಿಸಿ, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ನಿರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,
184, ಜೈನಾ ಬಜಾರ್, ಮದ್ರಾಸ್.

ಹೊಟ್ಟೆನೋವು, ವಾಂತಿ, ಅಜೀರ್ಣ, ಕಾಲರಾ, ಸೆಟೆಬೇನೆ, ಬವಳಿ ಮುಂತಾದ ಅನೇಕ ಬೇನೆಗಳಿಗಾಗಿ

ಜವೇರಿಯನ್ನರ ಜೀವನ ಮಿಕ್ಶ್ಚರವು

ರಾಮಬಾಣದಂಥ ಉಪಾಯವಾಗಿದೆ. ಇದನ್ನು ಹೊಟ್ಟೆಯಲ್ಲಿ ತೆಗೆದುಕೊಳ್ಳಬಹುದು. ಇಲ್ಲವೆ ಮೈ ಮೇಲೆ ಲೇಪಿಸಬಹುದು. ಡಾಕ್ಟರ ಮತ್ತು ವೈದ್ಯರು ಇಲ್ಲದ ವೇಳೆಯಲ್ಲಿ ಜವೇರಿಯನ್ನರ ಜೀವನ ಮಿಕ್ಶ್ಚರ ದಂಥ ನೆರವಾಗುವಂಥ ಔಷಧವು ಮತ್ತೊಂದಿಲ್ಲ.

ಪಟ್ಟಣಗಳಲ್ಲಿ ಕೆಮಿಸ್ಟರ ಅಂಗಡಿಗಳಲ್ಲಿಯೂ ಹಳ್ಳಿಪಳ್ಳಿಗಳಲ್ಲಿ ಕಿರಾಣೀ ಅಂಗಡಿಗಳಲ್ಲಿಯೂ ಈ ಔಷಧವು ಮಾರಲಿಕ್ಕೆ ಸಿಗುತ್ತದೆ.

ಎಮ್. ಎಚ್. ಜವೇರಿಯನ ಮತ್ತು ಕಂಪೆನಿ,
ದೇವಕರಣ ಮ್ಯಾನ್ಶನ್,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ, ೨.

ರಾಜಾ ಸ್ನೋ

ಅಂದಕ್ಕಾಗಿ

ಮಣ್ಯಂ, ಅಂಡ್ ಕೋ.,
ಮದರಾಸು ಮತ್ತು ಬೆಂಗಳೂರು

PANDIT BANK,
MANGALORE.

ಪಂಡಿತ್ ಬೇಂಕ್,
ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯುಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ	ಶೇಕಡಾ 1½ %
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ	ಶೇಕಡಾ 4½ %

PANDIT SHIVA RAO, B.A. LL.B.,
PROPRIETOR.
PANDIT SANJIVA RAO, B.A.
AGENT.

WANTED

Student Actors, Actresses, Sound Engineers and Cameramen for film under production. Very bright future. No previous experience necessary. Come on the screen in our next picture. Training given by well known studio of Bombay. Fully illustrated Prospectus FREE.

CINE-TECHNIC INSTITUTE,
MAZAGAON, BOMBAY 10.

A B... INTEREST
FORMS ...NY
WAY ...US;
THI ... ONE.
... ...hutable
to ... ia that is
what ... boast of.

THE CANARA BANK... ORPORATION, LTD.
(Incorporated in British India)

ಕಂಠೀರವ
KANTEERAVA
KANARESE, BI-WEEKLY

XXII] ಮುಂಗಳೂರು, ತಾರೀಕು ೬—೮—೧೯೪೦ [೩೭
೧೮೬೨ ವಿಕ್ರಮ ಸಂವತ್ಸರದ ಶ್ರಾವಣ ಶು। ೩ ಕುಜವಾರ

ನಾಟಕವು ಆಟವಲ್ಲ. ಜೀವನದ ಆಸೆಯ ಸಂಗ್ರಾಮ ದರ್ಶನ ಮಾರ್ಗ.
—ಸೂಕ್ತಿಮಾಲೆ.

ಜಗತ್ತಿನ ಎರಡು ಕೈಗಳು—
ಯುರೋಪು ಮತ್ತು ಆಸ್ಯಾ

'ಸ್ವಾತಂತ್ರ್ಯ ಮತ್ತು ನ್ಯಾಯಪರತೆ ಇವೇ ಅಸ್ತಿವಾರವಾಗಿ ಉಳ್ಳ ಜಗತ್ತಿನ ಹೊಸ ವ್ಯವಸ್ಥೆ"ಯ ಕುರಿತಾಗಿ, ನಾವು ಅಮೆರಿಕ ಹಾಗೂ ಯುರೋಪೀಯ ರಾಜನೀತಿಜ್ಞರ ಬಾಯಿಂದ ಎಷ್ಟೋ ಬಾರಿ ಕೇಳಿದ್ದೇವೆ. ಆದರೆ ಇವರ ಮಾತು ಆ "ಜಗತ್ತಿನ ಹೊಸ ವ್ಯವಸ್ಥೆ"ಯ ಕುರಿತಾಗಿಯಾದರೂ, ಇವರ ದೃಷ್ಟಿ ಯುರೋಪು ಹಾಗೂ ಅಲ್ಲಿನ ರಾಜಕೀಯಾಧಿಕಾರ ಇವುಗಳ ಮೇಲೆಯೇ ಮುಖ್ಯವಾಗಿ ಹೊಂದಿಕೊಂಡಿರುವಂತೆ ಭಾಸವಾಗುತ್ತದೆ. ವಸ್ತುತಃ ಯುರೋಪೀಯ ರಾಷ್ಟ್ರಗಳ ರಾಜಕೀಯ ಅಧಿಕಾರವು ಅದೊಂದು ತಕ್ಕಡಿಯಲ್ಲಿ ಸರಿಯಾಗಿ ಕೆಲಸ ಮಾಡಿಬಿಟ್ಟ ತೆಂದರೆ, ಮತ್ತೆ ಈ ರಾಜನೀತಿಜ್ಞರಿಗೆ ನಿಶ್ಚಿಂತೆ. ಕಾರಣವಿಷ್ಟೇ. ಯುರೋಪಿನಲ್ಲಿ ಯುದ್ಧವಾಡುತ್ತಿರುವ ಆ ರಾಷ್ಟ್ರಗಳು ತಮ್ಮೊಳಗೊಂದು ಒಪ್ಪಂದ ಮಾಡಿಕೊಂಡು, ಅಲ್ಲಿನ ರಾಜಕೀಯ ವಿದ್ಯಮಾನಗಳು ಹೆಚ್ಚು ಕಡಿಮೆಯಾಗದಂತೆ ಶಾಶ್ವತವಾಗಿ ಏರ್ಪಡಿಸಿಕೊಂಡವೆಂದರೆ, ಆ ಮೇಲೆ ಆ ರಾಷ್ಟ್ರಗಳ ನಾಯಕರು ಆಸ್ಯದ ಮತ್ತು ಆಫ್ರಿಕದ ಜನವರ್ಗಕ್ಕೆ "ನೀವು ನಮ್ಮನ್ನೇ ಅನುಸರಿಸಬೇಕು" ಎಂದು ಒತ್ತಾಯಪೂರ್ವಕವಾಗಿ ಕರ್ತವ್ಯೋಪದೇಶಮಾಡಲು ಯಾರೂ ಕೈ ತಡೆಯುವವರಿಲ್ಲ.

ಯುರೋಪೀಯ ಜನಾಂಗಗಳಿಗೆ, ಈ ಕರ್ತವ್ಯೋಪದೇಶದ ಹಕ್ಕು ಇಂದು ನಿನ್ನೆ ದೊರಕಿದುದಲ್ಲ. ಅವು ಆಸ್ಯಾ ಅಮೆರಿಕಾ, ಆಫ್ರಿಕಾಗಳಲ್ಲಿ ವ್ಯಾಪಾರಕ್ಕೆಂದು ಹೊರಟುದಿನಿಂದಲೂ, ಅವಕ್ಕೆ ಈ ಹಕ್ಕು "ಕ್ರುಷ್ಣ ಚೀಟು" ಆಗಿ ಹೋದಂತಿದೆ. ಅಮೆರಿಕದಲ್ಲಿ, ಈ ಹಕ್ಕಿನ ಪರಿಣಾಮವಾಗಿ, ಅಲ್ಲಿನ ಪ್ರಾಚೀನ ನಾಗರಿಕತೆಯಳಿದು, ಕೆಲವು ಕಡೆ ಅಲ್ಲಿನ ಮೂಲನಿವಾಸಿಗಳ ಉಚ್ಚಾಟನೆಯ ಕಾರ್ಯವೂ ಸಾಂಗವಾಗಿದೆ. ಆಫ್ರಿಕದಲ್ಲಿ "ವಿಭಾಗ"ದ ಸೂತ್ರಗಳು ಗೋಚರಿಸುತ್ತಿವೆ. ಆಸ್ಯಾದಲ್ಲಿ ರಷ್ಯಾ, ಫ್ರಾನ್ಸ್, ಹೊಲೆಂಡ್ ಮೊದಲಾದವು, ದಕ್ಷಿಣ ಆಸ್ಯವನ್ನೂ, ಇಂಡಿಯನ್ ಆರ್ಚ್‌ಪೆಲಗೋ ಮುಂತಾದುವನ್ನೂ ತಮ್ಮ ಹಿಡಿತದಲ್ಲಿರಿಸಿಕೊಂಡುದು ಕಂಡು ಬರುತ್ತಿದೆ. ಪುಣ್ಯಕ್ಕೆ ಚೀನಾವೊಂದು ಇವರ ವಶವಾಗದೆ ಉಳಿಯಿತು; ಇದಕ್ಕೆ ತಕ್ಕುದಾದ ಕಾರಣಗಳೇನಾದರೂ ಇರಬಹುದೆನ್ನಿ!

ಈ ವಿಷಯಗಳನ್ನು ಆಧಾರವಾಗಿ ಇರಿಸಿಕೊಂಡು, ನಾವು ಯುರೋಪಿನ ಇಂದಿನ ವಿದ್ಯಮಾನಗಳನ್ನು ವಿಮರ್ಶಿಸಿದರೆ, ಯುದ್ಧಮಾಡುತ್ತಿರುವ ಆ ಜನಾಂಗಗಳು, ತಮ್ಮ ಹಿರಿಯರಂತೆ, "ಯಜಮಾನಿಕೆ"ಗಾಗಿಯೂ, ಅದರೊಡನೆ ಅವುಗಳೊಳಗಿನ ಐಕ್ಯಕ್ಕಾಗಿಯೂ ಹೋರಾಡುತ್ತಿವೆ ಎಂದು ಉಚಿತವಾಗದ್ದಿರದು. ಆದರೆ ಈ ಉದ್ದೇಶವು ಎಷ್ಟು ಮಟ್ಟಿಗೆ ನೆರವೇರಬಲ್ಲುದೋ ಹೇಳಕೂಡದು. ಐಕ್ಯಕ್ಕೆಂದು, ಪ್ರಪಂಚದ ಶಾಂತಿಸ್ಥಾಪನೆಗೆ ಹುಟ್ಟಿದ್ದ ಆ "ಲೀಗ್ ಆಫ್ ನೇಶನ್ಸ್", ಆಗಲೇ ಬಲಾಬಲದ ತೂಕ ಹೆಚ್ಚು ಕಡಿಮೆ ... ರೋಗ ಹಿಡಿದು, ನರಳಿ, ಕೊರಗಿ ಸತ್ತಿತು. ಇನ್ನು, ಈಗಿನ ಯುದ್ಧವಿದು, ಯು...ರೋಪಿನ ಯಜಮಾನಿಕೆಗಾಗಿಯೂ, ಆಸ್ಯಾ, ಆಫ್ರಿಕಗಳ ಮೇಲಿನ ಪಾರುಪತ್ಯೆಗಾಗಿಯೂ ವಿರೋಧಿಪಕ್ಷದ ಜನಾಂಗಗಳೊಡನೆ ನಡೆಯುತ್ತಿದೆಯಾದರೂ ಮುಂದೆ ಯಾವ ಯಾವ ಜನಾಂಗಗಳು ಈ "ಶಕ್ತಿ ಪರೀಕ್ಷೆ"ಯಲ್ಲಿ ಕೃತಾರ್ಥವಾಗುವುದೋ ನೋಡಬೇಕು.

ಯುರೋಪಿನ ಎಷ್ಟೋ ಜನಾಂಗಗಳು, ಎಷ್ಟೋ ಚಿಕ್ಕಪುಟ್ಟ ಜನಾಂಗಗಳನ್ನು ನುಂಗಿ ತಮ್ಮೊಳಗೆ ಸಮಾವೇಶಗೊಳಿಸಿಕೊಂಡೇ ದೊಡ್ಡದಾಗಿ ಬೆಳೆದಿವೆ. ಇಂದು ಯುರೋಪಿನಲ್ಲಿ ನಡೆಯುತ್ತಿರುವ ವ್ಯಾಪಾರವಾದರೂ ಅದರ ಗುರಿಯಾದರೂ ಇದೇ ಆಗಿರಬಹುದು. ಇಂದು ಹಾಲೆಂಡ್, ಬೆಲ್ಜಿಯಮ್ಮುಗಳು ಜರ್ಮನಿಯ ಅಧೀನ ರಾಷ್ಟ್ರಗಳಾಗುವುವೇ ಅಥವಾ ರಾಜತ್ವದ ರಾಷ್ಟ್ರಗಳಾಗುವುವೇ ಎಂಬ ವಿಷಯದಲ್ಲಿ ಪ್ರಪಂಚದಲ್ಲಿ ಯಾರಿಗೂ ಹೆಚ್ಚಿನ ಗಮನವಿದ್ದಂತಿಲ್ಲ. ಬಲಿಷ್ಠವಾದ ಜನಾಂಗಗಳಿಗೆ ಅನ್ಯ ರಾಜ್ಯಗಳ "ಸ್ವಾಹಾಕಾರ" ಅಥವಾ ಆತ್ಮರಕ್ಷಣೆಯಷ್ಟೇ ಇಂದು ಮುಖ್ಯವೆಂದು ತೋರುತ್ತದೆ. ಹಾಗೆನ್ನುವಾಗ, "ಸ್ವಾತಂತ್ರ್ಯ, ನ್ಯಾಯಪರತೆ" ಮುಂತಾದ ಶಬ್ದಘೋಷಗಳೆಲ್ಲ ಏತಕ್ಕೆ ಬಾಯುಪಚಾರಕ್ಕೇ ಎಂದು ಒಬ್ಬನು ಕೇಳುವಂತಾಗಿದೆ. ನಿಜವಾಗಿಯೂ "ಸ್ವಾತಂತ್ರ್ಯ" ಶಬ್ದಕ್ಕೆ ಬೆಲೆ ಇದ್ದರೆ, ಡಚ್ಚರಿಗೂ, ಬೆಲ್ಜಿಯನರಿಗೂ ಅದು ಅಗತ್ಯವೆಂದೇ ಒಬ್ಬನು ಸಾಧಿಸುವುದಾದರೆ, ಕಾಂಗೋದ ನಿಗ್ರೋಗಳಿಗೂ, ಜಾವಾ, ಸುಮಾತ್ರಗಳ ಜನರಿಗೂ ಅದೇ "ಸ್ವಾತಂತ್ರ್ಯ"ವು ಅಷ್ಟೇ ಬೆಲೆಯುಳ್ಳದಾಗದೇಕೆ? ನ್ಯಾಯನೀತಿಯೊಡನೆ ಜಗತ್ತಿನಲ್ಲಿ ಹೊಸ ವ್ಯವಸ್ಥೆಯನ್ನು ಸ್ಥಾಪಿಸಲಿಳಸುವವರು ಬೆ... ಯಂ—ಹೊಲೆಂಡ್ ಮುಂತಾದ ರಾಷ್ಟ್ರಗ... ಬಿಳೀ ಅರಸರೊಡನೆ ಮಾತ್ರ ತಮ್ಮ ಸಹಾನುಭೂತಿಯನ್ನು ತೋರಿದರೆ ಸಾಲದು; ಪರಾಶ್ರಯದಲ್ಲಿ ಬಾಳುತ್ತಿರುವ ಜಗತ್ತಿನ ಯಾವತ್ತು ರಾಷ್ಟ್ರಗಳೊಡನೆಯೂ ಏಕಪ್ರಕಾರವಾದ, ನಿಷ್ಪಕ್ಷಪಾತ ಬುದ್ಧಿಯನ್ನು ತೋರಿದರೆ ಮಾತ್ರ, "ಜಗತ್ತಿನ ಹೊಸ ವ್ಯವಸ್ಥೆ" ಆಚರಣೆಯಲ್ಲಿ ಬರುವಂತಾದೀತು; ಆದಾಗ ಸಾರ್ಥಕವೆಂದೂ ಎನ್ನಿಸೀತು.

ಎಣ್ಣೆಯ ಮೇಲಿನ ಅಮೇರಿಕದ ಬಹಿಷ್ಕಾರ

ಅಮೆರಿಕದವರು ಪೆಟ್ರೋಲ್ ಎಣ್ಣೆಯ ಮೇಲೆ ಹಾಕಿರುವ ಈ ಬಹಿಷ್ಕಾರವು ಜಪಾನಿನಲ್ಲಿಯೂ, ಬ್ರಿಟನಿನಲ್ಲಿಯೂ ತಕ್ಕಷ್ಟು ಪರಿಣಾಮವನ್ನು ಉಂಟುಮಾಡದಿರದು. ಬ್ರಿಟನ್ ವರ್ಷಕ್ಕೆ ಅಮೆರಿಕದಿಂದ ೨ ಲಕ್ಷ ಟನ್ ಎಣ್ಣೆಯನ್ನು ಕೊಳ್ಳುತ್ತಿದ್ದು, ಈ ವ್ಯಾಪಾರಕ್ಕೆ ಎಷ್ಟು ಮಟ್ಟಿನ ತೊಂದರೆಯಾದೀತೆಂಬುದು ಕೆನಡಕ್ಕೆ ಅಮೆರಿಕವು ಮಾರುವ ಎಣ್ಣೆಯ ಪ್ರಮಾಣದ ಮೇಲೆ ಹೊಂದಿಕೊಂಡಿದೆ. ಆದರೆ ಜಪಾನಿಗೆ ಈ ಬಹಿಷ್ಕಾರದಿಂದ ಹೆಚ್ಚಿನ ಪೆಟ್ಟಾಗಲಿದೆ. ಜಪಾನಿನವರು ಅಮೆರಿಕದ ಈ ಬಹಿಷ್ಕಾರವನ್ನು ಜಪಾನಿನ ವಿರುದ್ಧವಾದ ಚಳವಳವೆಂದು ಭಾವಿಸಿ, ಉತ್ಕೃಷ್ಟ ತರಗತಿಯ ಪೆಟ್ರೋಲ್ ಧಾರಾಳವಾಗಿರುವ ಡಚ್ ಈಸ್ಟ್ ಇಂಡೀಸಿನ ಮೇಲೆ ಕೈ ಮಾಡಲೂ ಬಹುದೆಂಬ ಸಂದೇಹ ಬಂದಿದೆ. ಆ ಈಸ್ಟ್ ಇಂಡೀಸನ್ನು ಈಗ ಕೆಲವಂಶದ ಡಚ್ಚರ ಬಲಗಳು ಕಾಯುತ್ತಿವೆ. ಒಂದು ವೇಳೆ, ಜಪಾನ್ ಆ ಇಂಡೀಸನ್ನು ಆಕ್ರಮಿಸಿದಲ್ಲಿ ಆಸ್ಟ್ರೇಲಿಯಕ್ಕಿರುವ ಬ್ರಿಟಿಷರ ಮಾರ್ಗಕ್ಕೆ ತಡೆಯುಂಟಾಗುತ್ತಿದೆ. ಜಪಾನರೊಡನೆ ಇಂತಹ ತಕರಾರುಗಳು ಬೇಡವೆಂದೇ ಬ್ರಿಟನ್ ಬರ್ಮಾ ಮಾರ್ಗವನ್ನು ಮುಚ್ಚಿದ್ದರೂ, ಆಸ್ಟ್ರೇಲಿಯಾ—ಬ್ರಿಟನುಗಳ ವ್ಯವಹಾರದ ಭಯವು ಇದರಿಂದ ಹೆಚ್ಚಿದೆ.

ಬ್ರಿಟನಿನ ರಕ್ಷಣೆ

ಬ್ರಿಟನಿನ ರಕ್ಷಣೆಗಾಗಿ ಸರ್ವಸಿದ್ಧತೆಗಳೂ ನಡೆದಿವೆ. ಗಣಿಯವರು, ಕಾರ್ಖಾನೆಗಳ ಕೆಲಸಗಾರರು, ಡಾಕುಗಳ ಉದ್ಯೋಗಿಗಳು ಎಲ್ಲರೂ ಗೃಹರಕ್ಷಕರಾಗಿ ಮುಂದೆ ಬಂದಿದ್ದಾರೆ. ಇವೆಲ್ಲ ಬಲಗಳೂ ಆಕಾಶ ಮತ್ತು ಜಲ ಮಾರ್ಗಗಳಲ್ಲಿನ ಹಿಟ್ಲರನ ಆಕ್ರಮಣವನ್ನು ತಡೆಯಲು ತಯಾರಾಗಿ ನಿಂತಿವೆ. ಬ್ರಿಟನಿನ ಪೂರ್ವ ಭೂಭಾಗದಲ್ಲಿ, ನೆಲಸೈನ್ಯಗಳನ್ನು ಇದಿರಿಸಲು, ಈ ಕೆಲ ವಾರಗಳಲ್ಲಿ ಅಸಾಧ್ಯ ಹವಣಿಕೆಗಳೂ ನಡೆದಿವೆ.

ರುಮೇನಿಯದ ವ್ಯವಹಾರ

ಹಂಗೇರಿ—ಬಲ್ಗೇರಿಯಗಳ ಕೇಳಿಕೆಗಳ ವಿಚಾರದಲ್ಲಿ ಅನಾದರ ತೋರುತ್ತಿರುವ ರುಮೇನಿಯವನ್ನು ಜರ್ಮನ್ ಪತ್ರಿಕೆಗಳು ಎಚ್ಚರಿಸಿವೆ. ಹೇಗೂ ಈ ಕುರಿತು ರುಮೇನಿಯವು ಸದ್ಯದಲ್ಲೇ ನೇರವಾದ ವ್ಯವಹಾರವನ್ನಾರಂಭಿಸಲಿದೆ. ಇದು ಬೇಗನೇ ಸುಲಭದಲ್ಲಿ ಮುಗಿಯುವ ಹಾಗೆ ತೋರಲಿಲ್ಲ. ಕಾರಣ ಅವರಿವರ ಸೂಚನೆಗಳು, ಅದರ ಮೇಲಿನ ಚರ್ಚೆ, ತೀರ್ಮಾನಗಳೆಂದರೆ, ಸೆಪ್ಟೆಂಬರಿನ ಮಧ್ಯದ ತನಕವೂ ಸಾಗಬಹುದು.

ಫ್ರೆಂಚ್ ಕರಾವಳಿಯಲ್ಲಿ ಜರ್ಮನರ ದೂರದ ಫಾಸಲೆಯ ಫಿರಂಗಿಗಳು

ಫ್ರೆಂಚ್ ಕರಾವಳಿಯ ಉದ್ದಕ್ಕೂ ಜರ್ಮನರು ತಮ್ಮ ದೂರದ ಫಾಸಲೆಯ ಫಿರಂಗಿಗಳನ್ನೇರಿಸುತ್ತಿರುವರೆಂದು ಸುದ್ದಿ ಬಂದಿದೆ ಆದರೆ ಅಂತಹ ಕೋವಿಗಳು ಹಲವಿಲ್ಲ. ಮೆತ್ತವುಗಳ ಪ್ರಯೋಗವಾದರೂ ದಷ್ಟ ಗೋಡೆಗಳ ಕಡೆಗೆ; ಅಥವಾ ಉಕ್ಕಿನ ಕೋಟೆಗಳ ಕಡೆಗೆ ಮಾತ್ರ ಆದುದರಿಂದ ಈ ಕೋವಿಗಳ ಉಪಯೋಗ ಬ್ರಿಟನಿನಲ್ಲಿ ಫಲಕಾರಿಯಲ್ಲವೆಂದು ಹೇಳಲಾಗಿದೆ.

ತೆನ್ನಾಲಿ ಮುನಿಸಿಪಲ್ ಕೌನ್ಸಿಲು, ಅಲ್ಲಿನ ಕಮಿಶನರು ಆ ಕೌನ್ಸಿಲಿನ ನವುಕರರು ಮಾತ್ರ ವೆಂದೂ, ಅವರು ಆ ಕಾರಣದಿಂದ ಯುದ್ಧದ ಕಮಿಟಿಯಲ್ಲಿ ಕೆಲಸ ಮಾಡಕೂಡದೆಂದೂ ಒಂದು ಠರಾವನ್ನು ಮಂಜೂರುಮಾಡಿದೆ. ಕೌನ್ಸಿಲಿನ ಚೆಯರ್‌ಮೇನರು, ಕಮಿಶನರು ಸರಕಾರದ ಉದ್ಯೋಗಸ್ಥರೋ ಅಥವಾ ಕೌನ್ಸಿಲಿನದೋ ಎಂಬ ಸಂದೇಹನಿವೃತ್ತಿಗಾಗಿ ಮೇಲಕ್ಕೆ ಬರೆದು ಕೊಂಡಿದ್ದಾರೆ.

ಅಲ್ಮೋರಾ ಪ್ರಾಂತದಲ್ಲಿ ನೆರೆ ಬಂದು ೩ ಮಂದಿ ಹೆಂಗಸರು ತೇಲಿಕೊಂಡು ಹೋದರು. ಬೆಳೆಗಳಿಗೂ ವಿಪರೀತ ನಷ್ಟವುಂಟಾಗಿದೆ.

ಕಲ್ಕತ್ತೆಯ ಹಾಲ್ವೆಲ್ ಸ್ಮಾರಕವನ್ನು ಈಗಿದ್ದಲ್ಲಿಂದ ತೆಗೆಯುವ ವಿಚಾರದಲ್ಲಿ ಬಂಗಾಳಾ ಸರಕಾರವು ಸಿಮ್ಲಾದ ಅಪ್ಪಣೆಗಾಗಿ ವ್ಯವಹಾರ ನಡೆಸುತ್ತಿದೆ.

ಬೊಂಬಯಿಯಲ್ಲಿ ಆ ನಗರದ ಪೋಲೀಸರಿಗೂ, ವಾರ್ತಾ ಪತ್ರಿಕೆಗಳಿಗೂ ಸಮೀಪ ಸಂಬಂಧವನ್ನು ಕಲ್ಪಿಸಲು, ಅಮೆರಿಕಾ, ಇಂಗ್ಲೆಂಡ್‌ಗಳಲ್ಲಿರುವಂತೆ, ಒಂದು "ಸೆಂಟ್ರಲ್ ಬ್ಯೂರೋ"ವನ್ನು ಸ್ಥಾಪಿಸಲಾಗುವುದು.

ಕಲ್ಕತ್ತೆಯ ಪೋಸ್ಟಲ್ ಕ್ಲಬ್ಬಿನ ೩೨ನೆಯ ವಾರ್ಷಿಕೋತ್ಸವದಲ್ಲಿ, ಪೋಸ್ಟ್ ಮತ್ತು ಟೆಲಿಗ್ರಾಫ್‌ಗಳ ಡೈರೆಕ್ಟರ್ ಜನರಲರಾದ ಸರ್. ಜಿ. ವಿ. ಬೇವೂರರವರು ಭಾಷಣಮಾಡುತ್ತ "ಪೋಸ್ಟಲ್ ಇಲಾಖೆಯ ನವುಕರರ ಕಷ್ಟಕ್ಲೇಶಗಳೇನಿದ್ದರೂ ಅವು ಕಾಲಧರ್ಮದಿಂದ ನಿವಾರಣೆಯಾಗುವುವು" ಎಂದು ಉಪದೇಶಿಸಿದರು.

ಲೋಕಮಾನ್ಯ ತಿಲಕರ ಪುಣ್ಯತಿಥಿಯು ಕಲ್ಕತ್ತಾ, ವಾರ್ಧಾ, ಅಹಮ್ಮದಾಬಾದ್, ಪೂನಾ, ನಾಗ್ಪುರ, ಮದ್ರಾಸ್ ಮೊದಲಾದ ಎಲ್ಲ ಕಡೆಗಳಲ್ಲಿಯೂ ಸಮಯೋಚಿತ ಕಾರ್ಯಕ್ರಮಗಳೊಡನೆ ಜರುಗಿದುವು.

ಮದ್ರಾಸ್ ಗವರ್ನರರ ಯುದ್ಧನಿಧಿಯಿಂದ ಇನ್ನೊಂದು ಲಕ್ಷ ರೂಪಾಯಿಗಳನ್ನು ಲಂಡನಿಗೆ ವಿಮಾನ ಮಂತ್ರಿಗಳಿಗೆ ಬಾಂಬರು ಅಥವಾ ಫೈಟರುಗಳನ್ನು ಕೊಳ್ಳಲು ಕಳುಹಿಸಲಾಗಿದೆ. ಒಟ್ಟಿಗೆ ಈ ನಿಧಿಯಿಂದ ಯುದ್ಧ ಕಾರ್ಯಕ್ಕಾಗಿ ಇದುವರೆಗೆ ಸಂದಿರುವ ಹಣ ೫೩ ಲಕ್ಷ.

ಚಿತ್ತೂರು ಕಲೆಕ್ಟರರ ಅಪೇಕ್ಷೆಯಂತೆ ಚಿತ್ತೂರಿನ ಯುದ್ಧ ವಿಮಾನ ನಿಧಿಗೆ ತಾನೇನೂ ವಂತಿಗೆ ಕೊಡಲಾರೆನೆಂದು ಅಲ್ಲಿನ ಜಿಲ್ಲಾ ಬೋರ್ಡ್ ತನ್ನ ಅಶಕ್ತತೆಯನ್ನು ಸೂಚಿಸಿದೆ.

ಮದ್ರಾಸ್ ಗವರ್ನರರ ಯುದ್ಧನಿಧಿಗೆ ಇದೇ ಆಗೋಸ್ತು ತಾ. ೧೮ ವರೆಗೆ ಜಮೆಯಾದ ಮೊತ್ತ ರೂ. ೧೧,೩೯,೦೬೯ — ೮ — ೫ ಆಗಿದೆ.

ವ್ಯಾಪಾರದ ಶಾಖೆಯ ಸಚಿವರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರು, ಇನ್ಶ್ಯೂರೆನ್ಸ್ ಕಾಯಿದೆಯ ಕೆಲವು ತಿದ್ದುಪಡಿಗಳ ಸಮಾಲೋಚನೆಗಾಗಿ, ಈ ತಿಂಗಳ ಅಂತ್ಯಕ್ಕೆ ಇನ್ಶ್ಯೂರೆನ್ಸ್ ಪ್ರತಿನಿಧಿಗಳದೊಂದು ಕಾನ್ಫರೆನ್ಸನ್ನು ಸೇರಿಸಲಿರುವರೆಂದು ಪ್ರಕಟವಾಗಿದೆ.

ಕಳೆದ ಜುಲ್ಯೈ ತಾ. ೨೮ ವರೆಗೆ, ೪ ಮಂದಿ ಮುಸ್ಲಿಮರು ಕೂಡಾ ೨೬೮ ಮಂದಿ ಸತ್ಯಾಗ್ರಹಿಗಳನ್ನು ಹಾಲ್ವೆಲ್ ಸ್ಮಾರಕದ ಸಂಬಂಧ ಕೈದು ಮಾಡಿರುವುದಾಗಿ ಬಂಗಾಳ ಹೋಂ ಮಿನಿಸ್ಟರರ ಹೇಳಿಕೆಯಾಗಿದೆ.

ತುರ್ಕಿಯ ಈಚಿಗಿನ ಭೂಕಂಪಗಳ ಕಷ್ಟ ನಿವಾರಣೆಗಾಗಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯವರು ಅತ್ತ ಕಳುಹಿಸಿದ ಜುಮ್ಲಾ ಮೊತ್ತ ೩,೬೦,೦೩೫ ರೂ ಗಳೆಂದು ತಿಳಿದು ಬರುತ್ತಿದೆ.

ಇಂಡಿಯನ್ ಡಿಫೆನ್ಸ್ ಲೋನ್ಸುಗಳಿಗಾಗಿ ಇದೇ ಜುಲ್ಯೈ ತಾ. ೨೬ರ ವರೆಗೆ ಚಂದಾ ಅರ್ಪಿಸಲ್ಪಟ್ಟ ಒಟ್ಟು ಮೊತ್ತ ೨,೨೪,೬೫,೦೦೦ ರೂ. ಗಳೆಂದೂ, ಇದೇ ಆಗೋಸ್ತು ತಾ. ೧೦ರಲ್ಲಿ ಆರಂಭವಾದ ಹೊಸ ೧೯೪೬ ಡಿಫೆನ್ಸ್ ಬಾಂಡುಗಳಿಗಾಗಿ ಒಟ್ಟಿಗೆ ೧೧,೪೧,೯೪,೨೦೦ ರೂ.ಗಳ ಚಂದಾ ಅರ್ಪಿಸಲ್ಪಟ್ಟಿದೆ ಎಂದೂ ಪ್ರಕಟವಾಗಿದೆ.

ಒಬ್ಬ ಅಡ್ವೊಕೇಟರು ರೋಹರಿಯಂದ
ತ್ತಿದ್ದಾಗ ಯಾರೋ
ಅವರ ಮೇಲೆ ಬಿದ್ದು
ಗಾಯವಾಗಿದೆ.
ಪುಂಡರ ದಸ್ತಗಿರಿಗಾರ
ಮುಂದಿಯನ್ನು ಒಂದು
ವರ್ಷಗಳ ವರೆಗಿನ ಜೈಲು
ಲಾಗಿದೆ.

ರಾಷ್ಟ್ರಪತಿಗಳಾದ ಮೌಲಾನ
ಶಿವ ಗ್ರಾಮದಲ್ಲಿ ಮಹಾತ್ಮಾ ಗ
ಭೇಟ ಮಾಡಿ ಪೂನೆಯ ಈಚಿಗಿನ ವರ್ಕಿಂಗ್
ಕಮಿಟಿ ಹಾಗೂ ಸಮಗ್ರ ಭಾರತ ಕಾಂಗ್ರೆಸ್
ಕಮಿಟಿಗಳ ಮೀಟಿಂಗಿನಲ್ಲಿ ನಡೆದುದೇನೆಂಬು
ದನ್ನು ಮಹಾತ್ಮರಿಗೆ ಶ್ರುತಪಡಿಸಿದರು. ವರ್ಕಿಂ
ಗ್ ಕಮಿಟಿಯ ಮುಂದಿನ ಅಧಿವೇಶನವು ವಾರ್ಧಾ
ದಲ್ಲಿ ಈ ತಿಂಗಳ ಕೊನೆಯಲ್ಲಿ ಅಥವಾ ಬರುವ
ತಿಂಗಳ ಆದಿಭಾಗದಲ್ಲಿ ಜರುಗಬಹುದೆಂದು
ಈಗಿನ ತೀರ್ಮಾನ.

ಮೈಸೂರು ಮಹಾರಾಜರು ದಿವಂಗತರಾದರು

ಮೈಸೂರಿನ ಘನವನ್ನೈದಿದ ಶ್ರೀಮನ್ಮಹಾರಾಜರವರಾದ ಶ್ರೀ. ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ, ಜಿ. ಬಿ. ಇ. ಇವರು ಬೆಂಗಳೂರಲ್ಲಿ ಕಳೆದ ಶನಿವಾರ ರಾತ್ರಿ ಕೈಲಾಸವಾಸಿಗಳಾದರೆಂದು ಅರುಹಲು ಅತ್ಯಂತ ವಿಷಾದ ವೆನಿಸುತ್ತಿದೆ

ಶ್ರೀಮನ್ಮಹಾರಾಜರಿಗೆ ಕಳೆದ ಒಂದು ವಾರದ ಸುಮಾರಿನಿಂದ ಹೃದ್ರೋಗದ ಬಾಧೆ ಯುಂಟಾಗಿ, ನಡುವೆ ಕೊಂಚ ಗುಣವಾದಂತೆ ಕಂಡುಬಂದರೂ, ಕೊನೆಗೆ ಅದು ಅವರ ಪ್ರಾಣವನ್ನೇ ಅಪಹರಿಸಿಕೊಂಡು ಹೋಯಿತು.

ಶ್ರೀಮನ್ಮಹಾರಾಜರ ಅವಸಾನ ಕಾಲದಲ್ಲಿ ಮಹಾರಾಣಿಯವರೂ, ಯುವರಾಜ ಯುವರಾಣಿಯವರೂ, ದಿವಾನರೂ, ಮತ್ತಿತರ ಪ್ರಮುಖ ಅಧಿಕಾರಿವರ್ಗದವರೂ ಅರಮನೆಯಲ್ಲಿದ್ದರು. ಶ್ರೀಮನ್ಮಹಾರಾಜರಿಗೀಗ ೫೭ನೆಯ ವರ್ಷ ನಡೆಯುತ್ತಿದ್ದಿತು.

ಮೈಸೂರು ಸಂಸ್ಥಾನಕ್ಕೆ ಸಂಸ್ಥಾನವೇ ಶೋಕಸಾಗರದಲ್ಲಿ ಮುಳುಗಿದೆ. ಬೆಂಗಳೂರಿನ ಸಿನೆಮಾ, ಆಂಗಡಿಗಳೂ, ಸಾರ್ವಜನಿಕ ಹಾಗೂ ಖಾಸಗೀ ಸಂಸ್ಥೆಗಳೂ ಅಂದು ತಮ್ಮ ವ್ಯವಹಾರವನ್ನು ನಿಲ್ಲಿಸಿದ್ದುವು.

ಶ್ರೀಮನ್ಮಹಾರಾಜರ ಶವವನ್ನು ಮೈಸೂರಿಗೆ ತಂದು ಅಲ್ಲಿ ಮುಂದಿನ ಸಂಸ್ಕಾರಗಳು ನಡೆದುವು. ೧೩ ದಿನಗಳ ವರೆಗೆ ಸಾರ್ವಜನಿಕ ಶೋಕಪ್ರದರ್ಶನವು ಆ ಸಂಸ್ಥಾನದಲ್ಲಿ ನಡೆಯುವುದು.

ಕರಾಚಿ ಮುನಿಸಿಪಲ್ ಕಾರ್ಪರೇಶನಿನ ಎಕೌಂಟ್ಸ್ ಶಾಖೆಯಲ್ಲಿ ಸುಮಾರು ೬೦ ಸಾವಿರ ರೂಪಾಯಿಗಳ ಹೆಚ್ಚು ಕಡಿವೆ ನಡೆದಿದೆಯಾಗಿ ಕಂಡು ಬಂದಿದೆ. ಸಿ. ಐ. ಡಿ.ಗಳು ತನಿಖೆ ಕ್ರಮ ಜರುಗಿಸುತ್ತಿದ್ದಾರೆ.

ಆಕೋಲಾ ಪ್ರಾಂತದಲ್ಲಿ ವಿಪರೀತ ಮಳೆ, ಮಹಾ ಪ್ರವಾಹಗಳಿಂದ ಅಲ್ಲೆಲ್ಲ ನೂರಾರು ಮನೆಗಳು ಬಿದ್ದು ಸಾವಿರಾರು ಮಂದಿ ಮನೆಮಾರಿಲ್ಲದ ಅನಾಥರಾಗಿದ್ದಾರೆ.

ರಾಜಷಾಹಿಯಲ್ಲಿ [illegible]ಲರೂ, [illegible]ನ ಮುನಿಸಿಪಾಲಿಟಿಯ ಮಾಜಿ ಚೆಯರ್‌ಮ್ಯಾನರೂ ಆಗಿದ್ದ ರ್ಯಾಬಹದೂರ್ ದೇವೇಂದ್ರನಾಥ ದಾಸ್ ಎಂಬವರು ಅಸಿll ಸೆ�ll ಜಡ್ಜರ ಕೋರ್ಟಿನಲ್ಲೊಂದು ಮೊಕದ್ದಮೆಯನ್ನು ನಡೆಸುತ್ತಿದ್ದ ಹಾಗೆ ಅಲ್ಲೇ ಬಿದ್ದು ೨ ಮಿನಿಟಿನಲ್ಲಿ ಮೃತರಾದರು.

ಜೊಹರಾತ್ ಪ್ರಾಂತದ ದೊಡ್ಡ ಟೀ ಪ್ಲಾಂಟರರಾದ ಶ್ರೀ. ಎಸ್. ಪ್ರಸಾದ ಬರೂಹಾರವರೂ, ಅವರ ಸಹೋದರರ ಪುತ್ರರಾದ ಶ್ರೀ. ಶೈಲೇಂದ್ರ ಪ್ರಸಾದ ಬರೂಹಾರವರೂ, ಅಸ್ಸಾಮಿನ ಒಂದು ವಿಶ್ವವಿದ್ಯಾನಿಲಯಕ್ಕಾಗಿ ೩ ಲಕ್ಷ ರೂಪಾಯಿಗಳ ದಾನವೀಯುವೆವೆಂದು ಸರಕಾರಕ್ಕೆ ತಿಳಿಸಿರುವುದಲ್ಲದೆ, ಶ್ರೀ. ಶೈಲೇಂದ್ರರು ಜೋಹರಾತಿನಲ್ಲಿ ಒಂದು ಮೆಟರ್ನಿಟಿ ಆಸ್ಪತ್ರೆಗಾಗಿ ಪ್ರತ್ಯೇಕವಾಗಿ ೫೦ ಸಾವಿರ ರೂಪಾಯಿಗಳನ್ನೂ ತಾವು ಕೊಡುವೆವೆಂದಿರುವರು. ಅಲ್ಲದೆ ಅಸ್ಸಾಂ ಯುದ್ಧ

ಕಾಪಾಡಿರಿ

ದೆ ಮತ್ತು ಗಂಟಲು
ನ್ನು ಸಂಧಿಸುತ್ತದೆ.
ಮ್ಮೆ, ನೆಗಡಿ, ಶೀತ
ಪ್ಸ್, ಕ್ರಿಮಿನಾಶಕ
, ಸೋಂಕು ತಗುಲ
ಳ್ಳಿ. ಪೆಪ್ಸ್ ಬಾಯಿ
ಔಷಧೀಯ ಸಾರಗಳನ್ನು
ಗೂ ಇವು ಶ್ವಾಸದೊಂದಿಗೆ ಪ್ರಶ್ವಸ
ಕ್ಕೆ ಸೇರುವುವು. ಹೀಗೆ ಪೆಪ್ಸ್ ಗಂಟಲು
ನಾಳವನ್ನು ಶಾಂತಗೊಳಿಸಿ, ಶ್ವಾಸ ನಳಿಗೆಗಳನ್ನು ಬಲ
ಗೊಳಿಸುವುದು. ಇದು ಸೋಂಕು
ರೋಗಾಣುಗಳನ್ನು ನಿವಾರಿಸಿ,
ಉರಿತಗ್ಗಿಸಿ, ಕಫ ನೀಗಿಸುವುದು
ಮತ್ತು ಕೆಮ್ಮು, ನೆಗಡಿ, ಫ್ಲೂಗಳನ್ನು ಎದುರಿಸಲು ಪ್ರತಿರೋಧ ಶಕ್ತಿಯನ್ನು ಹೆಚ್ಚಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ್‌ನ್ನು ಒಂದು ರೂಪಾಯಿಯಂತೆ ಮಾರುತ್ತಾರೆ. ವಿಜಂಟರು:—ಮೆಸರ್ಸ್ ದಾಫಾ ಎಂಡ್ ಕೊ, ಪಾರ್ಕ್ ಟೌನ್, ಮದ್ರಾಸು.

ಪೆಪ್ಸ್ ಸೇವಿಸಿ

PEPS

ಕ್ರಿಮಿನಾಶಕ ಶ್ವಾಸನೀಯ ಬಿಲ್ಲೆಗಳು

ಸಿಧಿಗೆ ಮೊದಲಿನವರು ೨೦ ಸಾವಿರವನ್ನೂ, ಶ್ರೀ. ಶೈಲೇಂದ್ರರು ೫ ಸಾವಿರವನ್ನೂ ಕೊಟ್ಟು ತಮ್ಮ ಧರ್ಮಬುದ್ಧಿಯನ್ನು ಪ್ರಕಟಗೊಳಿಸುವುದರೊಂದಿಗೆ, ಶೈಲೇಂದ್ರರು ಯುದ್ಧ ಮುಗಿಯುವ ತನಕ ತಿಂಗಳಿಗೆ ೧ ಸಾವಿರದಂತೆ ಕೊಡುವೆವೆಂದೂ ವಾಗ್ದಾನಮಾಡಿದ್ದಾರೆ.

ಕಲ್ಕತ್ತೆಯ ಕಾರ್ಪರೇಶನ್ ಸರಕಾರದ ಅಲ್ಲಿನ ವಿಮಾನದಾಳಿಯ ರಕ್ಷಣೆಯ ಏರ್ಪಾಡುಗಳಲ್ಲಿ ಸಹಕರಿಸಲು, ಬಹುಮತದ ಒಂದು ನಿರ್ಣಯದ ಮೂಲಕ ನಿರಾಕರಿಸಿದೆ.

ಕೌನ್ಪುರದಲ್ಲಿ ಹಜ್ಜ ಹಗಲಲ್ಲಿ, ಅಲ್ಲಿಯ ಜನರಲ್ ಪೋಸ್ಟ್ ಆಫೀಸಿನ ಕ್ಯಾಷಿಯರ್, ಇಂಪೀರಿಯಲ್ ಬ್ಯಾಂಕಿನಿಂದ ೨೦ ಸಾವಿರ ರೂಪಾಯಿಗಳನ್ನು ಆಫೀಸಿಗೆ ತರುತ್ತಿದ್ದಾಗ, ೧೬ ವರ್ಷ ಪ್ರಾಯದ ಮೂವರು ಹುಡುಗರು,—ಪಿಸ್ತೂಲುಗಳನ್ನು ಕೈಯಲ್ಲಿ ಹಿಡಿದಿದ್ದವರು,—ಕ್ಯಾಷಿಯರ ಕಡೆಗೆ ಗುಂಡು ಹಾರಿಸಿ, ಅವರನ್ನು ಗಾಯಗೊಳಿಸಿ, ಅವರಿಂದ ಆ ಹಣ ಅಪಹರಿಸಲು ಯತ್ನಿಸಿದ ಹಾಗೂ, ಅದರಲ್ಲಿ ಕೃತಾರ್ಥರಾಗದೆ ಓಟ ಕಿತ್ತಾಗ ಪೋಲೀಸರು ಬೆನ್ನಟ್ಟಿ ಅವರನ್ನು ಹಿಡಿದಿರುವ ಹಾಗೂ ವಾರ್ತೆ.

ಬೊಂಬಯಿಯಲ್ಲಿ ೮ ಮಂದಿ, ನಾಗ್ಪುರದಲ್ಲಿ ೪ ಮಂದಿ, ಪೊಳ್ಳಾಚಿಯಲ್ಲಿ ೩ ಮಂದಿ,—ಹೀಗೆ ಅಲ್ಲಲ್ಲಿ ಇಂಡಿಯಾ ಡಿಫೆನ್ಸ್ ಆಕ್ಟಿನ ಮೇರೆಗೆ ದಸ್ತಗಿರಿಗಳಾಗಿವೆ.

ಪಂಜಾಬಿನ ೩೬ ಮುನಿಸಿಪಾಲಿಟಿಗಳಲ್ಲಿ ಇನ್ನಾರು ತಿಂಗಳ ಕಾಲ ಯಾವನೂ ಮೆರವಣಿಗೆಯಲ್ಲಿ ಭಾಗ ವಹಿಸಕೂಡದೆಂದು ಅಲ್ಲಿನ ಸರಕಾರದ ಆಜ್ಞೆ.

ಕಲ್ಕತ್ತೆಯ ರಾಷ್ಟ್ರೀಯ ದೈನಿಕವಾದ "ಎಡ್ವಾನ್ಸ್" ಪತ್ರಿಕೆಯ ಸಂಪಾದಕ, ಮುದ್ರಕ, ಪ್ರಕಾಶಕರಿಗೆ ತಲಾ ೧೦೦ ರೂಪಾಯಿಗಳ ಜುಲ್ಮಾನೆ ವಿಧಿಸಲಾಗಿದೆ, ಹಾಗೇ ಅಲ್ಲಿನ ದೇಶ ಭಾಷೆಯ ದೈನಿಕವಾದ "ಮಾತೃಭೂಮಿ"ಯ ಸಂಪಾದಕ, ಪ್ರಕಾಶಕ, ಮುದ್ರಕರಿಗೂ ಅಷ್ಟೇ ದಂಡನೆ ವಿಧಿಸಲಾಗಿದೆ. ಇವೆರಡು ಪತ್ರಿಕೆಗಳೂ "ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್"ನ್ನು ವಿರೋಧಿಸಿ ಲೇಖ ಬರೆದುವುಗಳೆಂಬುದೇ ತಪ್ಪು.

ದಿಲ್ಲಿಯ ಶ್ರೀಮಂತ ಕುಟುಂಬಗಳಿಗೆ ಸೇರಿದ ಹಲವು ಹೆಂಗಸರನ್ನು ಕೊಲೆ ಮಾಡಿದ ಆರೋಪದ ಮೇಲೆ, ಇಂಟರ್‌ಮಿಡಿಯೇಟ್ ಕ್ಲಾಸಿನ ಒಬ್ಬ ವಿದ್ಯಾರ್ಥಿ, ಇನ್ನು ಕೆಲವು ವಿದ್ಯಾವಂತರು ಕೂಡ ೧೧ ಮಂದಿಯನ್ನು ಪೋಲೀಸರು ಕೈದುಮಾಡಿದ್ದಾರೆ.

ಮದ್ರಾಸಿನಲ್ಲಿ ಸಮಗ್ರ ಭಾರತ, ಬರ್ಮಾ ಹಾಗೂ ಸಿಲೋನ್ ಮೇಯರುಗಳ ಎರಡನೆಯ ಅಧಿವೇಶನವು, ಮದ್ರಾಸಿನ ಮೇಯರರಾದ ಶ್ರೀ. ಸತ್ಯಮೂರ್ತಿಗಳ ಅಧ್ಯಕ್ಷತೆಯಲ್ಲಿ ಜರುಗಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಕುಮಾರರಾಜ ಮುತ್ತಯ್ಯ ಚೆಟ್ಟಿಯಾರರು ಸಮಯೋಚಿತವಾದ ಸ್ವಾಗತವನ್ನು ನೀಡಿದರು. ಹಲವು ಪ್ರಾಮುಖ್ಯ ಪ್ರಶ್ನೆಗಳ ಚರ್ಚೆಯಾಯಿತು. ಮೇಯರರ ಹಕ್ಕುಗಳ ವಿಚಾರದಲ್ಲಿ ವಿಮರ್ಶೆ ನಡೆಯಿತು. ಹಲವು ನಿರ್ಣಯಗಳಾದುವು. ಮುಂದಿನ ಇವರ ಅಧಿವೇಶನ ಕೊಲೊಂಬೋದಲ್ಲಿ.

ಶ್ರೀ. ಭುಲ್ಲಾಭಾಯಿ ದೇಸಾಯಿಗಳು—ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಪಾರ್ಟಿಯ ನಾಯಕರು—ಇದೇ ತಿಂಗಳ ತಾ. ೧೪ರಲ್ಲಿ ಬೊಂಬಯಿಯಲ್ಲಿ ಮಾನ್ಯ ವೈಸರಾಯರ ಭೇಟಿ ಮಾಡುವರು.

ಶ್ರೀ. ಎನ್. ವಿ. ರಾಘವನ್ ಇವರು—ನಿವೃತ್ತ ಎಕೌಂಟಾಂಟರು—ಕಾತೀ ಹಿಂದೂ ವಿದ್ಯಾನಿಲಯದ ಗೌರವಾರ್ಥ ಸ್ಪೆಶಲ್ ಆಫೀಸರರಾಗಿ ನೇಮಕ ಹೊಂದಿರುವರು. ಕಲ್ಕತ್ತೆಯ ವೈಸ್ ಛಾನ್ಸಲರರಾದ ಮಾನ್ಯ ಖಾನ್ ಬಹದ್ದೂರ್ ಅಜಿಜುಲ್ ಹೆಕ್‌ರವರ ಅವಧಿ ಇನ್ನೆರಡು ವರ್ಷಕ್ಕೆ ಮುಂದುವರಿಸಲಾಗಿದೆ.

ಕಲ್ಕತ್ತೆಯ ಒಂದು ನಾರಿನ ಕಾರ್ಖಾನೆಯಲ್ಲಿ ಸಿಡಿತವುಂಟಾಗಿ ೧೫ ಮಂದಿಗೆ ಪೆಟ್ಟಾಗಿದೆ; ಎಂಟು ಮಂದಿಗೆ ಕಠಿನ.

ಕೇಂದ್ರ ಎಸೆಂಬ್ಲಿಯ ಮುಂದಿನ ಅಧಿವೇಶನವು ದಿಲ್ಲಿಯಲ್ಲಿ ಇದೇ ಆಕ್ಟೋಬರ ತಾ. ೨೧ರ ಸುಮಾರಿಗೆ ನಡೆಯುವುದಾಗಿದ್ದು, ಅಲ್ಲಿ ಇಂಡಿಯಾ ಸರಕಾರದ ವ್ಯಾಪಾರದ ಇಲಾಖೆಯವರು ೮ ಹೊಸ ಮಸೂದೆಗಳನ್ನು ಮಂಡಿಸಲಿರುವರು. ಅವುಗಳಲ್ಲಿ ಹೆಚ್ಚಿನವುಗಳು ಸಿಲೆಕ್ಟ್ ಕಮಿಟಿಗಳ ಪರಿಶೀಲನೆಗೊಳಗಾಗಬಹುದೆಂದು ಹೇಳಲಾಗಿದೆ.

ಪುಂಡಿ ರಿಜರ್ವೋಯರ್ಸ್ ಯೋಜನೆಗಾಗಿ ಒಟ್ಟಿಗೆ ಅಂದಾಜಾಗಿರುವ ವೆಚ್ಚ ರೂ. ೬೧.೭೧ ಲಕ್ಷ. ಇದರಲ್ಲಿ ಮದ್ರಾಸ್ ಕಾರ್ಪರೇಶನ್ ತನ್ನ ಭಾಗವಾಗಿ ೩೬.೩೦ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ.

ಇಂಡಿಯದ ರಕ್ಷಣೆಗಾಗಿ ಹೆಚ್ಚು ಹಣ ಬೇಕಾಗಿರುವುದರಿಂದ ಇಂಡಿಯಾ ಸರಕಾರವು ಅನಾವ್ಯಯವಾಗುತ್ತಿರುವ ಹಣವನ್ನು ಉಳಿಸಬೇಕಾಗಿ ಪತ್ರಿಕೆಗಳು ಸೂಚಿಸುತ್ತಿವೆ. ಅನಾವ್ಯಯದ ನಿದರ್ಶನಗಳನ್ನು "ಸುದ್ದಿಗಾರ"ರು ಕೊಡುವಾಗ, "ದಿನಕ್ಕೆರಡು ಗಂಟೆಗಳ ಕೆಲಸವೂ ಇಲ್ಲದ ಆಫೀಸರರೂ ಇದ್ದಾರೆ" ಎಂದಿರುವುದೂ ಅದ್ಭುತ ವಾರ್ತೆಯೇ. ಇದು ನಿಜವೇ ಎಂಬುದನ್ನು ಸರಕಾರದ ಪ್ರಕಟಣೆಯು ಉಚಿತಗೊಳಿಸುವುದು ಶ್ರೇಯಸ್ಕರ.

ಜಪಾನಿನಲ್ಲಿ ಬ್ರಿಟಿಷರ ಕೈದು

ಜಪಾನರು ಪುನಃ ಬ್ರಿಟಿಷರಿಬ್ಬರನ್ನು ಕೊರೆಯದಲ್ಲಿ ಕೈದುಮಾಡಿದ್ದಾರೆ. ಹೀಗೆ ಜಪಾನರ ಕೈದಿನಲ್ಲಿರುವ ಬ್ರಿಟಿಷ್ ಪ್ರಜೆಗಳ ಸಂಖ್ಯೆ ಒಟ್ಟಿಗೆ ೯. ಇವರ ಕೈದಿಗೆ ಕಾರಣವಿನ್ನೂ ತಿಳಿದಿಲ್ಲ.

ಮಂಗಳೂರು

ಪ್ರವೇಶೋತ್ಸವ

ಗಣಪತಿ ದೇವಸ್ಥಾನದ ರಸ್ತೆಯಲ್ಲಿದ್ದ ಮುನಿಸಿಪಲ್ ಹುಡುಗಿಯರ ಶಾಲೆಯು ಇದೇ ತಾ. ೧೯ರಿಂದ ಮಹಾಮಾಯಿ ದೇವಸ್ಥಾನದ ಮುಂಭಾಗದಲ್ಲಿನ ಕಟ್ಟೋಣಕ್ಕೆ ಒಯ್ಯಲಾಗಿದೆ. ಈ ಸಂದರ್ಭದಲ್ಲಿ ಹೊಸ ಕಟ್ಟಡವನ್ನು ಪ್ರವೇಶಿಸುವಂದು ಪ್ರಾತಃಕಾಲ ಶಾಲಾ ಮಕ್ಕಳಿಗೆ ತಿಂಡಿಯೆನ್ನು ಹಂಚಿದುದಲ್ಲದೆ ಮಧ್ಯಾಹ್ನ ಶಾಲೆಯಲ್ಲಿ ಹೆತ್ತವರ ಸಲುವಾಗಿ ವಿವಿಧ ವಿನೋದಾವಳಿಗಳ ಪ್ರದರ್ಶನವೂ ಇತ್ತು. ಚಿಕ್ಕ ಬಾಲಕಿಯರೇ ಇದರಲ್ಲಿ ಭಾಗವಹಿಸಿದ್ದು ಸಭಿಕರು ತುಂಬಾ ಸಂತೋಷಗೊಂಡರು. ಶ್ರೀಮತಿ ಲೀಲಾ ಬಾಯಿಯವರು ಅಧ್ಯಕ್ಷತನವನ್ನು ವಹಿಸಿದ್ದರು. ಮುನಿಸಿಪಲ್ ಕಮಿಶನರು, ಹೆಲ್ತ್ ಆಫೀಸರರು ಹಾಗೂ ಕೆಲವೊಂದು ಕೌನ್ಸಿಲರರು ಈ ಸಮಾರಂಭಕ್ಕೆ ದಯೆ ಮಾಡಿಸಿದ್ದರು.

ವಾಚಕ

ಇದೇ ತಿಂಗಳ ತಾ. ೪ರಲ್ಲು ಮಧ್ಯಾಹ್ನ ೨॥ ಗಂಟೆಯಿಂದ ಸಾಯಂಕಾಲ ೫ ಗಂಟೆಯ ತನಕ "ಇಂದ್ರುಕೀಲಕ" ಎಂಬ ಪುರಾಣ ವಾಚಕವು ಶ್ರೀಯುತ ಯಂ. ಅನಂತಯ್ಯ ಆಚಾರ್ಯರ ಓದುವಿಕೆಯಿಂದಲೂ ಶ್ರೀಯುತ ಆರ್ಕುಳ ಸುಬ್ರಾಯಾಚಾರ್ಯರ ಅರ್ಥ ವಿವರಣೆಯಿಂದಲೂ ಕದಿರೆ ಮಂಜುನಾಥ ಕ್ಷೇತ್ರದ ಕಲ್ಯಾಣ ಭವನದಲ್ಲಿ ಬಹಳ ಯಶಸ್ವಿಯಾಗಿ ಜರುಗಿತು. ಬರುವ ಆದಿತ್ಯವಾರ ತಾರೀಕು ೧೧—೮—'೪೦ರಲ್ಲೂ ಮಧ್ಯಾಹ್ನ ೩ರಿಂದ ೬ ಗಂಟೆಯ ತನಕ ವಾಚಕವು ನಡೆಯಲಿದೆ. ಸರ್ವರಿಗೂ ಸುಸ್ವಾಗತ.

ಮಾಸಿಕ ಸಭೆ

ಮಂಗಳೂರು ಪಟ್ಟಣದ ಭಾಗಕ್ಕೆ ಸೇರಿದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ತೃತೀಯ ಸಭೆಯು ಶ್ರೀಯುತ ಅಣ್ಣಾಜಿರಾವ್, ಮುಖ್ಯೋಪಾಧ್ಯಾಯ, ಬೋಳಾರ್ ಮುನಿಸಿಪಲ್ ಶಾಲೆ, ಇವರ ಅಧ್ಯಕ್ಷತೆಯಲ್ಲಿ ಈಚಿಗೆ ಜೆಪ್ಪು ಸೈಂಟ್ ಜೋನ್ಸ್ ಹಾ. ಎ. ಶಾಲೆಯಲ್ಲಿ ಜರುಗಿತು. ಅಧ್ಯಾಪಕ ಶ್ರೀ. ವಿ. ಶಿವಣ್ಣ ಹೆಗ್ಡೆ ಇವರು ಒಂದು ಪದ್ಯ ಪಾಠವನ್ನೂ, ಜೆಪ್ಪು ಸೈಂಟ್ ಜೋಸೆಫ್ಸ್ ಎಸ್ಸೈಲಂ ಹಾ. ಎ. ಶಾಲೆಯ ಸಹಾಯಕರಾದ ಶ್ರೀ. ಶ್ರೀನಿವಾಸ ಬೋರ್ಕರ್ ಇವರು ಸಂದರ್ಶನದ ಕುರಿತು ಒಂದು ಮಾದರಿ ಪಾಠವನ್ನೂ ಇತ್ತರು. ಅಧ್ಯಕ್ಷರ ಭಾಷಣವಾದ ಬಳಿಕ ಸಭಾಂತ್ಯವಾಯಿತು.

ಲೋಕಮಾನ್ಯ ತಿಲಕರ ಪುಣ್ಯತಿಥಿ

ಕಳೆದ ಅಗೋಸ್ತ್ ತಾ. ೧ರಲ್ಲಿ, ಸ್ಥಳೀಯ ಹಿಂದೂ ಮಹಾಸಭೆಯ ಆಶ್ರಯದಲ್ಲಿ, ಲೋಕಮಾನ್ಯ ತಿಲಕರ ಪುಣ್ಯದಿನವು ಯಥೋಚಿತವಾಗಿ ಆಚರಿಸಲ್ಪಟ್ಟಿತು. ಇದಕ್ಕಾಗಿ ಸಾ॥ ಸಭೆಯೊಂದು ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ನೆರೆದಿದ್ದಿತು. ಶ್ರೀ. ಎಂ. ಆರ್. ಶಾಸ್ತ್ರಿ, ವಿದ್ವಾನ್, ಇವರು ಸಭಾ ಅಧ್ಯಕ್ಷರಾಗಿದ್ದರು. ಶ್ರೀ. ವಾಮನ ಮಾಸ್ಟರರೂ, "ರಾಷ್ಟ್ರಬಂಧು"ವಿನ ಶ್ರೀ. ಕೆ. ಕೃಷ್ಣರಾ[illegible] ಕಾರ್ಯಗಳ ಹಾಗೂ [illegible] ಸಾಧನೆಗಳ ಕುರಿತಾ[illegible] ಗಳನ್ನು ಮಾರಿ[illegible] ದೇಶಸೇವೆ, [illegible] ಲಾದ ಅವರ[illegible] ಸಂಕ್ಷೇಪವಾ[illegible] ಮುಂದಿರಿಸಿ, [illegible] ಭಾವರು ಆದಶ[illegible] ಸರಣಿ ಅಗತ್ಯವೆಂ[illegible] ಸಿ. ರಾಮರಾಯರ [illegible] ಸಭಾಂತ್ಯವಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಲೇಬರ್ ಲೀಗ್

ಈ ಲೀಗಿನ ಸಭೆಯೊಂದು ಈಚಿಗೆ ಶ್ರೀ. ಕೆ. ಈಶ್ವರ ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಜರುಗಿ, ಸಂಘಕ್ಕೊಂದು ಕಟ್ಟಡದ ಸ್ಥಳವನ್ನು ಸರಕಾರದಿಂದ ಪಡೆಯಬೇಕೆನ್ನುವ, ಸಂಘದ ಕಾರ್ಯದರ್ಶಿಯವರ ಸೂಚನೆಗಳನ್ನು ಪರ್ಯಾಲೋಚಿಸಿ, ಸರಕಾರದ ಮುಂದಿಡಬೇಕೆನ್ನುವ ಎರಡು ಮುಖ್ಯ ನಿರ್ಧಾರಗಳಾಗಿರುವುವು.

"ಮಿರ್ ಅನ್ಸರುದ್ದೀನ್ ಬಂಗಾರದ ಮೆಡಲ್"

ಕಳೆದ ಬಿ. ಎಲ್. ಪರೀಕ್ಷೆಯಲ್ಲಿ ಕೃತಾರ್ಥರಾದ ಜನಾಬ್ ಎಂ. ಸಿ. ಅಹಮ್ಮದ್, ಬಿ. ಎ. ಬಿ. ಎಲ್. ಇವರು "ಮಿರ್ ಅನ್ಸರುದ್ದೀನ್ ಬಂಗಾರದ ಮೆಡಲ"ನ್ನು ಪಡೆಯಲು ಅರ್ಹರಾಗಿರುವರೆಂದು ತಿಳಿದುಬಂದಿದೆ. ಶ್ರೀಯುತರಿಗೆ ನಮ್ಮ ಅಭಿನಂದನೆಗಳು.

ಹೊಸ ಪೋಸ್ಟಾಫೀಸು

ಹಂಪನಕಟ್ಟೆಯಲ್ಲಿ "ಫೆಲಿಕ್ಸ್ ಪೈ ಬಿಲ್ಡಿಂಗ್"ನ ಮಾಳಿಗೆಯಲ್ಲಿ, ಇದೇ ಕಳೆದ ತಾ. ೧೯ರಿಂದ ಒಂದು ಹೊಸ ಪೋಸ್ಟ್ ಆಫೀಸ್ (ಸಬ್ ಆಫೀಸ್) ತೆರೆಯಲ್ಪಟ್ಟಿದೆ. ಇದರಿಂದ ಅಲ್ಲಿನವರಿಗೆ ಬಹಳ ಅನುಕೂಲವಾಯಿತೆಂದು ಬೇರೆ ಹೇಳಬೇಕಾಗಿಲ್ಲ.

ಜಿಲ್ಲಾ ಪಂಚಾಯಿತ್ ಆಫೀಸರು

ಇಲ್ಲಿ ಇದುವರೆಗೆ ಡಿ॥ ಪಂಚಾಯಿತ್ ಆಫೀಸರರಾಗಿದ್ದ ಶ್ರೀ. ಸಂಜೀವ ತಳ್ಪಾರ ಬಿ. ಎ. ಬಿ. ಎಲ್. ಇವರಿಗೆ ಬಳ್ಳಾರಿಗೆ ವರ್ಗವಾಗಿ, ಅವರ ಬದಲಿಗೆ ಬಂದಿರುವ ಶ್ರೀ. ಎನ್. ಎಂ. ಲಿಂಗ ಇವರು ಆಗಲೇ ಚಾರ್ಜು ವಹಿಸಿಕೊಂಡಿರುವರು.

ಷಂಘಾಯಿಯಲ್ಲಿ ಭಯೋತ್ಪಾದಕರ ಹಾವಳಿ

ಷಂಘಾಯಿಯಲ್ಲಿ ಭಯೋತ್ಪಾದಕರ ಹಾವಳಿ ವಿಪರೀತವಾಗಿದೆ. ಚೀನದ ಅತ್ಯಂತ ದೊಡ್ಡ ಕಲ್ಲಿದ್ದಲ ಮ್ಯಾನೇಜರ ಸಂಗ್–ಚಿಂಗ್–ಸೀನ್ ಅಪಹರಿಸಲ್ಪಟ್ಟಿದ್ದಾನೆ. ಅಲ್ಲಿನ ಒಂದು ಪತ್ರಿಕೆಯ ಸಿಟಿ ಸಂಪಾದಕನ ಗತಿಯೂ ಇದೇ. ಚೀನಾದ ಸ್ಟೇಟ್ ಬ್ಯಾಂಕಿನ ಮ್ಯಾನೇಜರರನ್ನು ಕೊಲ್ಲಬೇಕೆಂದಿದ್ದಾಗ, ಆಯುಧವೆಲ್ಲಿಯೋ ಗುರಿತಪ್ಪಿ ಹಾರಿ, ಅವನು ಮಾತ್ರ ಬದುಕಿಕೊಂಡ!

ಮೈಸೂರು ಸಂಸ್ಥಾನದ [illegible] ಸುದ್ದಿಗಳು

ಬೆಂಗಳೂರು [illegible]

[illegible]ಡಬೇಕಾಗಿಲ್ಲ [illegible] ಅಭಿಪ್ರಾಯ

[illegible]ಶ್ವವಿದ್ಯಾನಿಲಯದ ಅಕೆಡ [illegible]ಭೆಯು, ವೈಸ್ ಛಾನ್ಸಲರಾದ [illegible] ಪ್ರವೀಣ ಎನ್. ಎಸ್. ಸುಬ್ಬ [illegible]ಧ್ಯಕ್ಷತೆಯಲ್ಲಿ ನಡೆಯಿತು. ಬೆಂಗ [illegible]ರಿನಲ್ಲಿರುವ ಮೆಡಿಕಲ್ ಸ್ಕೂಲಿನ ವಿಷಯವು ಸಭೆಯ ಮುಂದೆ ಬಂದಿತು. ಈ ಸ್ಕೂಲನ್ನು ವಜಾಮಾಡಬೇಕೇ — ಬೇಡವೇ ಎಂಬ ವಿಚಾರದಲ್ಲಿ ಸರಕಾರದವರು ತಮ್ಮ ಅಭಿಪ್ರಾಯವನ್ನು ಸೂಚಿಸಿ, ಇದನ್ನು ಸ್ಥಾಪಿಸಿದ ಉದ್ದೇಶದ ದೃಷ್ಟಿಯಿಂದಲೂ, ಇದನ್ನು ಈಗ ನಿಲ್ಲಿಸಿಬಿಟ್ಟರೆ ಉಂಟಾಗತಕ್ಕ ಹಣಕಾಸಿನ ಮತ್ತು ಆದಕ್ಕೆ ಸಂಬಂಧಪಟ್ಟ ಇತರ ವಿಷಯಗಳ ದೃಷ್ಟಿಯಿಂದಲೂ ಸ್ಕೂಲನ್ನು ವಜಾಮಾಡಬೇಕಾಗಿಲ್ಲ ಎಂದು ತಿಳಿಸಿದ್ದರು. ಸರಕಾರದ ಈ ಅಭಿಪ್ರಾಯವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮೈಸೂರು ಯುದ್ಧದ ನಿಧಿ

ಮೈಸೂರು ಯುದ್ಧದ ನಿಧಿಯಿಂದ ಒಂದು ಲಕ್ಷ ರೂಪಾಯಿಗಳನ್ನು ಫೈಟರ್ ವಿಮಾನ ಕ್ಕೋಸ್ಕರ ಕಳುಹಿಸಲು ತೀರ್ಮಾನವಾಯಿತು.

ಕೋಲಾರಕ್ಕೆ ದಿವಾನರು

ಮೈಸೂರು ಸಂಸ್ಥಾನದ ದಿವಾನರಾದ ಸರ್ ಏಜರ್ ಎಂ ಇಸ್ಮಾಯಿಲ್‌ರವರು, ಕೋಲಾರದ ಚಿನ್ನದ ಗನಿಗೆ ಪ್ರಯಾಣ ಮಾಡಿ, ಸುಮಾರು ಹತ್ತು ಸಾವಿರ ಮಂದಿ ಮುಷ್ಕರಗಾರರ ಕುಂದುಕೊರತೆಗಳನ್ನು ಲಾಲಿಸಿದರು. ಮೈನಿಂಗ್ ಅಧಿಕಾರಿ ವರ್ಗದವರ ಹೇಳಿಕೆಯನ್ನೂ ಲಾಲಿಸಿದರು. ಆದರೂ ಶ್ರಮಜೀವಿಗಳು ಯಾವುದಕ್ಕೂ ಒಪ್ಪಲಿಲ್ಲ. ಮುಷ್ಕರವು ನಡೆಯುತ್ತಲೇ ಇರುವುದು.

ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಚುನಾವಣೆಗಳ ದಿನವನ್ನು ಸರಕಾರದವರು ಮುಂದೆ ನಿರ್ಧರಿಸಲಿರುವ ತಾರೀಕಿನ ವರೆಗೂ ಮುಂದುವರಿಸಲಾಗಿದೆಯೆಂದು ಸರಕಾರದ ಪ್ರಕಟಣೆಯು ತಿಳಿಸುವುದು.

ಸಂಸ್ಥಾನದಲ್ಲಿ ವೈದ್ಯಕೀಯ ಪ್ರಗತಿ

(ನಮ್ಮ ವಿಶೇಷ ಪ್ರತಿನಿಧಿಯಿಂದ)

"ಗ್ರಾಮಾಂತರಗಳು ಮತ್ತು ಟೌನುಗಳು ಅಭಿವೃದ್ಧಿ ಹೊಂದಲು ವಿಳಂಬವಾಗಿರುವುದಕ್ಕೆ ಆರ್ಥಿಕ ಕಾರಣವೆಂದು ನನಗೆ ತೋರುವುದು. ಬಡತನ ಮತ್ತು ಸಂಪಾದನೆ ಶಕ್ತಿಯಿಲ್ಲದಿರುವುದು,—ಇವೆರಡು ನಮ್ಮ ಗ್ರಾಮಗಳ ಮತ್ತು ನಗರಗಳ ಈಗಿನ ಸ್ಥಿತಿಗತಿಗಳಿಗೆ ಕಾರಣಗಳಾಗಿವೆ" ಹೀಗೆಂಬುದಾಗಿ ದ್ವಿತೀಯ ಸಚಿವರಾದ ರಾಜಮಂತ್ರಪ್ರವೀಣ ಕೆ. ವಿ. ಅನಂತರಾಮನ್ ರವರು ಈಚಿಗೆ ಮಂಡ್ಯದಲ್ಲಿ ಜನರಲ್ ಆಸ್ಪತ್ರೆಯ ಆರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು.

ಸಚಿವರು ಮುಂದುವರಿಯುತ್ತಾ, "ಸಂಸ್ಥಾನದಲ್ಲಿ ವೈದ್ಯಕೀಯ ಸೌಕರ್ಯವು ವರ್ಷ ವರ್ಷವೂ ಹೆಚ್ಚುತ್ತಿರುವುದು. ಈಗ ಸಂಸ್ಥಾನದಲ್ಲಿ ೩೩೦ ವೈದ್ಯಕೀಯ ಸಂಸ್ಥೆಗಳಿರುವುವು. ೧೯೧೦ರಲ್ಲಿ ೧೪ ವೈದ್ಯಕೀಯ ಸಂಸ್ಥೆಗಳು ಮಾತ್ರ ಇದ್ದವು. ಅತ್ಯಂತ ಆಧುನಿಕ ವೈದ್ಯಕೀಯ ಅನುಕೂಲತೆಗಳು ಬ್ರಿಟಿಷ್ ಇಂಡಿಯಾ ಪ್ರಾಂತಗಳಲ್ಲಿರುವುದಕ್ಕಿಂತಲೂ ಅಪಾರವಾಗಿರುವುದು" ಎಂದರು. ಕೊನೆಯಲ್ಲಿ, "ಸಂಸ್ಥಾನದಲ್ಲಿ ವೈದ್ಯಕೀಯ ಅನುಕೂಲತೆಗಳನ್ನು ಕಲ್ಪಿಸಲು, ಕಳೆದ ೧೩ ವರ್ಷಗಳಿಂದ ೬೫,೦೦,೦೦೦ ರೂಪಾಯಿಗಳನ್ನು ಧಾರ್ಮಿಕ ಬುದ್ಧಿಯುಳ್ಳ ಮಹನೀಯರುಗಳೂ, ಮಹಿಳೆಯರೂ ಸಹಾಯ ಮಾಡಿರುವುದು ಕಂಡು ಬರುತ್ತದೆ. ಈ ಮಂಡ್ಯದ ಹೊಸ ಆಸ್ಪತ್ರೆಯು ಸರ್ವೋತ್ತಮವಾದುದಾಗಿದೆ" ಎಂದರು.

ಡಿ. ಗೌಲಿಯವರಿಗೆ ಮರಣ ದಂಡನೆ

ಜನರಲ್ ಡಿ. ಗೌಲಿಯವರಿಗೆ ಮರಣ ದಂಡನೆ ವಿಧಿಸಲಾಗಿದೆ ಪಿಟೆನ್ ಸರಕಾರದಿಂದ. ಅವರ ತಪ್ಪೆಂದರೆ ಫ್ರಾನ್ಸಿಗೆ ರಾಜದ್ರೋಹ. ಆದರೆ ಡಿ. ಗೌಲಿಯವರು ಆ ಆಜ್ಞೆಯು "ರದ್ದು" ಎನ್ನುತ್ತ, "ಜಯಲಾಭ ದೊರಕಿದ ಬಳಿಕ, ಆ ಸರಕಾರದವರೊಡನೆ ನಮ್ಮ ಜಮಾ ಖರ್ಚಿನ ಲೆಕ್ಕಾಚಾರ ಮಾಡಿಕೊಳ್ಳುವೆನು" ಎಂದಿದ್ದಾರೆ

ಜಪಾನರ ಕೈದು

ಡಿಫೆನ್ಸ್ ಕಾನೂನಿನ ಮೇರೆಗೆ, ಬ್ರಿಟನಿನಲ್ಲಿ ಹೆಸರಾದ ಜಪಾನಿ ಕಂಪೆನಿಗಳ ಇಬ್ಬರು ಜಪಾನೀ ಮುಖ್ಯಾಧಿಕಾರಿಗಳ ಸೆರೆ ನಡೆದಿದೆ. ಇದು ಜಪಾನೀಯರ ಕೈದುಗಳಿಗೆ ಮುಯ್ಯಿಯಲ್ಲ. ಜಪಾನೀ ರಾಯಭಾರಿಗಳು ಈ ವಿಷಯದಲ್ಲಿ ಬ್ರಿಟಿಷ್ ವಿದೇಶೀ ಕಾರ್ಯಾಲಯದಿಂದ ವಿವರಗಳನ್ನು ಅಪೇಕ್ಷಿಸಿರುವರು.

ಜಂತನಾಶಕ ಪುಡಿ

ಜಂತುಗಳು ಹೊಟ್ಟೆಯೊಳಗೆ ಬೆಳೆದರೆ ಯಾವ ತರದ ಪೋಷಕ ತಿಂಡಿಗಳು ತಿಂದರೂ ಶರೀರಕ್ಕೆ ಉಪಯೋಗವಿರದು. ಅಲ್ಲದೆ ಸಣ್ಣ ಹುಡುಗರಿಗೆ ಈ ಹುಳುವಿನಿಂದ ತುಂಬಾ ಕೆಡಕಾಗಿರುವದು. ನಮ್ಮ ಜಂತಿನ ಪುಡಿಯಿಂದ ಹೊಟ್ಟೆಯೊಳಗಿನ ಚಿಕ್ಕ ದೊಡ್ಡ ಹುಳಗಳು ಸಲಿಸಾಗಿ ಮಲದೊಡನೆ ಬಿದ್ದು ಹೋಗುವದು. ಇದಕ್ಕೆ ಹರಳೆಣ್ಣೆ ತೆಕ್ಕೊಳ್ಳುವದು ಬೇಡ. ಪೆಕೆಟು 1ಕ್ಕೆ 0-1-0.

ಮೆಜಿಕ್ ಕ್ಯೂರ್

ಈ ಪ್ರಸಿದ್ಧವಾದ ಔಷಧಿಯು, ಅರ್ಧ ತಲೆನೋವು, ವಾಯು ಹೊಟ್ಟೆನೋವು, ಜಳಿಜ್ವರ, ಹಲ್ಲುನೋವು, ನೆಗಡಿ, ಕೆಮ್ಮು, ಇನ್‌ಫ್ಲೂಯೆಂಜ ಮುಂತಾದವುಗಳ ಮೇಲೆ ಗುಣಕಾರಿಯಾಗಿದೆ. ಪೆಕೆಟು 1ಕ್ಕೆ 0-1-6.

ತಯಾರಿಸುವವರು:

SHIVAJI CHEMICAL WORKS,
BELGAUM.

ವಿಕ್ರೀತ ಮಾಡುವವರು:

ಶ್ರೀ. ಹರಿದಾಸ್ ಭಂಡಾರಿಗಳು ಮತ್ತು ಷಾ ಕಂಪೆನಿ, ಮಂಗಳೂರು.

MONEY TO LEND

Loans are granted at Competitive Rates on Bullion, Sold Ornaments, Government Paper, Goods and Produce, Shares and other Valuable Securities. Enquire of any of our Thirty-seven Offices.

RESOURCES OF A CRORE

Estd. 1906

CANARA BANK, LIMITED

ಸಾಹಸದ ಪ್ರತಿಫಲ

ಪಶ್ಚಿಮ ರಂಗದಲ್ಲಿ ಆಕಾಶ ಯುದ್ಧದಲ್ಲಿ ತಾವು ಕಸಿದುಕೊಂಡ, ಜರ್ಮನರ ವಿಮಾನಗಳ ಮೆಶಿನ್ ಗನ್‌ಗಳ ವಿಚಾರವಾಗಿ ತಮ್ಮ ಸೇನಾನಾಯಕರ ಜೊತೆಗೆ ಬ್ರಿಟಿಷ್ ವಿಜಯಿಗಳು ಚರ್ಚಿಸುತ್ತಿದ್ದಾರೆ.

ನಗರವಾಸಿಯ ಆರೋಗ್ಯ ರಕ್ಷಣೆ

(ಭಾಗ ೩)

(ಮಾನವನು ತನ್ನ ಜೀವಮಾನವೆಲ್ಲಾ ಆರೋಗ್ಯ ಧೃಡಕಾಯನಾಗಿದ್ದು ಕರ್ತವ್ಯವನ್ನು ಮಾಡಿ ಸಂತೋಷದಿಂದ ಬಹಳ ಕಾಲ ಬಾಳಿ ಬದುಕಿರಬೇಕಾದರೆ ಅನುಸರಿಸಬೇಕಾದ ವಿಧಾನಗಳ ವಿವರ).

೧೧. ವ್ಯಾಯಾಮ

ಇದು ಅನೇಕ ಬಗೆಯಾಗಿದೆ. ಗರಡಿ ಸಾಧನೆ, ಓಡುವುದು, ಕುದುರೆ ಸವಾರಿ ಮಾಡುವುದು, ಸಂಚಾರಮಾಡುವುದು, ಚೆಂಡಾಟಗಳು ಮುಂತಾದುವು. ಇವನ್ನು ಅವರ ಶಕ್ತಿಗೂ ಅವರು ಮಾಡುವ ಉದ್ಯೋಗಕ್ಕೂ ಅನುಗುಣವಾಗಿ ಮಾಡಬೇಕು. ಆಟಗಳನ್ನು ಬೈಲಿನಲ್ಲಿ ಆಡಬೇಕು. ವ್ಯಾಯಾಮದಿಂದ ಆಹಾರವು ಬೇಗ ಜೀರ್ಣವಾಗುತ್ತದೆ. ಶರೀರದ ಶಾಖವು ಒಂದೇ ಸಮನಾಗಿರುತ್ತದೆ. ಮಾಂಸಖಂಡಗಳು ದಪ್ಪನಾಗಿ ಬಿಗಿಯಾಗಿ ಗಟ್ಟಿಯಾಗುತ್ತವೆ. ಉಚ್ಛ್ವಾಸನಿಶ್ವಾಸಗಳು ಹೆಚ್ಚಾಗಿ ಎದೆಯು ವಿಸ್ತಾರವಾಗಿ ಕಶ್ಮಲವು (ಇಂಗಾಲಾಮ್ಲ) ಹೊರಗೆ ಹೋಗಿ ಆಮ್ಲಜನಕವನ್ನು ಹೆಚ್ಚಾಗಿ ತೆಗೆದು ಕೊಂಡು ರಕ್ತವು ಶುದ್ಧಿಯಾಗಿ ಸರಿಯಾಗಿ ಸಂಚರಿಸಿ, ಆರೋಗ್ಯವು ಉಂಟಾಗುತ್ತದೆ. ಜೀವರಿನ ಮೂಲಕವೂ ಕಶ್ಮಲವು ಹೊರಗೆ ಹೋಗುತ್ತದೆ. ಶರೀರದಲ್ಲಿರುವ ಅವಯವಗಳೆಲ್ಲಾ ತಮ್ಮ ಕೆಲಸಗಳನ್ನು ತೃಪ್ತಿಕರವಾಗಿ ಮಾಡಿ ಶರೀರಾರೋಗ್ಯಕ್ಕೆ ಸಹಾಯವಾಡುತ್ತವೆ. ಮೈ ಪುಷ್ಟಿಯಾಗುತ್ತದೆ. ಶಕ್ತಿಯು ಹೆಚ್ಚುತ್ತದೆ. ದೇಹದಲ್ಲಿ ಲವಲವಿಕೆ ಉಂಟಾಗುತ್ತದೆ. ಬುದ್ಧಿ ಚುರುಕಾಗಿ ಜ್ಞಾಪಕಶಕ್ತಿ ಹೆಚ್ಚುತ್ತದೆ. ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತದೆ. (ಇದಲ್ಲದೆ ಬಾಲಕರಿಗೆ ಚೆಂಡಾಟದಲ್ಲಿ ಧೈರ್ಯ, ಸಹನೆ, ತಿಸ್ತು, ಸಹಕಾರ, ಸಂಘನಿರ್ವಹಣೆ, ಪರೋಪಕಾರ ಮುಂತಾದ ಗುಣಗಳು ಬೆಳೆಯುವುದಕ್ಕೆ ಹೆಚ್ಚು ಅವಕಾಶ ದೊರೆಯುತ್ತದೆ.) ಆಟವಾಡಿದ ಮೇಲೆ ಸ್ನಾನಮಾಡುವುದು ಒಳ್ಳೆಯದು.

ಮಿತಿಮೀರಿ ವ್ಯಾಯಾಮವನ್ನು ಮಾಡಬಾರದು. ಹಾಗೆ ಮಾಡಿದರೆ ಶ್ವಾಸಕೋಶಗಳೂ ಹೃದಯವೂ ದುರ್ಬಲವಾಗುತ್ತವೆ. ವ್ಯಾಯಾಮವನ್ನು ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ ಮಾಡಬೇಕು. ಆರೋಗ್ಯವನ್ನು ಪಡೆಯಲು ಅಂಗಸಾಧನೆಯನ್ನು ಮಾಡಬೇಕೇ ಹೊರತು ಅದರಲ್ಲಿ ನಿಪುಣತೆಯನ್ನು ಹೊಂದುವುದಕ್ಕೆ ಮಾಡುವುದು ಪ್ರಾಧಾನ್ಯವಲ್ಲ. ನಮ್ಮ ಮನೆಯ ಕೆಲಸವನ್ನೆಲ್ಲಾ ನಾವು ಸರಿಯಾಗಿ ಮಾಡಿಕೊಳ್ಳುವುದರಿಂದಲೇ ಅಂಗಗಳಿಗೆ ಸಾಧನೆಯಾಗುತ್ತದೆ. ಸೌದೆ ಒಡೆಯುವುದು, ಬಟ್ಟೆ ಒಗೆಯುವುದು, ನೀರು ಸೇದುವುದು ಮುಂತಾದುವು ಕೆಲಸಮಾಡುವುದು ಗೌರವಕ್ಕೆ ಕಡಮೆ ಎಂಬ ಅಭಿಪ್ರಾಯವನ್ನು ಖಂಡಿತವಾಗಿಯೂ ಬಿಡಬೇಕು. (Dignity of labour) ಕೆಲಸದ ಗೌರವವನ್ನು ಅರಿಯಬೇಕು.

೧೨. ವಿಶ್ರಾಂತಿ, ನಿದ್ರೆ

ಪ್ರತಿನಿತ್ಯವೂ ಕೆಲಸಮಾಡಿದ ಮೇಲೆ ವಿಶ್ರಾಂತಿಯು ಅವಶ್ಯಕ. ಹಾಗೆ ವಿಶ್ರಾಂತಿ ಕೊಡದ ಪಕ್ಷದಲ್ಲಿ ಕಾಯಕೆಲಸವನ್ನಾಗಲಿ ಬುದ್ಧಿಕೆಲಸವನ್ನಾಗಲಿ ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ. ವಿರಾಮ ಕೊಟ್ಟ ಮೇಲೆ ಕೆಲಸವನ್ನು ಚುರುಕಾಗಿ ನಡೆಸಬಹುದು. ನಮ್ಮ ನಿತ್ಯ ಕೆಲಸವಾದ ಮೇಲೆ ಸ್ವಲ್ಪ ಕಾಲವನ್ನು ವಿನೋದದಲ್ಲಿ ಕಳೆಯಬಹುದು. ಆದರೆ ಈ ವಿನೋದವು ಇತರರ ದೇಹಕ್ಕೆ ಅಪಾಯವನ್ನೂ ಮನಸ್ಸಿಗೆ ನೋವನ್ನೂ ಉಂಟುಮಾಡಬಾರದು. ಮನಸ್ಸಿಗೆ ಉಲ್ಲಾಸಕರವಾದ ಪುಸ್ತಕ, ಪತ್ರಿಕೆಗಳನ್ನು ಓದಬಹುದು. ಕೌಶಲ್ಯಪ್ರಧಾನವಾದ ಆಟ, ಕುಶಲ ಕೈಕೆಲಸ, ಲಲಿತಕಲೆ, ಕೈತೋಟ ಮುಂತಾದುವುಗಳಿಗೆ ಸ್ವಲ್ಪ ಕಾಲ ವಿನಿಯೋಗಿಸಬಹುದು. ಹಗಲಿನಲ್ಲಿ ಕೆಲಸವೂ ರಾತ್ರಿಯಲ್ಲಿ ವಿಶ್ರಮಿಸಿ ನಿದ್ರೆ ಮಾಡುವುದೂ ದೇವನಿರ್ಮಿತವಾಗಿದೆ. ಇದು ಆರೋಗ್ಯಕ್ಕೆ ಬಹಳ ಸಹಾಯವನ್ನು ಮಾಡುತ್ತದೆ. ಕೈಕಾಲುಗಳನ್ನು ಧಾರಾಳವಾಗಿ ನೀಡಿ ಆರು ಗಂಟೆ ಕಾಲಕ್ಕೆ ಕಡಮೆಯಿಲ್ಲದೆ ನಿದ್ರೆ ಮಾಡಬೇಕು. ಮುಖಕ್ಕೆ ಮುಸುಕು ಹಾಕದೆ ಎಡ ಮಗ್ಗುಲಲ್ಲಿ ಮಲಗಬಹುದು. ವಯಸ್ಸಿಗೆ ಅನುಗುಣವಾಗಿ ನಿದ್ರೆಮಾಡಬೇಕು. ದೊಡ್ಡವರಿಗಿಂತಲೂ ಮಕ್ಕಳು ಬೆಳೆಯಬೇಕಾದ್ದರಿಂದ ಹೆಚ್ಚು ಕಾಲ ನಿದ್ರೆಮಾಡಬೇಕು. ಬಿಸಿಲು ಕಾಲದಲ್ಲಿ ಹಗಲು ಒಂದು ಗಂಟೆ ಕಾಲ ತಣ್ಣಗಿರುವ ಚಿಕ್ಕ ಮನೆಯಲ್ಲಿ ಮಲಗಬಹುದು. ನಿದ್ರೆಗೆ ಭಂಗಬಾರದಂತೆ ಮೃದುವಾದ ಹಾಸಿಗೆ, ಧಾರಾಳವಾದ ಗಾಳೀ ಸಂಚಾರವಿರುವಂತೆಯೂ, ಸೊಳ್ಳೆ ತಿಗಣೆಕಾಟ ಇಲ್ಲದಂತೆಯೂ ನೋಡಿಕೊಳ್ಳಬೇಕು. ಹಾಸಿಗೆಯನ್ನು ಬಿಸಿಲಿಗೆ ಹಾಕಿ ಶುಚಿಯಾಗಿರಿಸಬೇಕು. ಊಟಮಾಡಿದ ಕೂಡಲೆ ಮಲಗಬಾರದು. ಎರಡು ಗಂಟೆಯ ಕಾಲ ವಿರಾಮವಿರಬೇಕು. ಮಲಗುವುದಕ್ಕೆ ಮುಂದೆ ಬಹಳ ಬಳಲಿಕೆ ಮತ್ತು ಯೋಚನೆಯನ್ನುಂಟು ಮಾಡುವ ಕೆಲಸವನ್ನು ಮಾಡಿದರೆ ನಿದ್ರೆಯು ಸರಿಯಾಗಿ ಬರುವುದಿಲ್ಲ. ರಾತ್ರಿ [illegible] ನಾಟಕ ಶಾಲೆ, ಸಂಗೀತ ಕಛೇರಿ, ಹೋಗಿ ನಿದ್ರೆ ಕೆಟ್ಟರೆ ಮೂರನೆಯ ದಿನ ತಲೆನೋವು, ಕಣ್ಣುರಿ, ಸೋಮಾರಿತನ, ಅಜೀರ್ಣ ಮುಂತಾದುವನ್ನು ಅನುಭವಿಸಬೇಕಾಗುತ್ತದೆ ನಿದ್ರೆ ಕೆಡಕೂಡದು. ಹೆಚ್ಚು ನಿದ್ರೆ ಮಾಡಿದರೆ ಸೋಮಾರಿತನ, ಬುದ್ಧಿಮಾಂದ್ಯ ಉಂಟಾಗುತ್ತದೆ

ನಿದ್ರೆಮಾಡುವುದರಿಂದ ಆರೋಗ್ಯವು ಉಂಟಾಗುತ್ತದೆ. ಆಹಾರವು ಜೀರ್ಣವಾಗುತ್ತದೆ. ಕಷ್ಟಪಟ್ಟು ಕೆಲಸಮಾಡಿ ನತಿಸಿಹೋದ ಅವಯವಗಳು ಕೂಡಿಕೊಳ್ಳುತ್ತವೆ. ಕೆಲಸಮಾಡಿ ಸೋತು ಹೋಗಿರುವ ಅವಯವಗಳೆಲ್ಲ ವಿಶ್ರಾಂತಿಯನ್ನು ಹೊಂದಿ ಚೇತರಿಸಿಕೊಂಡು ಮುಂದೆ ಕೆಲಸಮಾಡಲು ಲವಲವಿಕೆಯನ್ನು ಹೊಂದಿ ಸಿದ್ಧವಾಗುತ್ತವೆ. ಮನಸ್ಸಿಗೆ ಉಲ್ಲಾಸ ಉಂಟಾಗಿ ಕುತೂಹಲದಿಂದ ಕೆಲಸವಾರಂಭಿಸುತ್ತೀವೆ.

೧೩. ಮದುವೆ

ಗಂಡಸಿಗೆ ೨೫ ವರ್ಷ ಹೆಂಗಸಿಗೆ ೧೫ ವರ್ಷ ವಯಸ್ಸಿಗೆ ಮೇಲ್ಪಟ್ಟ ಮದುವೆಯಾಗಬೇಕು. ಜಾತಿ, ಕುಲ, ಶೀಲ, ವಿದ್ಯೆ, ಧನ, ರೂಪ, ವಯಸ್ಸು ಇವು ಇಬ್ಬರಿಗೂ ಅನುಗುಣವಾಗಿರಬೇಕು. ಆರೋಗ್ಯವು, ಸ್ವಭಾವವು ಚೆನ್ನಾಗಿರಬೇಕು. ಇಬ್ಬರು ಬ್ರಹ್ಮಚರ್ಯದಲ್ಲಿದ್ದು ತ್ಯಾಗಿಂದ್ರಿಯವನ್ನು ನಿಗ್ರಹಮಾಡಿ ವೀರ್ಯವನ್ನು ಕೂಡಿಟ್ಟು ಜೀವಿತಕಾಲದಲ್ಲೆಲ್ಲಾ ತೇಜಸ್ಸಿನಿಂದಲೂ ದಾರಢ್ಯದಿಂದಲೂ ಕೂಡಿ ಸಂತೋಷವಾಗಿ ಬಾಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕು.

ಮದುವೆ ಎನ್ನುವುದು ಒಬ್ಬ ಪರಪುರುಷನಿಗೂ ಒಬ್ಬ ಪರ ಸ್ತ್ರೀಗೂ ಉಂಟಾಗುವ ಅತ್ಯಂತ ಪ್ರೀತಿಕರವಾದ ಆದರಣೀಯವಾದ ಪವಿತ್ರವಾದ ಸಮಾನವಿಲ್ಲದ ಸಮೀಪವಾದ ಬಾಂಧವ್ಯ ಇಬ್ಬರೂ ಈ ಬಾಂಧವ್ಯವನ್ನು ವಿವೇಕದಿಂದ ಕಾಪಾಡಿ ಆನಂದವನ್ನು ಪಡೆಯಬೇಕು.

೧೪. ಮನೋಭಾವ

ಕಾಮ, ಕೋಪ, ಸ್ವಾರ್ಥವನ್ನು ಹದ್ದಿನಲ್ಲಿಟ್ಟು ಧೈರ್ಯಶಾಲಿಯಾಗಿಯೂ ಶುಭನಿರೀಕ್ಷಣೆಯುಳ್ಳವನಾಗಿಯೂ ಶಾಂತ ಮತ್ತು ಹರ್ಷ ಚಿತ್ತನಾಗಿಯೂ ಇದ್ದು ಸಂತೋಷದಿಂದ ಉಬ್ಬಬೇಕು. ಪ್ರತಿದಿನವೂ ಪಕ್ಕಗಳು ಒಡೆದು ಹೋಗುವ ಹಾಗೆ ಸ್ವಲ್ಪ ಹೊತ್ತು ಕೇಕೆ ಹಾಕಿಕೊಂಡು ನಗಬೇಕು. ಇದರಿಂದ ದೇಹವು ಬೆಳೆದು ಆರೋಗ್ಯವು ಹೆಚ್ಚುತ್ತದೆ. ಸತ್ಯವಾಗಿ ಪ್ರಯತ್ನಪಟ್ಟರೂ ಕಾರ್ಯದಲ್ಲಿ ಸೋಲಾದರೆ ಕೊರಗದಿರುವುದನ್ನು ಕಲಿಯಬೇಕು. ಭಯವುಳ್ಳವನಾಗಿಯೂ, ಕೆಡುಕು ನಿರೀಕ್ಷಣೆಯುಳ್ಳವನಾಗಿಯೂ ಕೋಪೋದ್ರೇಕನಾಗಿಯೂ, ಸಂಕಟ ಚಿತ್ತನಾಗಿಯೂ ಇದ್ದು ಯೋಚನೆಯಿಂದ ಕುಗ್ಗಿ ಹೋದರೆ ಅನಾರೋಗ್ಯವುಂಟಾಗುತ್ತದೆ.

ಹೇಗೆಂದರೆ

ಸದಾ ಸಂತೋಷಚಿತ್ತನಾಂ ಸಂಪದಸ್ತು ಪದೇಪದೇ।
ಸದಾ ಸಂಕಟಚಿತ್ತಾನಾಂ ವಿಪದಸ್ತು ಪದೇಪದೇ॥

ಯಾವಾಗಲೂ ಸಂತೋಷಚಿತ್ತನಾದವನಿಗೆ ಅಡಿಗಡಿಗೆ ಸಂಪತ್ತೂ ಯಾವಾಗಲೂ ಸಂಕಟ ಚಿತ್ತನಾದವನಿಗೆ ಅಡಿಗಡಿಗೆ ವಿಪತ್ತೂ ಉಂಟಾಗುತ್ತದೆ

[ಸಂಪೂರ್ಣ]

ಮಲ್ಲೇಶ್ವರ
14-6-40 } ರಾ. ಆಳ್ವಾರ್ಯಯ್ಯಂಗಾರ್, ಬಿ.ಎ.

[illegible] ದಾರಿದ್ರ್ಯವನ್ನು [illegible]ವುದು?

[illegible]ರೋಗ್ಯ ಚಿಹ್ನೆ

[illegible]ಲ್ಲುಗಳು

[illegible]ವಾದ ಎದೆ

ಡೊಂಕವಿಲ್ಲದ ಬೆನ್ನು

ಕ್ರಮವಾದ ಬಲಾಭಿವೃದ್ಧಿ

ಬಲಿಷ್ಠವಾದ ಕಾಲುಗಳು

ಮಗುವಿನ ಬೆಳವಣಿಗೆಯು ಸರಿಯಾಗಿದೆಯೇ ಇಲ್ಲವೇ ಎಂಬುವುದನ್ನು ತಿಳಿಯಲು ವೈದ್ಯನು ಈ ಐದು ಚಿಹ್ನೆಗಳನ್ನು ಗಮನಿಸುವನು. ಈ ಪೈಕಿ ಯಾವುದಾದರೊಂದು ಲೋಪವಿದ್ದಲ್ಲಿ ನಿಮ್ಮ ಮಗುವಿಗೆ ದೇಹಾಭಿವೃದ್ಧಿ ಮಾಡತಕ್ಕ ಟಾನಿಕ್ ಅತ್ಯಾವಶ್ಯಕ.

'ಸ್ಕಾಟ್'ನ ಕಾಡ್ ಲಿವರ್ ಆಯಿಲ್ ಎಮಲ್ಷನ್ ಈ ಐದು ಲಕ್ಷಣಗಳನ್ನು ವೃದ್ಧಿಪಡಿಸುವುದು. ಕಾರಣ, ಅದರಲ್ಲಿ ಈ ಕೆಳಕಂಡ ಗುಣಗಳಿವೆ.

೧. ಹಲ್ಲುಗಳನ್ನು ಬಲಪಡಿಸಿ ಹುಳುಕಾಗದಂತೆ ರಕ್ಷಿಸುವುದು.
೨. ಕೆಮ್ಮು ಮತ್ತು ನೆಗಡಿ ಬಾರದಂತೆ ಎದೆಯನ್ನು ಮತ್ತು ಶ್ವಾಸಕೋಶಗಳನ್ನು ಬಲಪಡಿಸುವುದು.
೩. ದೃಢವಾದ ಎಲುಬುಗಳನ್ನು, ಮಾಂಸಖಂಡಗಳನ್ನು ಬೆಳೆಯಿಸುವುದು.

ಸ್ಕಾಟ್ಸ್ ಎಮಲ್ಷನ್ ಪೂರ್ತಿಯಾಗಿಯೂ, ಶೀಘ್ರವಾಗಿಯೂ ಜೀರ್ಣಿಸುವುದಲ್ಲದೆ ನಿಮ್ಮ ಮಗುವು ತಿಂದ ಇತರಾಹಾರದಲ್ಲಿನ ಸತ್ವವನ್ನು ಹೆಚ್ಚಾಗಿ ಸ್ವೀಕರಿಸುವಂತೆ ಮಾಡುವುದು. ಕೆನೆಯಂತೆ ಇರುವ ಅದರ ರುಚಿಯನ್ನು ಮಕ್ಕಳು ಹೆಚ್ಚಾಗಿ ಪ್ರೀತಿಸುವರು.

ಎಲುಬಿನ ಬೆಳವಣಿಗೆ: ಒಂದು ಫಲ ಚಂಚ ಸ್ಕಾಟ್ಸ್ ಎರಡು ಪಿಂಟ್ (೨೪ ಔನ್ಸ್) ತಾಜಾ ಹಾಲಿನ ಸಮಾನ.

ದೇಹ ಬೆಳವಣಿಗೆ: ಒಂದು ಫಲ ಚಂಚ ಸ್ಕಾಟ್ಸ್ ಎರಡು ಔನ್ಸು ಬೆಣ್ಣೆ ಅಥವಾ ತುಪ್ಪಕ್ಕೆ ಸಮಾನ.



೯, ೧೬ ಔನ್ಸುಗಳ ಸೀಸೆಗಳಲ್ಲಿ ಮಾರಲ್ಪಡುತ್ತೆ. ದೊಡ್ಡ ಸೀಸೆಯಿಂದ ಅಂಭ ಹೆಚ್ಚು.

ಬಲಹೀನರಾದ ಮಕ್ಕಳಿಗೆ ಬಲಿಷ್ಠರ ಸಂಗಡ ಆಹಾರ ಕೊಟ್ಟು ಎಷ್ಟು ಶ್ರದ್ಧೆ ವಹಿಸಿದಾಗ್ಯೂ ಅಭಿವೃದ್ಧಿಯನ್ನು ಹೊಂದಲಾರರು. ಸುಲಭವಾಗಿ ಜ್ವರ, ನೆಗಡಿ ಮುಂತಾದುವುಗಳಿಗೆ ಒಳಗಾಗುವರು. ಸದಾ ಬಳಲಿಕೆ. ಮನೆಯಲ್ಲಿ ಸುಧಾರಿಸಲು ಅಸಾಧ್ಯ. ಶಾಲೆಯಲ್ಲಿ ಪಾಠಗಳ ಮೇಲೆ ದೃಷ್ಟಿಯಿರಲಾರದು. ಇದಕ್ಕೆ ಅತ್ಯಾವಶ್ಯಕವಾದುದು

SCOTT'S Emulsion

ಸ್ಕಾಟ್ಸ್ ಎಮಲ್ಷನ್

ಜೀವಾಂತರ ಶಕ್ತಿಯನ್ನುಂಟುಮಾಡುವುದು.

ರಕ್ಷಂ ವ್ಯಾಪಾರಿಗಳು: ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್, (ಇಂಡಿಯ) ಲಿ.
ಕಲ್ಕತ್ತ . ಬೊಂಬಾಯಿ . ಮದ್ರಾಸು . ಕರಾಚಿ . ರಂಗೂನ್ . ಕೊಲಂಬೊ . ಕಾನ್ಪುರ್
ಪಾಟ್ನಾ . ಅಹಮ್ಮದಾಬಾದ್ . ಕೊಚ್ಚಿನ್ . ಕಾಲಿಕಟ್ . ವಿಶಾಖಪಟ್ಟಣ . ಲಾಹೋರ್ . ಅಮೃತಸರ,

EARN Rs. 300.

Beautiful, Rectangular, Chromium, 5 years Gtd., Swiss lever Wrist Watch, may be sold to others for Rs. 18/-, but we offer them at Rs. 4/8/- ; 4 Jewls, Rs. 6/8/-; Gold gilt, Rs. 5/8/- Round or Square. Superior, Rs. 3-8 ; Gold gilt, Rs. 4-8 ; Ladies ; small Rectangular, Rs. 9-8 ; Round, Rs. 4-8 Postage and Packing annas /9/- in India, out of India Extra. free for 3 at a time.

EDMUND & CO.,
66-B, SADANANDA ROAD,
CALCUTTA.

ಹೋದ ಹೋದಲ್ಲಿ ಅಂತೆ... ಹೊಡೆವ ಜರ್ಮನ್

ಟರ್ಕಿಯ ಜರ್ಮನ್ ರಾಯಭಾರಿ ಹ... ವಿಜಯವೇ ಇಲ್ಲದ ಇವನ ರಾಜಕ...

ಟರ್ಕಿಯನ್ನು ಬ್ರಿಟನ್ನಿನಿಂದ ದೂರಮಾಡಲು ಶತಪ್ರಯತ್ನಗಳನ್ನು ಮಾಡಿ, ಕೃತಕೃತ್ಯನಾಗದೆ, ಇದೀಗ ರಷ್ಯ – ಟರ್ಕಿಗಳೊಳಗೆ ಹಣಾಹಣಿಯಾಗುವಂತೆ ಯತ್ನಿಸಿ, ಅದೂ ಅಪ್ರಯೋಜಕವಾಗಲು ಹೊಸ ಉಪಾಯಗಳ ರಾತಿಯಲ್ಲಿ ತಲೆಯನ್ನು ಹುದುಗಿ ಕುಳಿತ, ಆ ಟರ್ಕಿಯ ಅಂಕಾರದಲ್ಲಿರುವ ಜರ್ಮನ್ ರಾಯಭಾರಿ ಹರ್ ಫ್ರಿಟ್ಜ್ ವಾನ್ ಪಾಪೆನ್‌ನ ರಾಜಕೀಯ ಕಾರ್ಯ ಜಾಲಗಳೇನು?

ಕಳೆದ ಮಹಾಯುದ್ಧದ ವೇಳೆ, ಈತನು ಮಿತ್ರರಾಷ್ಟ್ರಗಳ ಗೂಢಚಾರರಿಗೆ ಮಹತ್ತಾದ ಉಪಕಾರ ಮಾಡಿದ ಜರ್ಮನ್‌ನಾದ. ಜರ್ಮನಿಗಾದರೂ ಈತ ಮಹದುಪಕಾರವನ್ನು ಮಾಡಿದ ವೀರನೇ ಆದರೂ, ಇದುವರೆಗೆ ಇವನು ತನ್ನ ಕಾರ್ಯದಲ್ಲಿ ವಿಜಯ ಸಂಪಾದಿಸಿದನೆಂಬುದೇ ಇಲ್ಲ. ಆದರೂ, ಜರ್ಮನ್ ಅಧಿಕಾರಿಗಳು ಈತನಿಗೆ ಗತಿ ತೋರಿಸದೆ—ಅಧಿಕಾರದಲ್ಲಿ ಇರಿಸಿದ್ದಾರೆ. ಅದೀಗ ಪಾಪೆನ್‌ನ ಅದೃಷ್ಟ!

ಪಾಪೆನ್ ಕಳೆದ ಮಹಾಯುದ್ಧಾರಂಭದ ವೇಳೆ, ಅಮೆರಿಕೆಯ ಮಿಲಿಟರಿ ರಾಯಭಾರಿಯಾದ ಅದುವರೆಗೆ, ಧನಾಢ್ಯ ಕುಟುಂಬದಲ್ಲಿ ಜನಿಸಿದ್ದ ಈತನ ಹೆಸರನ್ನು ಯಾರೂ ಕೇಳಿರಲಿಲ್ಲ. ಅಮೆರಿಕೆಯಲ್ಲಿ ಹಾಗೂ ಇತರ ಕಡೆಗಳಲ್ಲಿ ಗೂಢಚಾರ ಕೃತ್ಯದ ಸೂತ್ರಧಾರತೆ ವಹಿಸಿ, ಈತನು ಜರ್ಮನಿಗೆ ಅಸಮಾನ ಉಪಕಾರ ಮಾಡಿದ. ಅಮೆರಿಕೆಯಲ್ಲಿನ ಯುದ್ಧ ಸಾಮಗ್ರಿ, ಸೈನ್ಯ ಮುಂತಾದವುಗಳ ಗೂಢವನ್ನು ತಿಳಿಯಬೇಕೆಂದು ಈತ ಗೂಢಚಾರನೊಬ್ಬನಿಗೆ ಬರೆದ ಪತ್ರವೊಂದು, ಅಲ್ಲಿನ ಗೂಢಚಾರರ ಕೈಗೆ ಬಿದ್ದು, ಪಾಪೆನ್‌ನ ಆಟವನ್ನೇ ಅಡಗಿಸಿಬಿಟ್ಟಿತು.

ಅಮೆರಿಕೆಯ ತಾಟಸ್ಥ್ಯವನ್ನು ಗಮನಿಸದೆ, ಪಾಪೆನ್ ಅಲ್ಲಿ ತನ್ನ ಆಟವನ್ನಾಡಿದ. ಅಮೆರಿಕೆಯ ಗೂಢಚಾರರು ಜರ್ಮನ್ ಗೂಢಚಾರರ ಹಿಂಡನ್ನೇ ಹಿಡಿದ್ರು, ಹೆಚ್ಚಿನ ವಿಚಾರಗಳನ್ನು ತಿಳಿದುಕೊಂಡರು. ಪರಿಣಾಮವಾಗಿ, ಪಾಪೆನ್ ಜರ್ಮನಿಗೆ ಹಿಂತಿರುಗಬೇಕಾಯಿತು. ಅಮೆರಿಕೆಗೆ ತೆರಳಿ, ಶಸ್ತ್ರಾಸ್ತ್ರಗಳ ಕಾರ್ಖಾನೆಗಳಲ್ಲಿ ಗೊಂದಲ ಹರಡಿ, ಬಾಂಬುಗಳನ್ನು ಅಲ್ಲಲ್ಲಿ ಇರಿಸಿ, "ಪಾಸ್‌ಪೋರ್ಟ್" ಫೋರ್ಜರಿ ನಡೆಸಿ, ಈತ ತೋರಿದ ಸಾಹಸದ ಪರಿಣಾಮವೆಂದರೆ,– ಅದುವರೆಗೆ ಸುಮ್ಮನಿದ್ದ ಅಮೆರಿಕೆಯೂ ಯುದ್ಧಕ್ಕೆ ಸೇರಿದುದೇ! ಈ ಕಾರಣದಿಂದ ಪಾಪೆನ್ ಬ್ರಿಟನ್ನಿಗೆ ಹೆಚ್ಚಿನ ಉಪಕಾರ ಮಾಡಿದನೆನ್ನಬಹುದು.

ಅಮೆರಿಕೆಯಲ್ಲಿ ಬ್ರಿಟಿಷ್ ಗೂಢಚಾರರಂತೂ, ಇವನ ಇದಿರಿನಲ್ಲೇ ಇವನ ಪೆಟ್ಟಿಗೆಗಳ ಜಡ್ತಿ ನಡೆಸಿ, ತಪ್ಪುಗಳನ್ನು ತೋರಿಕೊಟ್ಟರೂ, ಪಾಪೆನ್ ತನ್ನ ಹಟವನ್ನು ಬಿಡಲಿಲ್ಲ. ಮಕ್ಕಳೂ ಮಾಡದಾದ ಮೂರ್ಖತೆಯನ್ನು, ಅಂತಹ ಮರವೆಯನ್ನು ಪಾಪೆನ್ ತೋರುವದರಲ್ಲಿ ಹೆಸರಾಂತನು. ಅಚಾತುರ್ಯದಲ್ಲಿ ಇವನಿಗೆ ಸಮಾನರಿಲ್ಲ. ಅದರಿಂದಾಗಿ ಎಲ್ಲೆಲ್ಲೂ ಈತನ ಆಟ ಅಪ್ರಯೋಜಕವಾಗುತ್ತಲೇ ಇದೆ.

ಅಮೆರಿಕೆಯಿಂದ ಬಿಡಾರ ಕಟ್ಟಿ ಹೊರಡುವಾಗಲೂ ಈತನೊಂದು ಬಗೆಯ ಅವಿವೇಕವನ್ನು ತೋರಿದ. ತಾನು ಹೊರಡುವ ಹಡಗದ ಹೆಸರನ್ನು ಹೇಳಿದ. ಪರಿಣಾಮವಾಗಿ ಬ್ರಿಟಿಷ್ ಗೂಢಚಾರರು, ಇಂಗ್ಲಾಂಡಿನ ಬಳಿ ಮತ್ತೊಮ್ಮೆ ಇವನ ಜಡ್ತಿ ನಡೆಸಿ, ಹೆಚ್ಚಿನ ಪತ್ರಗಳನ್ನು ಪಡೆದರು. ಅಂತೂ, ಮರವೆ, ಅವಿವೇಕ, ಅಚಾತುರ್ಯಗಳಿಂದ ಎಲ್ಲವನ್ನೂ ಹಾಳು ಮಾಡಿಕೊಂಡ. ಬ್ರಿಟಿಷ್ ಗೂಢಚಾರರ ಬಲೆಗೆ ಬಿದ್ದು, ಸುಮಾರು ೩೦ ಮಂದಿ ಜರ್ಮನ್ ಗೂಢಚಾರರ ಸೆರೆಗೆ ಕಾರಣನಾದ.

ಈ ವಿಚಾರಗ... ಬಂದರೂ, ಇವನ ಅಪ... ವಾದರೂ, ಜರ್ಮನ್ ಅಧಿಕಾರಿಗಳು ಇವನಿಗೆ ಮತ್ತೊಂದು ಕೆಲಸವನ್ನು ಕೊಟ್ಟು ತಮ್ಮ ಗೌರವವನ್ನು ತೋರಿದರು. ಜರ್ಮನಿಗೆ ಹಿಂತಿರುಗಿದೊಡನೆಯೇ ಸೈನ್ಯದ ಸಮಿತಿಯ ಮುಖ್ಯಸ್ಥನಾಗಿ ಈತ ಟರ್ಕಿಗೆ ಕಳುಹಿಸಲ್ಪಟ್ಟ. ಇಲ್ಲಿ ತನ್ನ ಅವಿವೇಕವನ್ನು ಕೊಂಚ ಕಡಿಮೆ ಮಾಡಿದರೂ, ಸೈನ್ಯವು ಹಿಂತಿರುಗುವಾಗ, ಪ್ರಾಮುಖ್ಯ ಕಾಗದಪತ್ರಗಳಿದ್ದ ಇವನ ಪೆಟ್ಟಿಗೆ, ಎಲ್ಲೊ ಒಂದೆಡೆ ಬಿದ್ದೇ ಬಿತ್ತು. ಅಂತೂ, ಯುದ್ಧ ಮುಗಿಯುತ್ತಲಿದ್ದ ಕಾಲ ಆಡಾಗಿದ್ದುದರಿಂದ, ಜರ್ಮನಿಗೆ ಈ ಪತ್ರಗಳು ಪ್ರಾಮುಖ್ಯವಾದವುಗಳಾಗಿದ್ದಿಲ್ಲ.

೧೯೧೮ರ ಅನಂತರ, ಪಾಪೆನ್‌ನ ಪತ್ತೆ ಕೆಲ ಕಾಲ ಸಿಗಲಿಲ್ಲ. ತನ್ನ ಆಸ್ತಿ–ಮನೆಗಳಿದ್ದಲ್ಲಿಗೆ ತೆರಳಿ, ತೆಪ್ಪಗೆ ಕುಳಿತುಕೊಂಡ. ಆದರೆ, ಮೊದಲ ಸಂಕಷ್ಟದ ವರ್ಷಗಳು ಸರಿದೊಡನೆ, ರಾಜಕಾರಣವು ಪಾಪೆನ್‌ನನ್ನು ಸೆಳೆಯಿತು. ಪತ್ರಿಕೆಯೊಂದನ್ನು ಕೊಂಡು, ನಡೆಸಿ, ಧನಾಢ್ಯ ಜವಿನ್ವಾರರ ಬೆಂಬಲ ಪಡೆದು ಕೆಲಸ ನಿರ್ವಹಿಸಿದ. ಹಿಂದಿನ ಅರಸೊತ್ತಿಗೆ ಬರಲೆಂದು ಆತಿಸಿದ.

ನಾಜಿಗಳು ತಲೆ ಎತ್ತುತ್ತಿರುವ ವಿಚಾರವು ಮೊದ ಮೊದಲು ಪಾಪೆನ್‌ನಿಗೆ ರುಚಿಸಲಿಲ್ಲ. ಆದರೆ ಕ್ರಮೇಣ ಹಿಟ್ಲರನ ಪ್ರಭಾವ ಹಾಗೂ ಆತನಿಗಿದ್ದ ಬೆಂಬಲ ಪಾಪೆನ್‌ನನ್ನು ಸೆಳೆಯಿತು. ತನ್ನ ಕೈವಾಡ ತೋರಲು ಎಡೆ ಇದೆಯೆಂದಾತ ಎಣಿಸಿದ.

ಪಾರ್ಲಿಮೆಂಟಿನಲ್ಲಿ ಅತ್ಯಧಿಕ ಸ್ಥಾನಗಳನ್ನು ಪಡೆಯಲೆಂದು ನಾಜಿಗಳು ಹಾತೊರೆಯುತ್ತಿದ್ದಾಗ್ಗೆ, ಪಾಪೆನ್ ಹಿಟ್ಲರನನ್ನು ತನ್ನ ಆಯುಧವಾಗಿ ಉಪಯೋಗಿಸಿ ಗೆಲುವನ್ನು ಪಡೆಯಲು ಯೋಚಿಸಿದ. ಹಿಂಡನ್‌ಬರ್ಗ್, ಪಾಪೆನ್‌ನನ್ನು ಛಾನ್ಸಲರನ್ನಾಗಿ ಮಾಡಿದ್ದ. ಅದು ಅಲ್ಪ ಕಾಲ. ಅದೇ ಮುಂದೆ ನಾಜಿಗಳಿಗೆ ಸಾಕಷ್ಟು ಮತ ದೊರೆಯದಿದ್ದುದನ್ನು ಕಂಡು, ಪಾಪೆನ್ ಛಾನ್ಸಲರ್ ಸ್ಥಾನವನ್ನು ಸ್ವೀಕರಿಸಲು ಒಪ್ಪಲಿಲ್ಲ. ಬೆಳೆಯುತ್ತಿರುವ ಹಿಟ್ಲರನ ಶಕ್ತಿಯನ್ನು ತನ್ನ ದಾಗಿ ಮಾಡಿಕೊಳ್ಳಲು, ನಾಜಿಗಳ ಪ್ರೀತಿಗೆ ಪಾತ್ರನಾಗಲು ಪಾಪೆನ್ ಈ ಆಟ ಆಡಿದ.

ಹಿಟ್ಲರನೇ ಅಧಿಕಾರಕ್ಕೆ ಬಂದರೆ, ರಾಜಕೀಯ ವಿಚಾರದಲ್ಲಿ ಅದಾವ ಯೋಗ್ಯತರ ಬೇತಿಯೂ ಇರದ ತಾನು, ಸರಿಯಾದ ಕೆಲಸ ನಡೆಸಲಾರೆನೆಂದು ತಿಳಿದ ಪಾಪೆನ್, ಹಿಟ್ಲರನು ಒಮ್ಮೆ ಅಧಿಕಾರ ವಹಿಸಿ, ಆಶೆಯನ್ನು ಪೂರೈಸಿಕೊಳ್ಳಲೆಂದು ಯೋಚಿಸಿದ. ತನ್ನ ಜಾಣ್ಮೆಯನ್ನೆಲ್ಲ ಪ್ರಯೋಗಿಸಿ, ಹಿಂಡನ್‌ಬರ್ಗ್ ತನ್ನ ಸ್ಥಾನವನ್ನು ಹಿಟ್ಲರನಿಗೆ ಕೊಡುವಂತೆ ಮಾಡಿದ. ಸರಿ! ಮಂತ್ರಿಮಂಡಲದಲ್ಲಿ ಪಾಪೆನ್‌ನಿಗೂ ಎಡೆ ದೊರೆಯಿತು.

ಹಿಟ್ಲರನು ತಾನಾಗಿ ಅಧಿಕಾರದಲ್ಲಿ ಬೇಸರಗೊಂಡು, ಅದನ್ನು ಬಿಟ್ಟರೆ, ತಾನು ಆ ಅಧಿಕಾರ ವಹಿಸಬಹುದೆಂದೆಣಿಸಿದ್ದ ಪಾಪೆನ್‌ನ ಹಗಲು ಕನಸು, ನಾಶವಾಯಿತು. ಅಷ್ಟೇ ಅಲ್ಲ; ಹಲವು ಬಾರಿ ವಿವಿಧ ಅಧಿಕಾರಿಗಳ ಆಗ್ರಹಕ್ಕೆ ಈತ ಮುಂದೆ ಪಾತ್ರನಾದ. ವಿರೋಧಿಗಳನ್ನು ಹಿಮ್ಲರ್ ಕೊಂದಾಗ, ಪಾಪೆನ್ ಸತ್ತವನೊಬ್ಬನ ವಿಚಾರದಲ್ಲಿ ಸಂತಾಪ ಸೂಚಿಸಿ, ಹಿಮ್ಲರನ ಆಗ್ರಹಕ್ಕೆ ತುತ್ತಾದ. ಆದರೆ ಹಿಟ್ಲರನಿಂದಾಗಿ ಬದುಕಿಕೊಂಡ.

ಪಾಪೆನ್‌ನ ಅಚಾತುರ್ಯವನ್ನರಿತ ಹಿಟ್ಲರ್, ಅತನನ್ನು ಯುಕ್ತ ಕಾರ್ಯಕ್ಕೆ ನೇಮಿಸಿದ. ಆಸ್ಟ್ರಿಯವನ್ನು ನುಂಗಲು ಸಹಕಾರಿಯಾದ ಕೆಲ... ನಡೆಸಬೇಕೆಂದು ತಿಳಿಸಿ, ಆಸ್ಟ್ರಿ... ರಾಯಭಾರಿಯಾಗಿ ಕಳುಹಿದ. ...ಲ್ಲದೆ, ಆತನ ಆಟ ಸಾಗದಿದ್ದರೆ, ಅವನನ್ನು ಕೊಲ್ಲಿಸಿ, ಆಸ್ಟ್ರಿಯಾನರು ಕೊಂದರೆಂದು ಆಸ್ಟ್ರಿಯದ ಮೇಲೇರಿ ಸಾಗಲೂ ಹಿಟ್ಲರ್ ಯೋಚಿಸಿದ್ದ. ಅಂತೂ ಪಾಪೆನ್‌ನ ಆಯುಷ್ಯ ಬಲವಾಗಿದ್ದುದರಿಂದಲೋ ಏನೋ, ಆತ ಬದುಕಿ ಬಂದ. ಆಸ್ಟ್ರಿಯಾ ಸತ್ತಿತು.

ಕಳೆದ ವರ್ಷದ ಆರಂಭದಲ್ಲಿ ಹಿಟ್ಲರನು ಪಾಪೆನ್‌ನ ಮನೆಯಲ್ಲಿ ಕೆಲ ದಿನವಿದ್ದು ಹಿಂತಿರುಗಿದ್ದ. ಈ ವೇಳೆಗೆ, ಪಾಪೆನ್ ತನ್ನಿಂದಾದ ಕಾರ್ಯ ನಡೆಸಲು ಸಿದ್ಧನಿರುವೆನೆಂದೂ, ತನಗೆ ಆಸ್ಪದವೀಯಬೇಕೆಂದೂ ಹಿಟ್ಲರನನ್ನು ಯಾಚಿಸಿದ್ದ. ಪರಿಣಾಮವಾಗಿ, ಪಾಪೆನ್ ಟರ್ಕಿಯ ರಾಯಭಾರಿಯಾದ. ಟರ್ಕಿ ಬ್ರಿಟನ್ನಿನೊಡನೆ ಸಂಧಿಮಾಡಿಕೊಳ್ಳುವುದನ್ನು ಕಣ್ಣು ಬಿಟ್ಟು ನೋಡಿದ.

ಅಂತೂ ತನ್ನ ಅವಗುಣಗಳಿಂದ ಜಯದ ಹೆಸರನ್ನು ಕೇಳಿರದ, ಪಾಪೆನ್, ತನ್ನ ಅಧಿಕಾರವನ್ನು ಇನ್ನೂ ಕಳೆದುಕೊಳ್ಳದೆ, "ಮೂರ್ಖರೂ ಅಪ್ರಯೋಜಕರೂ ಆದವರಿಗೂ ಅಧಿಕಾರ ದೊರೆವುದು" ಎಂಬ ಮಾತು ಮನೆಮಾತಾಗುವಂತೆ ಮಾಡಿದ್ದಾನೆ.

ಅಶಕ್ತ ಮಕ್ಕಳು

ಡೋಂಗರೇ ಬಾಲಾಮೃತವನ್ನು

ಕೊಡುವದರಿಂದ

ಸಶಕ್ತರೂ,

ಚೆಲುವರೂ,

ಸಂತೋಷ ಚಿತ್ತರೂ

ಆಗುವರು

PIGMY DEPOSIT

Interesting Features

1. Deposit collected at your door.
2. The minimum deposit payable at a time is only two annas.
3. One rupee paid every day will get you with interest Rs. 2,800/- in seven years.
4. Any smaller amount can be paid and that too as and when one wishes.
5. Payment can be even discontinued and again continued when convenient.
6. No forfeiture of principal or interest for discontinuance.
7. Any sum of two annas or more can be paid at any time and whatever amount that is at credit of each deposit from time to time carries interest.

One does not feel when one is paying, but is agreeably surprised that what one has paid has grown into a fortune. Truly, little drops of water make the mighty ocean.

The Syndicate originated this novel plan more than eleven years ago The thousands who have adopted it and the many that have admired it bear outstanding evidence of what provision one can do for the evening of one's life.

Apply for further particulars to our Mangalore Felix Pai Bazar Branch.

THE CANARA INDUSTRIAL & BANKING SYNDICATE, LIMITED

HEAD OFFICE: UDIPI (S. INDIA)

ಅಮೇರಿಕದ ಡಾ। ವಿಲ್‌ಸನ್‌ರವರ ವಿಶಿಷ್ಠತೆ.

ಯೌವನ ಮತ್ತು ವಿಲಾಸಗಳಿಗೊಂದು ವರದಾನ

ಫೊಸ್ಫೋ ಇಲೆಕ್ಟ್ರೋಜಿನ್

ತಾರುಣ್ಯದ ದುಶ್ಚಟಗಳ ಪರಿಣಾಮವಾಗಿ ಜನರು ಪ್ರಮೇಹ, ಮೂತ್ರಾಶಯದ ಉರಿ ಮತ್ತು ವ್ರಣ, ಬಹುಮೂತ್ರ, ಸ್ನಷ್ಟೇಂದ್ರಿಯ, ತಲೆಶೂಲೆ, ಕ್ಷೀಣ ಧಾತು ಮೊದಲಾದ ಭಯಂಕರ ಪರಿಣಾಮವನ್ನು ತಂದುಕೊಂಡು ಕೊನೆಗೆ ನಪುಂಸಕತ್ವವೆಂಬ ಫಲವನ್ನುಣ್ಣುವಂಥ ಸ್ಥಿತಿಗೆ ಬರುವರು. ಇದಕ್ಕೆ ಖಾತರಿಯಾದ ಮತ್ತು ಒಂದೇ ಒಂದಾದ ಔಷಧವೆಂದರೆ ಡಾ। ವಿಲ್‌ಸನ್‌ರ ಫೊಸ್ಫೋ–ಇಲೆಕ್ಟ್ರೋಜಿನ್ ಎಂಬುದೇ. ಇದು ವೃದ್ಧರನ್ನು ತರುಣರನ್ನಾಗಿಯೂ, ದುರ್ಬಲರನ್ನು ಬಲಿಷ್ಠರನ್ನಾಗಿಯೂ ಮಾಡುವುದು ಇದೇ ಅಮೃತ. ಪ್ರತಿಯೊಂದು ಗುಟುಕು ನವಚೇತನ ಕೊಡುವುದು. ಬೆಲೆ ಸೀಸೆ ಒಂದಕ್ಕೆ ರೂ. 1–8–0.

Address:— MESSRS. FRANK ROBENSON & CO.,
1A, Bauka Roy Street, CALCUTTA.

ಏಜೆಂಟ್ಸ್: ಷಾ ಕಂಪೆನಿ, ಗಾ। ಕೊಲೇಜಿನ ಎದುರು, ಮಂಗಳೂರು.

KAYAKALPA MODAK

ಕಾಯಕಲ್ಪ ಮೋದಕ

ಆಯುರ್ವೇದಿಕ್ ಡ್ರಗ್ ರೀಸರ್ಚ್ ಇನ್ಸ್‌ಟಿಟ್ಯೂಟ್ ಇವರ ಶರೀರಕ್ಕೆ ದಾರ್ಢ್ಯ ವ ಪುಷ್ಟತೆ ಉಂಟುಮಾಡಿ, ಅಬಾಲವೃದ್ಧರಿಗೆ ರೋಗರಹಿತರಾಗಿ, ದೀರ್ಘಾಯುವನ್ನು ಕೊಡುವ ಚರಕೋಕ್ತ ದಿವ್ಯ ವನಸ್ಪತಿಗಳಿಂದ ಕೂಡಿರುವ ವಿಶೇಷ ಮೋದಕ. ಬಾಟ್ಲಿ 1ಕ್ಕೆ ರೂಪಾಯಿ 3–8–0 (ಪೇಕಿಂಗ್ ವ ಟಪ್ಪಾಲು ಹಾಸಲು ಮಾಫಿ).

Sole Distributors: THE

Indian Drug & General Agencies,

23, Stingers Street G. T. MADRAS.

ಪೋಲೆಂಡಿನಲ್ಲಿ ನಾಜಿಗಳ ತಾಂ

ಪೋಲರ ಸ್ವಾತಂತ್ರ್ಯ, ಸಂಸ್ಕೃತಿ, ಆಸ್ತಿ ಸಕಲ

೧೦ ಸಾವಿರ ಮಂದಿ ಗುಂಡಿಗೆ ಆಹುತಿ
ಇದರ ಹಲ ಪಾಲು ಸೆರೆ ಸೇರಿದರು

ತಾವು ತಮ್ಮ ಜಗಳಗಂಟತನದಿಂದಾಗಿ ಕೆದ್ದ ಪ್ರದೇಶಗಳನ್ನು ಜರ್ಮನರು ಹೇಗೆ ಸುಲಿಗೆ ಮಾಡುತ್ತಿರುವರೆಂಬುದಕ್ಕೆ, ಇಂದಿನ ಪೋಲೇಂಡಿನ ಪರಿಸ್ಥಿತಿಯನ್ನೂ, ಅಲ್ಲಿ ಜರ್ಮನರು ನಡೆಸುತ್ತಿರುವ ಕೃತ್ಯಗಳನ್ನೂ ನೋಡಿದರೆ ಸಾಕಾಗಬಹುದು.

ಜರ್ಮನಿಯ ರಾಜಕೀಯ ಪಂಗಡದ ಸದಸ್ಯರು, ಸೇನೆ (ರೀಚ್‌ವರ್) ಮತ್ತು ಪೋಲೀಸ್ (ಶ್ಚುಟ್ಜ್–ಸ್ಟಾಫೆಲ್) ಹಾಗೂ "ಗೆಸ್ಟಾಪೊ" ಗೂಢಚಾರ ದಳಗಳು ಪೋಲೇಂಡಿನ ಮೇಲೆ ತಮ್ಮ ಸಂಪೂರ್ಣ ಹಿಡಿತವನ್ನಿಟ್ಟುಕೊಂಡು, ಇಂದಿನ ಯುದ್ಧದಲ್ಲಿ ಯುರೋಪಿನ ವೀರರಾದ ಫ್ರೆಂಚರಿಗಿಂತಲೂ, ಒಂದು ಮಡಿ ಮೇಲಾದ ವೀರರೆಂದು ತೋರಿ ಮೆರೆದ ಪೋಲರನ್ನು, ನಿರ್ವೀರ್ಯರನ್ನಾಗಿ ಮಾಡುತ್ತಿವೆ.

ನಾಜಿ ಅಧಿಕಾರಿಗಳು

ಸುಮಾರು ೨೫ ಸಾವಿರ ಜರ್ಮನ್ ಅಧಿಕಾರಿಗಳು, ಪೋಲೇಂಡನ್ನು ಆಳಲು, ರಾಷ್ಟ್ರದ ವಿವಿಧ ಮೂಲೆಗಳಿಗೆ ಕಳುಹಲ್ಪಟ್ಟಿದ್ದಾರೆ. ಯುಕ್ತ ರೀತಿಯಿಂದ ಪೋಲೇಂಡನ್ನು ಆಳಿಕೊಂಡು ಆಹಾರ ಸಾಮಗ್ರಿಗಳ ಮೇಲೆ ಹಿಡಿತವನ್ನಿರಿಸಿ, ಕೈಗಾರಿಕೆಯನ್ನು ಪುನರ್ರಚಿಸಿ, ರೈಲ್ವೆಯನ್ನು,— ಮುಖ್ಯವಾಗಿ ರಷ್ಯಕ್ಕೆ ವಶವಾದ ಪ್ರದೇಶದ ಗಡಿಯಿಂದ ಜರ್ಮನಿಯ ಗಡಿಗೆ ಸಂಬಂಧ ಬೆಳೆಸುವದನ್ನು ಸ್ಥಾಪಿಸಿ, ಯೋಗ್ಯ ವ್ಯವಸ್ಥೆಗೊಳಿಸುವ ಜವಾಬ್ದಾರಿ ಈ ಅಧಿಕಾರಿಗಳದು. ಪೋಲರ ವಶವಿದ್ದ ಸಂಸ್ಥೆಗಳು ನಾಶವಾಗುವಂತೆ ಮಾಡಿ, ಎಲ್ಲವೂ ಜರ್ಮನರ ಅಂಕೆಗೇ ಬಾಗುವಂತೆ ಮಾಡುವ ಕೆಲಸವೂ ಇವರಿಗೇ ಸೇರಿದೆ. ಅಂತೂ ಈ ಅಧಿಕಾರಿಗಳಿಂದು ಪೋಲರ ಆರ್ಥಿಕ ಜೀವನವನ್ನು ಅಡಿ ಮೇಲು ಮಾಡಿ ತಮ್ಮ ಅಂಕೆಗೆ ಬಾಗಿಸಿಕೊಳ್ಳುವುದರಲ್ಲಿ ಕೃತಾರ್ಥರಾಗಿದ್ದಾರೆ. ಪೋಲೇಂಡಿನ ಮಹಾ ಕೈಗಾರಿಕೆಗಳ ಹಾಗೂ ಕಾರ್ಖಾನೆಗಳ ವಿಚಾರದಲ್ಲಿಯೂ ಕೈಯಿಳುಹಿದ್ದಾರೆ. ಆದರೆ, ಈ ಕಾರ್ಯಗಳಿಂದ ನಿರುದ್ಯೋಗಕ್ಕೆ ತುತ್ತಾದ ಅಕ್ಷಾಂತರ ಪೋಲ ಮಜೂರರಿಗೆ ಉದ್ಯೋಗ ದೊರೆಯಿಸಲು ಜರ್ಮನ್ ಅಧಿಕಾರಿಗಳು ಸಮರ್ಥರಾಗಿಲ್ಲ.

ಎಣ್ಣೆ ಹಾಗೂ ಯುದ್ಧಕ್ಕೆ ಸಹಕಾರಿಯಾದ ಕಚ್ಚಾ ಮಾಲುಗಳು, ಪೋಲೇಂಡಿನಿಂದ ಹೆಚ್ಚು ಹೆಚ್ಚಾಗಿ ಜರ್ಮನಿಯನ್ನು ಸೇರುವಂತೆ, ಈ ಅಧಿಕಾರಿಗಳು ಮಾಡಿದ್ದಾರೆ. ಆದರೆ, ಸೈನ್ಯದ ಅಧಿಕಾರ ದರ್ಪದೊಡನೆ, ಇವರ ಆಳ್ವಿಕೆಯನ್ನು ಹೋಲಿಸಿ ನೋಡಿದರೆ, ಈ ಅಧಿಕಾರಿಗಳೇ ಕರುಣಿಗಳೆಂದು ಕಂಡುಬರುವುದಂತೆ! ಪೋಲರ ಸೈನ್ಯ ಹಾಗೂ ಸೈನ್ಯಾಧಿಕಾರಿಗಳೇ ಮುಂತಾದವರ ಮೇಲೆ ಇರಿಸಲಾದ ತಡೆ, ಹಿಡಿತ, ಶಾಸನಗಳು ಅವೆಷ್ಟು ಭೀಕರವೆಂದರೆ, ಜರ್ಮನ್ ಅಧಿಕಾರಿಗಳಿಗೇ ಇದು ಕಷ್ಟವಾಗಿ ನಿಷ್ಠುರವಾಗಿ ಕಂಡುಬಂದಿದೆ. ಹಲವು ವೇಳೆ, ಜರ್ಮನ್ ಅಧಿಕಾರಿಗಳು ಕೂಡಾ, ಜರ್ಮನ್ ಮಿಲಿಟರಿ ಅಧಿಕಾರಿಗಳ ನಿರ್ಬಂಧಗಳಿಗೆ ಒಳಗಾಗುವುದೂ ಇದೆ. ವಾರ್ಸೋ, ಡೀನಾ, ಲುಬ್ಲಿನ್ ಮತ್ತು ಡೆನ್‌ಜಿಗ್ ಪ್ರಾಂತ್ಯಗಳಿಗೆ ಹೋಗಬೇಕಾದರೆ, ಜರ್ಮನ್ ಅಧಿಕಾರಿಗಳೂ ತಮ್ಮ "ಪಾಸ್" ಗಳನ್ನು ತೋರಿಸಬೇಕಾಗಿದೆ.

ಜರ್ಮನ್ ಸೇನೆಯ ಕಾರ್ಯ

ರಾಷ್ಟ್ರದಲ್ಲಿ ಶಾಂತಿ ಹಾಗೂ ನ್ಯಾಯಗಳು ನೆಲಸುವಂತೆ ಮಾತ್ರ, ಸೈನಿಕರು ಯತ್ನಿಸುವುದಲ್ಲ. ಬದಲು ಮುಂದಿಯ ಬಂಡಾಯವೇಳದಂತೆಯೂ ಎಚ್ಚರ ವಹಿಸಬೇಕಾಗುತ್ತದೆ. ಆಗಾಗ ಸಂಶಯಗೊಂಡು, ಪೋಲರನ್ನು ನೂರು ಗಟ್ಟಲೆಯಲ್ಲಿ ಸೆರೆ ಹಿಡಿದು, ಕ್ರಾಂತಿಯ ಕುರುಹಿನ ಹುಟ್ಟನ್ನು ನಿರ್ನಾಮಗೊಳಿಸುವರು ಇವರು. "ಗೆಸ್ಟಾಪೊ" ಜನರಿಂದ ಕಂಡು ಹಿಡಿಯಲ್ಪಟ್ಟು, ತಿಳಿಸಲಾದ ಮುಂದಿನ [illegible] ಸೆರೆ ಹಿಡಿದು, ಸೆರೆಗೆ ಸೇರಿಸುವ, ನ್ಯಾಯ ವಿಚಾರಣೆಯಿಲ್ಲದೆ [illegible] ಕಾರ್ಯಗಳೂ ಇವರ ಪಾಲಿಗೇ [illegible] ಪೋಲೇಂಡನ್ನು, ನಾಜಿಗಳು [illegible] ನಿಂದ, ಆಗಾಗ ಗುಂಪು ಗುಂಪಾಗಿ [illegible] ಕಾರ್ಯ ಸಾಗುತ್ತಲೇ ಇದೆ. ಒಂದು ಕಡೆ ಸೆರೆ ಹಿಡಿವ ಕಾರ್ಯದಲ್ಲಿ, ಈ ನಾಜಿ ಸೈನಿಕರು, ಸುಮಾರು ೫೦೦ ಮಂದಿ ಯೆಹೂದಿಗಳು, ರಾಜಕಾರಣಿಗಳು ಹಾಗೂ ಪಾದ್ರಿಗಳನ್ನು ಬಂಧಿಸಿ, ಪೋಜನ್ ಎಂಬಲ್ಲಿ ಗುಂಡಿಕ್ಕಿ ಕೊಂದಿದ್ದಾರೆ. ಯುದ್ಧ ಮುಗಿದು, ಇಷ್ಟು ಕಾಲವಾದರೂ, ಈ ಸೈನಿಕರು, ಪೋಲರಲ್ಲಿ ಸದಾ ಭಯವು ಮನೆ ಮಾಡಿಕೊಂಡಿರುವಂತೆ ಮಾಡಲು, ಪಟ್ಟಣಗಳ ಬೀದಿಬೀದಿಗಳಲ್ಲಿ ತಿರುಗಾಡುತ್ತ, ತಮ್ಮ ದರ್ಪ ತೋರಿಸುವುದನ್ನು ಬಿಟ್ಟಿಲ್ಲ. ಈ ಸೈನಿಕರು ಸಿಕ್ಕಸಿಕ್ಕ ಪೋಲರಿಗೆಲ್ಲ, ಪೋಲೇಂಡಿನ ಸಕಲ ಬೀದಿಗಳ ಗೋಡೆಗಳಲ್ಲೂ ಬರೆಯಲ್ಪಟ್ಟ ಅದೊಂದು ಸೂಚನೆಯನ್ನು ತೋರಿಸುತ್ತಲೇ ಇರುತ್ತಾರೆ. ಈ ಸೂಚನೆಯೆಂದರೆ, "ಗೆದ್ದವರು–ಗೆಲ್ಲಲ್ಪಟ್ಟವರು ಎಂಬ ಭೇದ ಇನ್ನೂ ತಿಳಿದಿರದ ಪೋಲರನ್ನು, ವಿಚಿತ್ರ ತಿಕ್ಷೆಗೆ ಗುರಿಪಡಿಸಲಾಗುವುದು" ಎಂಬುದೇ.

ಪೋಲರಿಂದ ತಡೆದುಕೊಳ್ಳಲು ಸಾಧ್ಯವೇ ಇಲ್ಲದ ಕಾಟವನ್ನು ಕೊಡುವವರೆಂದರೆ "ಹಿಮ್ಲರನ ಸೇನೆ"ಯಾದ "ಗೆಸ್ಟಾಪೊ" ದಳದವರು. ಇವರ ಕಣ್ಣಿಗೆ ಬೀಳದೆ ಬಾಳುವುದೂ, ಇವರಿಗೆ ಕೇಳಿಸದಂತೆ ನುಡಿಯುವುದೂ ಪೋಲೇಂಡಿನಲ್ಲಿ ಅಸಾಧ್ಯವಾಗಿದೆ. ನಾಜಿ ಅಧಿಕಾರಿಗಳು ಕೂಡಾ, ಇವರಿಂದ ಪರೀಕ್ಷಿಸಲ್ಪಡುತ್ತಿದ್ದಾರೆ. ಅಂದ ಮೇಲೆ, ಪೋಲರ ಪರಿಸ್ಥಿತಿ ಇಂದು ಯಾವ ರೀತಿ ಇರಬಹುದೆಂದು ಬೇರೆ ಹೇಳಬೇಕಾಗಿಲ್ಲ. ವಿವಿಧ ಚಿತ್ರಹಿಂಸೆಗಳಿಗಿಂದು ಪೋಲರು ಗುರಿಯಾಗಿ ನರಳುತ್ತಿದ್ದಾರೆ!

ಭೀಕರ ದೃಶ್ಯ

ಜರ್ಮನರು ಪೋಲೇಂಡಿನಲ್ಲಿ ನಡೆಸಿದ ಕೃತ್ಯಗಳಲ್ಲಿ, ಸುಮಾರು ೧೦ ವಾರಗಳಲ್ಲಿ, ೧೦ ಸಾವಿರಕ್ಕೂ ಮಿಕ್ಕಿ ಪೋಲರನ್ನು ಗುಂಡಿಟ್ಟು ಕೊಂದ ವಿಚಾರವು, ಜರ್ಮನಿಯ ಇತಿಹಾಸದ ಅಸಮಾನ ಭೀಕರ ಪರಿಚ್ಛೇದವಾಗಿ ಉಳಿಯದಿರದು. ಪೋಲೇಂಡಿನಲ್ಲಿದ್ದ ತಾಟಸ್ಥ್ಯ ರಾಷ್ಟ್ರಗಳ ಮಂದಿ, ಇದಕ್ಕಿಂತಲೂ ಭೀಕರತರವಾದ ಹಲವು ವಿಷಯಗಳನ್ನು ತಾವು ಕಂಡಿರುವೆವಾಗಿ ತಿಳಿಸಿದ್ದಾರೆ. ಕುಡಿದು ಮತ್ತರಾದ "ಗೆಸ್ಟಾಪೊ" ದಳದವರು, ಬೀದಿಗಳಲ್ಲಿ ಸುಮ್ಮನೆ ಸಾಗುತ್ತಿದ್ದ ಪೋಲ ಸ್ತ್ರೀ ಪುರುಷರ ಮೇಲೆ, "ರಿವಾಲ್ವರ್" ಪ್ರಯೋಗಿಸಿ, ಅಭ್ಯಾಸ ನಡೆಸುವುದೂ ಇದೆಯಂತೆ. ಇದೀ ನಾಜಿ ಪಾರ್ಟಿಯ ಅಸ್ತಿವಾರವೇ ಈ "ಗೆಸ್ಟಾಪೊ" ಆಗಿರುವದರಿಂದ, ಇವರು ಅದೇನು ಕ್ರೂರ ಕೃತ್ಯವನ್ನೆಸಗಿದರೂ ಕೇಳುವವರೇ ಇಲ್ಲವಾಗಿದೆ.

ಅದಾರನ್ನೇ ಆಗಲಿ, ಸೆರೆಹಿಡಿದು [illegible] ಸೇರಿಸಲು ಅಥವಾ ಗುಂಡಿಟ್ಟು ಕೊಲ್ಲ[illegible] ಅಧಿಕಾರ ಇವರಿಗಿದೆ. ಈ ರೀತಿಯ ಪೈ[illegible]ಸ್ ಅತ್ಯಾಚಾರವು, ರಷ್ಯದ ಆಳಿದುಹೋದ ಜಾರನ ಸರಕಾರದಲ್ಲೂ ಇರಲಿಲ್ಲವೆಂದು ಹೇಳಲಾಗಿದೆ. ಅಂತೂ ಈ ಮುಂದಿ ಎಲ್ಲೆಲ್ಲಿ ನೋಡಿದರೂ, ಅಲ್ಲಿ ಇದ್ದೇ ಇದ್ದಾರೆ. ಗೆಸ್ಟಾಪೊ ಮುಂದಿಯ ಕಣ್ಣಿಗೆ ಬೀಳದಂತಿರುವುದೆಂದರೆ, ದೇವರು ಕಾಣದಂತೆ ಕುಳಿತಂತೆ ಎಂಬಂತಾಗಿದೆ!

ಯೆಹೂದಿಗಳ ಅವಸ್ಥೆ

ಜರ್ಮನ್ ಅಂಕೆಗೆ ಬಾಗಿದ ಇತರ ಪ್ರದೇಶಗಳಂತೆ, ಇಲ್ಲಿಯೂ ಯೆಹೂದಿಯರ ಬಾಳು ಹಾಳಾಗಿದೆ. "ಗೆಸ್ಟಾಪೊ" ದಳದ ಚಿತ್ರಹಿಂಸೆಗೆ ಇವರು ಗುರಿಯಾಗಿದ್ದಾರೆ. ಸಕಲ ಯೆಹೂದಿಯರ ಆಸ್ತಿ, ಬದುಕು, ಧನ, ಕನಕಗಳು ನಾಜಿಗಳ ಪಾಲಿಗೆ ಸೇರಿವೆ. ಇವರು ಉದ್ಯೋಗಗಳಿಂದ ತೆಗೆದುಹಾಕಲ್ಪಟ್ಟಿದ್ದಾರೆ. ದಿನದ ಕೆಲ ತಾಸುಗಳಲ್ಲಿ, ಅವರು ಮಾರ್ಗದಲ್ಲಿ ನಡೆಯಲೂ

ಬಲ್ಲಪ್ಪ ಮತ್ತು ಬಲ್ಲಪ್ಪ



ಸ್ವಚ್ಛವಾದ ಚುರುಕಾದ ಬುದ್ಧಿಯೇ ಸರಿಯಾದ ಕಾರ್ಯಕ್ರಮದ ರಹಸ್ಯ. ನಾನು ಪ್ರತಿ ಬೆಳಿಗ್ಗೆ

ಈನೊಸ್

"ಫ್ರೂಟ್ ಸಾಲ್ಟ್"

ತೆಗೆದು ಕೊಳ್ಳುತ್ತೇನೆ— ದಿನ ಪೂರ್ತಿ ಚಟುವಟಿಕೆಯಾಗಿರುತ್ತೇನೆ

711

ಈನೊಸ್ ಫ್ರೂಟ್ ಸಾಲ್ಟ್'ನ್ನು ಸೇವಿಸಿದರೆ ಬುದ್ಧಿ ಕಾರ್ಯಗಳಿಗೆ ಅಡಚಣೆ ತರುವಷ್ಟು ಜಾಡ್ಯದ ಅಪ್ಯವನ್ನಿಗಳಿಗೆ ಅವಕಾಶವಿರುವುದಿಲ್ಲ. ತಲೆನೋವು, ಪೈತ್ಯ, ಅಜೀರ್ಣ, ಹೃದಯಶಾಪ, ಮಲಬದ್ಧತೆ ಮುಂತಾದ ಆಹಾರ ನೃತ್ಯಗಳ ಆಜಾಗರೂಕತೆಯಿಂದ ಉಂಟಾಗುವ ವ್ಯಾಧಿಗಳೆಲ್ಲಾ ನಿರ್ಮೂಲವಾಗುವುವು. ನಿಮ್ಮ ಶರೀರವು ಆರೋಗ್ಯವಾಗಿರುವುದರಿಂದ ಬುದ್ಧಿಯೂ ಸ್ವಚ್ಛವಾಗಿ ಚುರುಕಾಗಿರುವುದು

ಈನೊಸಿನ ಉಲ್ಲಾಸವನ್ನು ಸೀಸೆ ತೆರೆದ ತೋಟೂ ಶ್ವಾಸಾವಲು ವಾಯು ಸಂಚಾರಕ್ಕೆ ಅವಕಾಶವಿಲ್ಲದಂತಿರುವ ಬರಟೆಯುಳ್ಳ ಸೀಸೆಗಳಲ್ಲಿಯೇ ಮಾರಲ್ಪಡುವುದು. ಡಬ್ಬಿಗಳಲ್ಲಲ್ಲ. ಈನೊಸಿಗೆ ಬೆರೆ ಕಟಿಪೆ-ಸನ್ನ ಆಕಾರ ದೃಷ್ಟಿ ಆರು ಆಣೆ ಮಾತ್ರ

HIDDEN SECRETS

"STANDARD HEALTH" (58 pages) discusses in most clear cut terms your personal delicate problems on Health, Body-building, Birth-control, Rejuvenation, Potency, Pyorrhoea and so many other essential and frank talks of vital interest to one and all. Happy solutions by way of **HIMALAYAN HERBAL FOODS** have been duly suggested.

GREENFIELDS LTD. (KV), SRINAGAR, KASHMIR

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೊಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯೆಯರ ಕನ್ನೆಗಳು ಮೋಹಿಸುವ ರಹಸ್ಯಗಳು ಹಾಸಿಗೆಯ ಸುಖವಿಲಾಸಗಳು ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ನೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೊಟೋಗಳು ಆಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1–4–0.

T. R. ರಾಯಲ್ ಕಂಪೆನಿ,

ನಂ. 3, ಕೃಷ್ಣಪ್ಪ ನಾಯ್ಕನ್ ಟ್ಯಾಂಕ್ ಬೀದಿ, ಸಾಹುಕಾರ್‌ಪೇಟೆ, ಜಿ. ಟಿ., ಮದರಾಸು.

ಬಾರದೆಂಬ ಕಾನೂನಿದೆ. ಹೋಟೇಲು, ಸಿನೆಮಾ ಮುಂತಾದ ಸಾರ್ವಜನಿಕ ಪ್ರದೇಶಗಳಿಗೆ ಹೋಗುವ ಅಧಿಕಾರ ಅವರಿಗಿಲ್ಲ. ಮಾತ್ರವಲ್ಲ; ಅವರ ಕೋಟುಗಳಿಗೆ ಹಳದಿ ಬಣ್ಣದ ಒಂದು "ಬೇಜ್" ಹೊಲಿಯಲಾಗಿದೆ. ಇದನ್ನು ಧರಿಸಿ, ತಾವು ಯೆಹೂದಿಗಳೆಂದು ತೋರಿಸುತ್ತಾ ಅವರು ನಡೆಯಬೇಕಾಗಿದೆ. ಪರಿಣಾಮವಾಗಿ ಇದುವರೆಗೆ ಎಂದೂ ಕಾಣದ ಸಂಘಟನೆ ಬಾಂಧವ್ಯಗಳು— ಪೋಲ–ಯೆಹೂದಿಯರಲ್ಲಿ ಉಂಟಾಗಿದೆ.

ಪ್ರೊಫೆಸರರ ಗತಿ

ಪೋಲರ ಸಂಸ್ಕೃತಿ, ಸ್ವಾಭಿಮಾನ ಇವುಗಳ ನಾಶಕ್ಕಾಗಿ, ಗೆಸ್ಟಾಪೊ ಅದೆಷ್ಟು ಯತ್ನಿಸುತ್ತಿರುವುದೆಂದರೆ, ಕೆಲ ವರ್ಷಗಳಲ್ಲೇ ಪೋಲರು, ದಾಸ್ಯ ಮನೋವೃತ್ತಿಯವರಾಗಿ ಮಾರ್ಪಡಬಹುದೆಂದು ತೋರುತ್ತದೆ. ಇದಕ್ಕಾಗಿ ಕ್ರಾಕೋ, ವಾರ್ಸೋ, ಪೊಜನ್, ಮತ್ತು ಲಬ್ಲಿನ್ ವಿಶ್ವವಿದ್ಯಾನಿಲಯಗಳು ನಾಶಪಡಿಸಲ್ಪಟ್ಟವೆ. ಕ್ರಾಕೊ ವಿಶ್ವವಿದ್ಯಾನಿಲಯವು, ಬಹು ಪುರಾತನದ್ದು. ಇದರ ಸ್ಥಾಪನೆ ೧೩೬೪ರಲ್ಲಿ ನಡೆದು, ಇದುವರೆಗೂ ಇದು ನಡೆಯುತ್ತಲೇ ಇದ್ದಿತು. ಇಂದು ಅದರಿ ಹೆಸರಡಗಿದೆ!

ಪೋಲೇಂಡು ವಿವಿಧ ದಾಳಿಗಳಿಗೆ ಈ ದೀರ್ಘಕಾಲದಲ್ಲಿ ಒಳಗಾಗಿದ್ದರೂ, ಕ್ರಾಕೋವಿನ ಈ ವಿಶ್ವವಿದ್ಯಾನಿಲಯವು ಮಾತ್ರ, ಯಾರಿಂದಲೂ ನಾಶಪಡಿಸಲ್ಪಟ್ಟಿರಲಿಲ್ಲ. ಇಂದು ಇಲ್ಲಿನ ಎಲ್ಲಾ ಪ್ರೊಫೆಸರರುಗಳೂ, ನಾಜಿ "ಕನ್ಸೆಂಟ್ರೇಶನ್" ಕ್ಯಾಂಪಿಗೆ ಕಳುಹಿಸಲ್ಪಟ್ಟಿದ್ದಾರೆ. ಒಂದು ಪರಿಷತ್ತಿಗಾಗಿ ಇವರ ಸಹಾಯ ಬೇಕೆಂದು ತಿಳಿಸಿ, ನಾಜಿ ಅಧಿಕಾರಿಗಳು, ಈ ಪ್ರೊಫೆಸರರುಗಳನ್ನು ವಿಶ್ವವಿದ್ಯಾನಿಲಯಕ್ಕೆ ಕರೆದರು; ಹಾಗೆ ೧೬೦ ಮಂದಿ ಒಂದು ಮಂದಿರದಲ್ಲಿ ಕೂಡಿದ್ದಾಗ, ಇವರ ಸೆರೆ ಸುಲಭವಾಗಿ ಸಾಗಿತು ಎಂದು ಸುದ್ದಿ. ಇದು ನಾಜಿ ಧರ್ಮದ ಪರಮಾವಧಿಯೇನೋ!

ಇವರಲ್ಲಿ ಪ್ರಮುಖರಾದವರು ಸತ್ತುಹೋದರು. ಉಳಿದವರು ಸೆರೆಯಲ್ಲಿ ಕೊಳೆಯುತ್ತಿದ್ದಾರೆ.

ಮೈಸೂರು

ಸಾಬೂನು

ಇಪ್ಪತ್ತು ವರ್ಷದ ತಯಾರಿಕೆ ಅನುಭವ

ನೈಮರ್ಲ್ಯವು

ಒಳ್ಳೆ

ಅಭ್ಯಾಸದ ಪರಿಣಾಮ

ನಿಮ್ಮ ಮೈ ಮತ್ತು ಬಟ್ಟೆಗಳನ್ನು ಶುಚಿ ಮಾಡಲು

ಮೈಸೂರು

ಸಾಬೂನುಗಳು ಕಾದಿವೆ.

ಮೈಸೂರು ಸಾಬೂನುಗಳು ಸರಕಾರದ ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ ಬೆಂಗಳೂರಿನಲ್ಲೇ ತಯಾರಾಗುತ್ತಿವೆ.

ಮೈಸೂರು

ಸ್ಯಾಂಡಲ್ ಸೋಪ್

ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಮುದ್ದಾದ ಮುದ್ರಣ.

ಬೆಲೆ ರೂಪಾಯಿ ೧—೮—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯದ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಆಫ್ಸ್ಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1-8-0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಸಾವಕಾರ

ಶ್ರೀನಿವಾಸ ರಂಗ ಪೈ

ವಜ್ರಗಳು

ಸಾವಕಾರ ಮಹಾಲ್,

ಮಂಗಳೂರು.

ಏನು ನ... ಈ ಸರ್ವಾಧಿಕಾರಿಗಳದು!

ಜಗತ್... ಕಿಗಳು

ಮಾಂ... ೋಷಗಳು

ಸುಪ್ರಖ್ಯಾತ ಲ... ಟರ್ಕ್ ಕೆಮಾಲ್ ಪಾಷಾ ಶಾರವರು, ಶಾಖಾಹಾ... ತಾ ಸೇವೆಗೆ ಇಳಿದಂದೇ ಮಾಂಸಾ ಸಾಹಸಿಗಳೂ ಬೇರೆ ಇಲ್ಲವೆಂದು ಹೆಂ... ಾರಕ್ಕೆ ತಿಲಾಂಜಲಿಯಿತ್ತಿದ್ದಾನೆ. ಹಸಿ ಹಸುರು ಗಳ ಹಿಂದೊಮ್ಮೆ ಸಾರಿದ್ದರು. ಆವರ ಆ ನುಡಿ ವಾಣಿಗಳನ್ನೂ, ಹಣ್ಣುಗಳನ್ನೂ ತಿಂದು ಆಗಾಗ ಅಂದು ಪರಿಹಾಸವಾಗಿ ಕಂಡರೂ ಇಂದು ಸತ್ಯ ವಿಮಿನ ರುಚಿ ನೋಡಿ ಈತ ಊಟ ಮುಗಿಸು ವಾಗಿದೆ. ತ್ತಿದ್ದ.

ವಿರಾಮವಿಲ್ಲದ, ಕರುಣೆಯಿಲ್ಲದ ಸರ್ವಾಧಿ ಕಾರಿಗಳು, ಕಳೆದ ಮಹಾ ಯುದ್ಧದ ದೆಸೆ ಯಿಂದ ನೆಲಸಮವಾದ ಯುರೋಪಿನಲ್ಲಿ ತಲೆ ಎತ್ತಿದ್ದಾರೆ. ಇವರಲ್ಲಿ ಕೆಲವರು ಸಂಪೂರ್ಣ ವಾಗಿ, ಇನ್ನು ಕೆಲವರು ಹೆಚ್ಚಿನ ಅಂಶ ಶಾಖಾ ಹಾರಿಗಳು.

ಹಿಟ್ಲರ್ ಮಾಂಸವನ್ನೇ ಮುಟ್ಟುವುದಿಲ್ಲ. ಅಲ್ಲದೆ ಮೀನನ್ನು ತಿನ್ನುವುದೂ ಬಹಳ ಅಪ ರೂಪ. ದಿನಕ್ಕೊಂದು ಬಾರಿಯ ಈತನ ಊಟ ಹಣ್ಣು ಹಂಪಲುಗಳದು. ಇನ್ನು ಮೊಟ್ಟೆ, ಧಾನ್ಯಗಳು, ಬಸಳೆ, ಬಟಾಟೆ ಇವುಗಳಲ್ಲೇ ಈತನ ನಿತ್ಯದ ಉಣಿಸು. ಚಾ ಕುಡಿಯುವ ಅಭ್ಯಾಸವೂ ಜಗತ್ತನ್ನೇ ನಡುಗಿಸುವ ಈ ಸರ್ವಾ ಧಿಕಾರಿಗೆ ಇಲ್ಲ. ಮಾದಕ ಪದಾರ್ಥವನ್ನೇ ಅಲ್ಲದೆ ಅದರ ಅಲ್ಪಾಂಶವಿರುವ ಅದಾವ ಪಾನ ವನ್ನೂ ಈತ ಉಪಯೋಗಿಸುತ್ತಿಲ್ಲ. ಹೊಗೆ ಬತ್ತಿ ಸೇದುವ ಅಭ್ಯಾಸ ಮೊದಲೇ ಇಲ್ಲ. ಅಂತೂ ಸಂಪೂರ್ಣ ಶಾಖಾಹಾರಿಯಾಗಿ, ಆ ದರ್ಶ ಆರ್ಯನ ಜೀವನ ಸಾಗಿಸುತ್ತಿದ್ದಾನೆ.

ಟರ್ಕಿಯ ಭಾಗ್ಯವಿಧಾತ, ಮುಸಲರ

ಮುಸಲಿನಿಯೂ, ತಾನು ಮಾಂಸ ಭಕ್ಷಣೆ ಯನ್ನು ಸಂಪೂರ್ಣವಾಗಿ ಬಿಟ್ಟಿರುವೆನೆಂದು ಕೆಲ ವರ್ಷಗಳ ಹಿಂದೆಯೇ ತಿಳಿಸಿದ್ದ. ಹಿಟ್ಲರನಂತೆ ಈತನೂ ದಿನಕ್ಕೊಂದು ಹಣ್ಣುಗಳ ಊಟ ಕೊಳ್ಳುವನು. ಅಪರೂಪಕ್ಕೊಮ್ಮೆ ಮುಸಲಿನಿ ದ್ರಾಕ್ಷಾರಸ ಪಾನಮಾಡುವ. ಅದೂ ಅತ್ಯಲ್ಪ.

ಈ ಸರ್ವಾಧಿಕಾರಿಗಳ ಆಹಾರದಲ್ಲಿ ಈ ರೀತಿಯ ಸಾಮ್ಯವಿರುವುದನ್ನು ಕಂಡು ಹೆಚ್ಚಿ ನವರು ಆಚ್ಚರಿಗೊಳ್ಳಬಹುದು. ಆದರೆ, ಇವರ ಕರ್ತವ್ಯವನ್ನು ಕಂಡವರಿಗೆ ಆಹಾರದ ಕುರಿ ತಾಗಿ ತನ್ನಂತೆಯೇ ಊಹಿಸಲು ಸಾಧ್ಯವಿದೆ.

ಭಾರತದಲ್ಲಿ ನೋಡಿ. ಇದು ಪರಾಶ್ರಯದ ಒಂದು ದೇಶವಾದರೂ ಇಲ್ಲಿ ಮಹಾ ಮೇಧಾವಿ ಗಳು ಜನಿಸಲು ಕಾರಣವೇನು? ಹತ್ತು ಸರ್ವಾ ಧಿಕಾರಿಗಳ ಜಾಣ್ಮೆಯ ಕಾಂಗ್ರೆಸ್ ನಾಯಕರು ನಮಗೆ ಹೇಗೆ ದೊರೆತರು? ಸರ್. ರಾಧಾ ಕೃಷ್ಣನ್, ಸರ್. ಸಿ. ವಿ. ರಾಮನ್, ಸರ್. ವಿಶ್ವೇಶ್ವರಯ್ಯ, ಸರ್. ಪಿ. ಸಿ. ರೇ ಮುಂತಾದ ನೂರಾರು ಮಂದಿ ವಿಜ್ಞಾನಿಗಳು ತಲೆದೋರಲು ಕಾರಣವೇನು? ಶಾಖಾಹಾರ!

ಜ್ಞಾನದ ಉದ್ದೀಪನಕ್ಕೆ, ಹುರುಪಿನ ಹುಟ್ಟಿಗೆ ಅಗತ್ಯವಿರುವ ಕೋಶಗಳ ಬೆಳವಣಿಗೆಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಒದಗಿಸುವ ಶಕ್ತಿ ಶಾಖಾಹಾರಗಳಿಗಿದೆ. ಅದೇ ಇವುಗಳ ಪರಿಣಾಮವಾಗಿ, ಕೋಶಗಳ ಶಕ್ತಿ ಹೆಚ್ಚಿದಂತೆ, ವ್ಯಕ್ತಿಯಲ್ಲಿ ಉತ್ಸಾಹ, ಹುರುಪು, ಜ್ಞಾನ ಇವೆಲ್ಲ ಗುಣಗಳೂ ಅಧಿಕವಾಗುತ್ತದೆ. ಹಣ್ಣು ಗಳಲ್ಲಿ ಹಾಗೂ ಸಸ್ಯಾಹಾರಗಳಲ್ಲಿ ಈ ಲಕ್ಷಣ ಗಳಿಗೆ ಅಗತ್ಯವಿರುವ ಭೂ ಲವಣಗಳು ದೊರೆ ಯುತ್ತವೆ. ಉಪ್ಪಿನಿಂದಲೂ ಈ ಲವಣ ದೊರೆ ಯುತ್ತದೆ.

ಮಾಂಸವು ಮನುಷ್ಯರನ್ನು "ಸ್ಥಿರ" ಸೊತ್ತು ಗಳಾಗಿ ಮಾರ್ಪಡಿಸುವುದು. ಇವರ ಯೋಜನೆ ಹೆಚ್ಚಾದರೂ, ಕಾರ್ಯ ಬಲು ನಿಧಾನ. ವಿಚಾರ ಮಿದುಳನ್ನು ಸೇರಿ, ಯೋಗ್ಯ ರೀತಿಯ ಮಾ ರ್ಪಾಟ ಹೊಂದಲು ಬೇಕಾಗುವ ವೇಳೆ ಅಧಿಕ. ಅತ್ಯಧಿಕ ಮಾಂಸಾಹಾರದ ಜನರನ್ನು "ಜಡ ಭರಿತ" ರಾಯರ ವರ್ಗಕ್ಕೆ ತಿರುಗಿಸುವುದು.

ಸ್ಕೇಂಡಿನೇವಿಯನ್ ರಾಷ್ಟ್ರಗಳು ಅದೇಕೆ ಅಷ್ಟು ಬೇಗನೇ ಹಿಟ್ಲರನಿಗೆ ಶರಣುಹೋದುವು? ಅವರು ಮಾಂಸ ತಿನ್ನುವುದು ಅಧಿಕ! ಜಗತ್ತಿ ನಲ್ಲಿ ಯುದ್ಧಾಸಕ್ತಿ ಕಡಿಮೆಯಾದ ಜನಾಂಗ ವಿರುವದಿದ್ದರೆ, ಅದು ಅತ್ಯಧಿಕ ಮಾಂಸಾಹಾರಿ ಗಳು. ಉದಾಹರಣೆಗೆ ಸದಾ ಮಾಂಸವನ್ನೇ ತಿಂದು ಜೀವಿಸುವ 'ಎಸ್ಕಿಮೋ' ಜನರನ್ನು ತೆಗೆದು ಕೊಳ್ಳಬಹುದು. ಅವರು ಯುದ್ಧವನ್ನು ಮಾಡಿದು ದಾದರೂ ಎಂದು?

ಜಗತ್ತಿನ ಅದೃಷ್ಟವಾದ ರಷ್ಯದ ಸರ್ವಾಧಿ ಕಾರಿ ಸ್ಟೆಲಿನ್ ಕೂಡಾ ಶಾಖಾಹಾರಿ. ಈತ ಅಲ್ಪಸ್ವಲ್ಪ ಮಾಂಸವನ್ನು ತಿನ್ನುತ್ತಿದ್ದಾನೆ ಆದರೆ ಈ ಮಾಂಸವು ಅವನು ತಿನ್ನುವ ಉಪ್ಪಿನ ದೆಸೆ ಯಿಂದ ಅದಾವ ಪರಿಣಾಮವನ್ನೂ ಉಂಟುಮಾಡ ಲಾರದಾಗಿದೆ ಧಾನ್ಯ, ಹಣ್ಣುಹಂಪಲುಗಳು ಮುಂತಾದ ಸಸ್ಯಾಹಾರವೆಂದರೆ ಇವನಿಗೆ ತುಂಬಾ ಇಷ್ಟ. ಈತನು ತಿನ್ನುವ ಉಪ್ಪಿನ ವಿಚಾರವನ್ನು ತಿಳಿದೇ ಹೆಚ್ಚಿನವರು ಹೆದರಿಹೋಗಬಹುದು. ಬ್ರೆಡ್ ತಿನ್ನಬೇಕಾದರೂ, ಈತನಿಗೆ ಉಪ್ಪು ಬೇಕು. ತಿನ್ನುವ ಆಹಾರಗಳಿಗೆಲ್ಲ ಉಪ್ಪು ಸೇರಿಸಿ, ಯಾರಿಂದಲೂ ಅದನ್ನು ತಿನ್ನಲು ಸಾಧ್ಯವಾಗದ ರೀತಿಗೆ ಮಾರ್ಪಡಿಸಿ, ಆ ಬಳಿಕ ಭುಂಜಿಸುವ. ಉಪ್ಪಿನಲ್ಲಿ ಭೂಲವಣ ಇದೆ. ಇದರಿಂದ ಸ್ಟೆಲಿನ್ ನಿಗೆ ಬೇಕಾದ ಜಾಣ್ಮೆ, ಉತ್ಸಾಹ, ಹುರುಪು ಗಳು ದೊರೆಯುತ್ತಿವೆ. ಈತನು ಉಪ್ಪು ತಿನ್ನು ವದನ್ನು ನಿಲ್ಲಿಸಿದಂದು ಸರ್ವಾಧಿಕಾರಿ ಸ್ಥಾನ ವನ್ನು ಕಳೆದುಕೊಳ್ಳಬಹುದೋ ಏನೋ?

ಹಲವು ವರ್ಷಗಳಿಂದ ವೈದ್ಯರು ಈ ವಿಚಾರ ವಾಗಿ ಶೋಧ ನಡೆಸಿದ್ದಾರೆ. ಈ ರೀತಿಯ ಆಹಾರ ಕ್ರಮದಿಂದ ಎಂತಹನ ಜ್ಞಾನದಲ್ಲೂ ಮಾರ್ಪಾಟ ತರಬಹುದೆಂದೂ ಕಂಡುಕೊಂಡಿದ್ದಾರೆ. ಆದರೆ, ಎಲ್ಲರಿಗೂ ಈ ಆಹಾರ ಜ್ಞಾನ ಇತ್ಯಾದಿಗಳನ್ನೊದ ಗಿಸುವದೆಂದಲ್ಲ. ಹಲವರಲ್ಲಿ ಇದರ ಪರಿಣಾಮ ಸೊನ್ನೆ; ಉಪಯೋಗವು ವಿರೋಧ ಪರಿಣಾಮ ವನ್ನೇ ತರುವುದು. ಹೇಗಿದ್ದರೂ ಶಾಖಾಹಾರಿಗೆ ನಿಮ್ಮ ವಂದನೆ ಸಲಲೇಬೇಕು. ಆತನೊಂದು ದಿನಕ್ಕಾದರೂ ಸರ್ವಾಧಿಕಾರಿಯಾಗಬಹುದು.

ಹಾರಾಡುವ ರೈಲು?

ನ್ಯೂಯಾರ್ಕಿನ ಜೋನ್ ಮೊಲಿನೆಟ್ ಎಂಬಾತ, ಸುಮಾರು ೫೦೦ ಮಂದಿ ಪ್ರಯಾ ಣಿಕರನ್ನು ಹೊತ್ತುಕೊಂಡು, ತಾಸಿಗೆ ೨೦೦ ಮೈಲಿಗಳ ವೇಗದಲ್ಲಿ ಹಾರಾಡಬಲ್ಲ ವಿಮಾನ ವೊಂದನ್ನು ತಯಾರಿಸಲು ಮುಂದಾಗಿದ್ದಾನೆ. ಅಲ್ಲದೆ ಈ ವಿಮಾನಕ್ಕೆ ಹೊಂದಿಸಲ್ಪಟ್ಟ ಪ್ರೊಪೆಲ್ಲ ರಿನ ಸಹಾಯದಿಂದ, ಇದನ್ನು ನೀರ ಮೇಲೆ, ಹಡಗದಂತೆಯೂ ನಡೆಯಿಸಬಹುದಂತೆ. ಈ ಮಹಾ ವಿಮಾನವು ಒಂದು ದೊಡ್ಡ ರೈಲು ಬಂಡಿಯು ಹೊರಬಹುದಾದಷ್ಟು ಹುಂದಿಯನ್ನು ಹೊತ್ತು ಆಕಾಶ ಹಾಗೂ ನೀರಿನಲ್ಲಿ ಸಂಚರಿಸು ವುದು. ಸಬ್‌ಮೆರಿನ್‌ಗಳ ಹಾವಳಿಯಿಂದ ಪಾರಾಗಲು ಇದೇ ಉಪಾಯ!

Please write to us for your needs in

RUBBER STAMPS

Monogram Seals, Peon Badges, Sign Boards, Marble Boards, Fac-simile Stamps, Embossing, Etc.

CROWN RUBBER STAMP CO.,

A17, BALMATTA ROAD, (Estd. 1926) MANGALORE.

(Among the list of Mysore Govt.'s approved Firms.)

Certified by the Agent of India, Ceylon.

Embossing Machines A Speciality.

ಜೀವ ವಿಮೆಯು ಒಬ್ಬನು ತನ್ನ ಮುಪ್ಪಿನ ಕಾಲದಲ್ಲಿ ತನಗೋಸುಗ ಮತ್ತು / ಯಾ ತನ್ನನ್ನೆ ಹೊಂದಿಕೊಂಡಿರುವವರಿಗೋಸುಗ **ಸಾಂಪತ್ತಿಕ ಸ್ವಾತಂತ್ರ್ಯ**ವನ್ನು ಭದ್ರಮಾಡಲು ಸಾಕೆಂದೆಣಿಸುವಷ್ಟು ಮೊತ್ತವನ್ನು ಕಂತು ಪ್ರಮಾಣ ಪಾವತಿ ಮಾಡುತ್ತಾ, ನಿಶ್ಚಿತವಾಗಿ ಒದಗಿಸಿಡುವ ಅದೊಂದೇ ವಿಧಾನವಾಗಿರುತ್ತದೆ.

ಪ್ರತಿ ವರ್ಷ ಸಾವಿರಾರು ವಿವೇಕಿ ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮ ಗಾಗಿ ಮತ್ತು / ಯಾ ತಮ್ಮ ಅನಂತರ ತಮ್ಮನ್ನು ಹೊಂದಿಕೊಂಡಿರುವವರಿಗಾಗಿ **ಆರ್ಥಿಕ ಸ್ವಾತಂತ್ರ್ಯ**ದ ತಳಹದಿಯನ್ನು, ಬಹಳ ಬಲಿಷ್ಠವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾ ಕಂಪೆನಿ

"ಓರಿಯಂಟಲ್"

ನಲ್ಲಿ ಜೀವವಿಮೆಯನ್ನು ಮಾಡಿ, ಹಾಕಿಡುತ್ತಾರೆ.

ವಿಳಂಬವನ್ನು ಮಾಡದಿರಿ

ಇಂದೇ "ಓರಿಯಂಟಲ್" ಪಾಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1874. — ಹೆಡ್ ಆಫೀಸ್: ಮುಂಬಾಯಿ.

ವಿವರಗಳಿಗಾಗಿ ಇವರಿಗೆ ಬರೆಯಿರಿ: —

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸ್,
ಮೈನ್ ರೋಡ್,
ಮಡಿಕೇರಿ.

ಅಥವಾ

ದಿ ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್,
ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

ಲಾಭ—ನಷ್ಟ

[೨ನೇ ಪುಟದಿಂದ]

ಬೂಟ್ಸ್ ಮೇರಿಯದಲ್ಲ; ಅವಳೆಲ್ಲಿಯೋ ಇಲ್ಲೇ ಅಡಗಿರುವಳೆಂದೂ ಹೇಳುತ್ತಿರುವೆ. ಆ ಗೊಂಬೆ ಗೇನು ಬೆಲೆ ಕೊಟ್ಟಿದ್ದಿರಿ?'

ರಾಯರು:—'ನಾಲ್ಕು ರೂಪಾಯಿ ಹದಿ ಮೂರು ಆಣೆ!'

ಕಮಲ:—'ಅಷ್ಟು ಬೆಲೆಯ ಗೊಂಬೆಯನ್ನು ತೆಗೆಸಿಕೊಟ್ಟರಾ? ನಿಮಗೇನು ದುಡ್ಡು ಹೆಚ್ಚಾ ಗಿತ್ತೇ? ೪ ರೂಪಾಯಿ ೧೩ ಆಣೆ! ನಿಮಗೆ ಗಂಡಸರಿಗೆ ದುಡ್ಡಿನ ಬೆಲೆಯೇ ತಿಳಿಯದು.'

ರಾಯರು:—'ಬೇರೆ ಗೊಂಬೆಯೇ ಬೇಡ ವೆಂದು ಪ್ರೇಮ ಹಟಹಿಡಿದಳು, ಏನು ಮಾಡಲಿ!'

ಕಮಲ:—'ಆಯ್ಯೋ! ದಂದ್ರ ಹೆಣ್ಣೆ! ಉಣ್ಣಲಿಲ್ಲ; ತಿನ್ನಲಿಲ್ಲ ೪ ರೂಪಾಯಿ ೧೩ ಆಣೆ ಯನ್ನು ಕ್ಷಣದಲ್ಲಿ ವ್ಯರ್ಥಮಾಡಿದೆ. ನಿಮ್ಮಪ್ಪನ ಮುದ್ದು ಹೆಚ್ಚಾಯಿತು ನಿನಗೆ. ಎರಡು ಏಟು ಬಿಡಬೇಕು!'

ರಾಯರು:—'ಏನೋ ಹೋದರೆ ಹೋ ಯಿತು; ಸುಮ್ಮನಿರು. ಇನ್ನೂ ಗೊಂಬೆಯನ್ನು ಇವಳಿಗೆ ತೆಗೆಸಿಕೊಡದಿದ್ದರಾಯಿತು.'

ಕಮಲ:—'ನೀವೇನೋ ಸುಲಭದಲ್ಲಿ ಹೇಳುತ್ತೀರಿ; ಆದರೆ ಸಂಸಾರದ ಖರ್ಚು ವೆಚ್ಚ ನೋಡಿಕೊಳ್ಳುವವಳು ನಾನು ತಾನೇ? ಇನ್ಶೂ ರೆನ್ಸಿಗೆ, ಕುರಿಗೆ, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕಿಗೆ ಹಣವನ್ನು ಕೊಟ್ಟ ಮೇಲೆ, ಈ ತಿಂಗ ಳಲ್ಲಿ ಎಷ್ಟು ಉಳಿದಿದೆ ನಿಮಗೆ ಗೊತ್ತೇ? ನನ್ನನ್ನು ಒಂದು ಮಾತೂ ಕೇಳದೆ ಮಾಡದೆ, ರೂ. ೪—೧೩—೦ನ್ನು ಕೇವಲ ಮಗುವಿನ ಮಾತಿ ಗಾಗಿ ದಂಡಮಾಡಿದಿರಲ್ಲ! ಈ ತಿಂಗಳಲ್ಲಿ ನೀವು ಸರ್ಕಿಟಗೂ ಹೆಚ್ಚಾಗಿ ಹೋಗಿಲ್ಲ. ಒಟ್ಟನಲ್ಲಿ, ನಿಮ್ಮ ಕೈಗೆ ಹಣ ಕೊಟ್ಟಿನೆಂದರೆ, ನಿಮ್ಮದು 'ಅಂದಾ ದರ್ಬಾರು.' ಹಣ ಕೊಡದಿದ್ದರೆ ರಂಪ ಮಾಡುತ್ತೀರಿ; ಕೊಟ್ಟರೆ ಹೀಗೆ ಮಾಡುತ್ತೀರಿ. ನಿಮಗೊಂದು 'ಸೂಟ್ ಕೇಸೂ' ಇದೇ ದುರ್ಭಿ ಕ್ಷದ ತಿಂಗಳಲ್ಲಿಯೇ ಬೇಕಾಗಿತ್ತೇ? ಅದಕ್ಕಿನ್ನೆಷ್ಟು ದುಡ್ಡು ಸುರಿದಿರೋ?'

ರಾಯರು:—'ಹೆಚ್ಚಿಲ್ಲ, ಕಣೆ! ಬರೇ ೧೮ ರೂಪಾಯಿ!'

ಕಮಲಮ್ಮ:—೧೮ ರೂಪಾಯಿ! ಅಡಿಗೆ ಯವನನ್ನು ಇಟ್ಟುಕೊಂಡರೆ ತಿಂಗಳೊಂದಕ್ಕೆ ೨೫ ರೂಪಾಯಿಗಳ ಹೆಚ್ಚಿನ ವೆಚ್ಚವಾಗುವುದೆಂದು, ನಾನು ತವರು ಮನೆಯಿಂದ ಬಂದ ಕೂಡಲೇ ಅವನನ್ನು ಕಳುಹಿಸಿ, ನಾನೇ ಅಡಿಗೆಯ ಕೆಲಸ ವನ್ನೂ ನೋಡಿಕೊಳ್ಳುತ್ತಿರುವಾಗಲೂ ನಿಮಗೆ ೧೮ ರೂಪಾಯಿಗಳ ಒಂದು ಹೊಸ 'ಸೂಟ್ ಕೇಸೇ' ಬೇಕಾಯಿತೇ?

ರಾಯರು:—'ಇಲ್ಲ, ಕಣೆ! ಅದು ಬಹಳ ಚೆನ್ನಾಗಿದೆ. 'ಇಂಗ್ಲಿಷ್ ಮೇಕ್'. ಬೆಲೆಯೂ ಬಹಳ ಅಗ್ಗ. ನೋಡಿದರೆ, ನೀನೇ ಹೇಳುವೆ.'

ರಾಯರು ಕಾರಿನ ಹಿಂದುಗಡೆ ಹೋಗಿ 'ಸೂಟ್ ಕೇಸ್' ನೋಡಿದರು! ಆಶ್ಚರ್ಯದಿಂದ 'ಇಲ್ಲಿಟ್ಟದ್ದು ಏನಾಯಿತು?' ಎಂದು ಕೂಗಿದರು. ಕಮಲಮ್ಮ ಕಾರಿನಿಂದ ಇಳಿದು 'ಏನಾಯಿತು?' ಎಂದರು. 'ಸೂಟ್ ಕೇಸ್' ಇಲ್ಲ. ಅದರ ಕಟ್ಟು ಸಡಲಿ, ದಾರಿಯಲ್ಲಿ ಎಲ್ಲಿಯೋ ಬಿದ್ದಿರಬೇಕು. ಅಥವಾ ಗೇಟಿನ ಬಳಿ ಕಾರು ನಿಲ್ಲಿಸಿದಾಗ ಯಾರೋ, ಹಿಂದಿನಿಂದ ಬಂದು, ನಮಗೆ ತಿಳಿ ಯದ ಹಾಗೆ, ಅದನ್ನು ಹಾರಿಸಿಕೊಂಡು ಹೋಗಿರ ಬೇಕು.' ಎಂದರು ರಾಯರು

'ಇನ್ನು ಹಣೆ ಮುಟ್ಟಿಕೊಂಡರೆ ಸರಿ. ಮೂರ್ ಮಾರ್ಕೆಟಿನಿಂದ ನೆಟ್ಟಗೆ ಮನೆ ಸೇರದೆ, ಅನಾವಶ್ಯಕವಾಗಿ ಸಮುದ್ರ ತೀರದ ವರೆಗೂ ಪೆಟ್ರೋಲ್ ಖರ್ಚು ಮಾಡಿದುದಕ್ಕೆ ಇದು ಪ್ರಾಯಶ್ಚಿತ್ತ! ೪—೧೩—೦, ಮತ್ತೊಂದು ೧೮; ಒಟ್ಟಗೆ ೨೨—೧೩—೦. ಒಂದೇ ಕ್ಷಣ ದಲ್ಲಿ ಕೃಷ್ಣಾರ್ಪಣ!

'ಡ್ರೈವರ್ ಬೇಡವೆಂದು ಕಳೆದ ತಿಂಗಳಲ್ಲಿ ನೀನು ಅವನನ್ನು, ಸಂಬಳ ಕೊಡದೆ ಜಗಳ ಮಾಡಿ ಓಡಿಸಿದೆ ಆ ಸಂಬಳದ ಹಣವನ್ನು ಇಲ್ಲಿ ನಾವು ಈ ರೂಪದಲ್ಲಿ ಸಲ್ಲಿಸಿದ ಹಾಗಾ
ಆ ಲಾಭಕ್ಕೆ ಈ ನಷ್ಟ ಸರಿ ಹೋ
ಕಮಲಮ್ಮ ನಿರಾ
'ಮೇರಿ ಇಲ್ಲೆಲ್
ಹೇಳುತ್ತಾಳೆ.
'ಸೂಟ್ ಕೇಸ'ನ
ಹೋದಳೆಂದೂ ಭಾವಿ
ಆದ ಹಾಗಾಯಿತು' ಎಂ
ಪ್ರೇಮ:—'ಹೌ ಔ ವ
ಆದನ್ನು ತೆಗೆದುಕೊಂಡು
ಇಲ್ಲೆಲ್ಲೋ ಅವಿತಿರಬೇಕು.
ಮನೆಗೆ ಇನ್ನು ಬಂದಾಳೆ? ಬರುವುದಕ್ಕೆವ
ನಮ್ಮ ಮನೆಯ ಮಾರ್ಗವು ಗೊತ್ತಿದೆಯೇ?'

ರಾಯರು,—ಅಷ್ಟು ಹೊತ್ತೂ ನಿಲ್ಲಿಸಿದ್ದ ಕಾರನ್ನು ಮನೆಯ ಕಡೆಗೆ ಬಿಟ್ಟರು!

ಜರ್ಮನಿಗಾದ ನಷ್ಟ!

ತಮ್ಮ ದೇಶಕ್ಕೆ ಬಾಂಬುಗಳಿಂದಾಗಿ ಉಂ ಟಾದ ಹಾಗೂ ತಮ್ಮ ಸೇನೆಗಾದ ನಷ್ಟವನ್ನು ಜರ್ಮನ್ ಅಧಿಕಾರಿಗಳು ಅತ್ಯಂತ ಗುಪ್ತವಾಗಿ ಇರಿಸುತ್ತಿದ್ದಾರೆ. ಬಾಂಬುಗಳು ಬಿದ್ದು, ಒಂದು ಪಟ್ಟಣವೇ ಅರ್ಧಾಂಶ ನಾಶವಾದರೂ ಈ ಸುದ್ದಿ ಇತರ ನಗರಗಳಿಗೆ ಸಿಗದಂತೆ ಎಚ್ಚರಿಕೆ ವಹಿಸ ಲಾಗುತ್ತಿದೆ. ಇದೀಗ ಕೆಲ ಸಮಯದ ಹಿಂದೆ, ಅಧಿಕಾರಿಗಳು ದೇಶದಲ್ಲಿನ ಪರರಾಷ್ಟ್ರ ಪತ್ರಿಕಾ ಪ್ರತಿನಿಧಿಗಳನ್ನು ರೈನ್‌ಲ್ಯಾಂಡಿಗೆ ಕರೆದೊಯ್ದು, ಬ್ರಿಟಿಷ್ ಬಾಂಬುಗಳ ಹಾವಳಿ ಅದೆಷ್ಟು ಅಲ್ಪ ವೆಂಬುದನ್ನು ತೋರಿಸಿದರೆಂದು ಸುದ್ದಿ. ಸರಿ, ಗಾಯಗೊಂಡ ಕೆಲ ಸೈನಿಕರನ್ನೂ, ಹಾಳಾದ ಕೆಲವೇ ವಿಮಾನಗಳನ್ನೂ ಕಂಡ ಈ ಪ್ರತಿನಿಧಿ ಗಳು, ಜರ್ಮನಿಗೆ ಬ್ರಿಟನ್ನು ಅದಾವ ಹೆಚ್ಚಿನ ನಷ್ಟವನ್ನೂ ಮಾಡಿಲ್ಲವೆಂದು ತಿಳಿದುಕೊಂಡು ಹಿಂತಿರುಗುವಾಗ, ತಡೆಯಲಾರದ ಉದ್ವೇಗ ದಿಂದ, ಜರ್ಮನ್ ಹೆಂಗಸೊಬ್ಬಳು ಸತ್ಯ ವನ್ನರುಹಿ ಬಿಟ್ಟಳಾಗಿ ವಾರ್ತೆ.

ಪೆಲೆಸ್ತೈನಿನಲ್ಲಿ ಅಂತಃಕಲಹ ಆಳಿದಿದೆ

ವೈರಿಗಳನ್ನು ವಿರೋಧಿಸುವ ಮಹದಾಸೆ

ಪೆಲೆಸ್ತೈನಿನಲ್ಲಿನ ಅರಬ—ಯಹೂದಿಗಳ ಕಾದಾಟಗಳು ಆಳಿದಿವೆ. ಇವೆರಡು ಪಂಗಡ ಗಳೂ ವೈರಿಗಳನ್ನು ಸದೆಬಡಿಯಲು ಒಟ್ಟಾಗಿವೆ ಎಂದು ಬ್ರಿಟನ್ನು ತಿಳಿಸಿದೆ.

ತಮ್ಮ ನಾಶವನ್ನೇ ಬಗೆದ ಸರ್ವಾಧಿಕಾರಿ ಗಳನ್ನು ಕೊನೆಗೊಳಿಸಲು, ಇದೇ ತಕ್ಕ ಸಮಯ ವೆಂದು ಯಹೂದಿಗಳು ತಿಳಿದು ಒಂದಾಗಿದ್ದಾರೆ. ಲೀಬಿಯಾದಲ್ಲಿ ಮುಸಲ್ಮಾನರ ಮೇಲೆ ನಾನಾ ಬಗೆ ಯ ಹಿಂಸೆ ನಡೆಸಿದ ಇಟೆಲಿಯ ಮೇಲಿನ ಸೇಡು ತೀರಿಸಲು, ಅರಬರು ಸೊಂಟಕಟ್ಟಿದ್ದಾರೆ. ಇದ ರಿಂದಾಗಿ ಸರ್ವಾಧಿಕಾರಿಗಳ ಅದಾವ ಪ್ರಚಾ ರವೂ ಇಲ್ಲಿ ಸಾಗದಾಗಿದೆ.

ಅರಬರು ಬ್ರಿಟಿಷರ ವಿಜಯಕ್ಕಾಗಿ ಪ್ರಾರ್ಥ ನೆಯನ್ನು ನಡೆಸುತ್ತಿದ್ದಾರೆ. ಕಾರಣ, ಸರ್ವಾಧಿ ಕಾರಿಗಳ ನಾಶದಿಂದ, ಯಹೂದಿಯರಿಗೆ ಯು ರೋಪಿನಲ್ಲೆ ಎಡೆ ದೊರೆತು, ಪೆಲೆ[illegible] ಅರಬ ರಿಗೇ ಬರಬಹುದೆಂದು ಅವರ[illegible]ದರೆ, ಫ್ರೆಂಚರ ವರ್ತನೆ ಮಾತ್ರ ಇವರ ಧೈರ್ಯವನ್ನು ಕೆಡಿಸ ತ್ತಿದೆ

ಹೌದಾದ ನುಡಿಗಳು

ಕೆಲವು ರಾಜಕಾರಣಿಗಳ ಅಸಮಾನ ಆಸ್ತಿ ಎಂದರೆ ಸುಳ್ಳಾಡುವ ಜಾಣ್ಮೆ

೦ ೦ ೦ ೦ ೦

ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ ಮನುಷ್ಯನು ಬಾಯಾರಿಕೆ ಆಗ ದಿದ್ದರೂ ಆದರೂ ಕುಡಿಯುತ್ತಾನೆ. ಪ್ರಾಣಿಗಳು ಬಾಯಾರಿಕೆಯಾಗದೆ ಕುಡಿಯುವುದಿಲ್ಲ.

೦ ೦ ೦ ೦ ೦

ನಮ್ಮ ಕೀರ್ತಿ, ನಮ್ಮ ಬೆನ್ನ ಹಿಂದೆ ಮುಂದಿ ಹೇಳುವ ವಿಚಾರದ ಮೇಲೆ ನಿಂತಿದೆ.

ನಗುವಿನ ಗೆಲುವು

ಈ ಸೌಂದರ್ಯದ ಸೊಬಗು ನಿಮಗೆಲ್ಲಿ ಲಭಿಸು ವುದು? ವೀರ್ಯಶಕ್ತಿಯಿಂದಲ್ಲದೆ ಮತ್ತೆಲ್ಲಿಯದು? ತಿಂದ ಆಹಾರಪದಾರ್ಥಗಳನ್ನು ಜೀರ್ಣಿಸಿಕೊಳ್ಳಬೇಕಾ ದರೂ ನರಗಳ ಶಕ್ತಿ ಅತ್ಯಾವಶ್ಯಕ. ಅಂಥಾ ಚೇತನ ವನ್ನು ಕೊಟ್ಟು ಆರೋಗ್ಯವನ್ನು ಪೋಷಿಸುವುದರಲ್ಲಿ 'ಲಸ್ಟರ್' ಟಾನಿಕ್ ಅದ್ವಿತೀಯವಾದದ್ದು. ಇದನ್ನುಪ ಯೋಗಿಸುವುದರ ಮೂಲಕ ವಾತ, ಪಿತ್ಥ, ಅಜೀರ್ಣ, ಮಲಬದ್ಧತೆ, ಗೂರ್ಲು, ಉಬ್ಬಸ, ಜ್ವರಗಡ್ಡೆ, ಎದೆಬಡಿತ, ನಿಶ್ಯಕ್ತಿ, ರಕ್ತದೋಷದಿಂದುಂಟಾದ ಚರ್ಮವ್ಯಾಧಿ, ಬಿಳಿಚಿಕೊಳ್ಳುವಿಕೆ, ಮೈದುಳಿನ ಅಶಕ್ತತೆ, ಇಂದ್ರಿಯ ಶಿಥಿಲತೆ, ನಾಶವಾಗಿ ಶರೀರಕ್ಕೆ ಕಾಂತಿ ಬರುವುದು. ಔಷಧದ ಗುಣವನ್ನು ನಾವು ಹೆಚ್ಚಿಗೆ ಶ್ಲಾಘಿಸಬೇಕಾದ ಆವಶ್ಯಕವಿಲ್ಲ. ಅದರ ಪ್ರತಿಭೆಯನ್ನು ತನ್ನಷ್ಟಕ್ಕೆ ತಾನೆ ತೋರ್ಪಡಿಸುವುದು. ದೊಡ್ಡ ಸೀಸೆ ರೂ. ೩—೮—೦ ಮಿಡಿಯಂ ರೂ. ೨—೦—೦. ಚಿಕ್ಕ ಸೀಸೆ ರೂ. ೧—೧—೦

ಲಸ್ಟರ್

ಲಸ್ಟರ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ,
ಡಿಪೋ: ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಏಜೆಂಟ್ಸ್:—ಶ್ರೀನಿವಾಸ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್.
Sole Agents:—Basel Mission Press, Mangalore.
ಸಬ್ ಏಜೆಂಟ್ಸ್:—Messrs. ಉಡುಪಿ ಮಿಷನ್ ಷಾಪ್, ಸಂತೆಕಟ್ಟೆ, ಉಡುಪಿ.
Messrs. ಭಕ್ತಾ ಅಂಡ್ ಬ್ರದರ್ಸ್, ಕಾಸರಗೋಡು.
ವಿ. ವಿ. ಶೆಣೈ, ಕಾರ್ಕಳ.
ಬಿ. ಗೋವಿಂದ ಪಾಂಡುರಂಗ ಭಂಡಾರಿ, ಪುತ್ತೂರು.

THE PIE-MONEY BANK, LTD.,
MAIDAN ROAD, MANGALORE.

Undertakes all kinds of Banking Business.
Current account at 2½% per annum.
Savings Bank Deposits at 4½% per annum.
FIXED DEPOSITS.
For 2 years 5%· 1 year 4½%· For 6 months 4%· 3 months 3½%·
Auction Chit Funds ranging from Rs. 100—5,000 run regularly on systematic lines.
Unique Banking facilities to Businessmen and interested Public.
Apply for particulars:— K. R. GURU, *Managing Director.*



ಈ ತಿಂಗಳುವರಿಗೂ ಅರ್ಧ ಕ್ರಯ
Original Price Rs. 7-8-0. Sale Price Rs. 3-12-0.
GRAND CLEARANCE SALE
Pretty Shape and design.
ಮುಂಚಿನ ಕ್ರಯ ರೂ. 7-8-0. ಈಗಿನ ಕ್ರಯ ರೂ. 3-12-0.
ಭಂಗಾರದ ಲೀವರ್ ರಿಸ್ಟ್ ವಾಚ್
ಎಂಬ ಇಂಗ್ಲೀಷ್ ನಮೂನೆ ಕೈ ಗಡಿಯಾರ.
ಸ್ವಿಸ್ ಮೇಕರ್. ಲೀವರ್ ಮೂವ್‌ಮೆಂಟ್ಸ್. ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ನೋಡುವುದಕ್ಕೆ ಆಂದವಾಗಿಯೂ ಇರುತ್ತೆ. ಇದನ್ನು ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳಲು ಬಹು ಚೆನ್ನಾಗಿದೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸಿರುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ೫ ವರ್ಷ ಗ್ಯಾರಂಟಿ. ನಂ. ೪೪ ಕಡಮೆ ಕ್ರಯ ವಾಚ್ 1ಕ್ಕೆ ರೂ. 3-12-0. ಜಾಗ್ರತೆ ತರಿಸಿದವರಿಗೆ ಮಾತ್ರ ದೊರೆಯುತ್ತೆ. ವೆಸ್ಟರ್ನ್ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. 68, ಮದರಾಸ್.
Western Swiss Watch Co., Direct Importers, Post Box No. 68, Madras.

ನೂತನ ಪಾಠಪಟ್ಟಗನುಸಾರವಾಗಿ ಪ್ರಕಟಿಸಲ್ಪಟ್ಟ ಈ ಕೆಳಗಿನ ನಮ್ಮ ಹೊಸ ಪುಸ್ತಕಗಳು ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕಾಗಿ ಮಂಜೂರಾತಿಯನ್ನು ಹೊಂದಿವೆ.
(Vide consolidated list of approved books, Fort St George Gazette, dated 30-4-1940, pages 59, 60, 62, 68, 70, 71, 86, 87, 88, 92 & 155).

(1) ಹೊಸ ಕನ್ನಡ ಪಾಠಮಾಲೆ—1ರಿಂದ 5ನೇ ದರ್ಜೆಯ ವರೆಗೆ.
(2) ನೂತನ ಬಾಲ ಗಣಿತ—3ನೇ ದರ್ಜೆಯಿಂದ 8ನೇ ದರ್ಜೆಯ ವರೆಗೆ.
(3) ಭಾರತದ ಇತಿಹಾಸ—6ನೇ, 7ನೇ ಮತ್ತು 8ನೇ ದರ್ಜೆಗಳಿಗೆ
(4) ಡಿ ಡಿ I, II, III, IV ಮತ್ತು V ಫಾರ್ಮುಗಳಿಗೆ.
(5) ನೂತನ ಸಾಮಾನ್ಯ ಗಣಿತ—IV ಫಾರ್ಮಿಗೆ.

ಹೊಸ ಕನ್ನಡ ಪಾಠಮಾಲೆಯ 6, 7 ಮತ್ತು 8ನೇ ದರ್ಜೆಯ ಪುಸ್ತಕಗಳು ಅಚ್ಚಿನಲ್ಲಿವೆ.
ಹೆಚ್ಚಿನ ಮಾಹಿತಿಗೆ ನಮಗೆ ಬರೆದುಕೊಳ್ಳಿರಿ:—
ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು.

A SURE CURE FOR COLDS AND RHEUMATIC PAINS

ತಲೆನೋವು, ಶೀತ, ವಾತ, ಉಳುಕು ಮತ್ತು ವಾತದ ಬೇನೆಗಳಿಂದ ವಾಸಿಹೊಂದಲು ಈ ಸುಗಂಧ, ಬೇನೆಹಾರಿ ಮುಲಾಮನ್ನು ಹಚ್ಚಿರಿ. ಸಿಪ್ರಸ್ ಮುಲಾಮಿನ ವಿಷಹಾರಕ ಗಂಧವು ಶೀತದಿಂದ ಕಟ್ಟಿಹೋದ ನಾಸಿಕ ದ್ವಾರವನ್ನು ಶೀಘ್ರದಲ್ಲಿ ಸರಿಪಡಿಸಿ ಉಪಶಮನವೀವುದು. ಎಲ್ಲಾ ಕೆಮಿಸ್ಟರಲ್ಲೂ ದೊರೆಯುವುದು. ಬಾಟ್ಲಿಯೊಂದರ ಬೆಲೆ ರೂ. 1. ಅಂಚೆ ಗಾಗಿ ಎರಡಾಣೆ ಅಂಚೆ ಚೀಟಿ ಕಳುಹಿದಲ್ಲಿ ಪುಕ್ಕಟೆ ಮಾದರಿ ಸೀಸೆ ಕಳುಹಲಾಗುತ್ತೀತು.

ಶೀತವನ್ನು ಅಲಕ್ಷಿಸದಿರಿ. ಶೀಘ್ರ ಉಪಶಮನಕ್ಕೆ ಸಿಪ್ರಸ್ ಮುಲಾಮನ್ನು ಎದೆ ಮತ್ತು ಗಂಟಲುಗಳಿಗೆ ತಿಕ್ಕಿಕೊಳ್ಳಿರಿ.

ODMAN'S
CYPRESS SALVE
(*Pain Balm*) REGD
ಅಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂ.,
825, ಜುಮ್ಮಾ ಮಸೀದಿ, ಬೊಂಬಾಯಿ, 2.

THE BANK OF M[illegible]GALORE, LIMITED,
M[illegible]E.

Head Office:-**Mangalore.** **[illegible]hes:-Moodabidri & Padubidri.**

Recu[illegible] Deposit

1. The minimum deposit payabl[illegible] only ONE ANNA.

2. Deposits collected at your door.

3. Every anna paid daily will grow, with interest, to Rs. **185/-**. Thus a depositor who pays in a sum of Re. 1/- daily will get at the end of seven years **2,960/-**.

[illegible]ayment can even be discontinued and again [illegible], if and when convenient.

5. No forfeiture of interest for such discontinued period.

6. Maximum loan facilities on security of these deposits.

For further particulars please apply to our Head Office or Branches.

ಕೆ ಸ್ಟೊ ಫೇ ನ್ ಟೆ

ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ–ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು, ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಆದರೆ ಮೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ. ದಕ್ಷಿಣ ಹಿಂದೂಸ್ಥಾನದ ವಿಜಂಟರು:–

ಮೆಸರ್ಸ್ ಶಿವರಾಮ್ ಎಂಡ್ ಸ್ವಾಮಿ,
154, ನೈನಿಯಪ್ಪ ನಾಯಕ್ ಸ್ಟ್ರೀಟ್, ಪಿ. ಟಿ. ಮದ್ರಾಸು.

CASTOPHENE
CASTOR OIL CHOCOLATES

Diamonds! **Diamonds!**

Best Brilliancy!

K. R. K. SHET,

Opp. Government College,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ಸ್ಟ್ರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಗೆ ಕಡಿಮೆಯಾಗಿ ದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ಯೋಗ್ಯ ದರದಲ್ಲಿ ಉತ್ತಮ **ದೇವಪೂಜಾ ಸಾಮಗ್ರಿ**

ಅಪೇಕ್ಷಿಸುವವರು ಇಂದೇ ನನ್ನ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ವಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. UDIPI, S. K.

(ರಿಜಿಸ್ಟರ್ಡ್) **ಬಾಲಾರ್ಕಮಧು** ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ, ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ 0–12–0. ಟಿ. ಖ. 0–9–0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ–

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, (ಮೈಸೂರು ಸೀಮೆ).

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ಪರತ.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅನಿಯಮಿತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವುದಿಲ್ಲೆಂದು ತನೇ ಲಗ್ನವಾಗುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು: ಮಾ। ರಾ। ಎ. ಎಮ್. ಇನ್ಸ್‌ಪೆಕ್ಟರ್ ಬೆಳಗಾಂವ–'ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳೂ ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು.' ೨೧ ದಿವಸದ ಡಬ್ಬಿಯು ಕಿ. ರೂ. ೩. ಟಿ. ಖ. ಆಣೆ ೮.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಆಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನೂ ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ವಿಚಾರ ಮಾಡಿ ಔಷಧಬೇಡಿರಿ. ಮುಖ್ಯ ಸರ್ಟಿಫಿಕೇಟು–ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವಾಮಾಹಿನು, ತಾಜೇ–ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವುದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ಕಿಮ್ಮತ್ತು ರೂ. ೪; ವಿ. ಪಿ. ಆಣೆ ೮.

ವಿಳಾಸ:—**ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)**

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ—ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ (ಟಪ್ಪಾಲು ಖರ್ಚು ಪ್ರತ್ಯೇಕ).

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Edited and Published by B. Vittal Rau at the Kanteerava Office, Maidan North Road, Mangalore. Printed by U. Vittalacharya, Manager at the Dharma Prakash Press, Car Street, Mangalore.